ಮಧುಗಿರಿ ಪರಿಸರದ ದೇವಾಲಯಗಳ ಅಧ್ಯಯನ

(ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ನಿಬಂಧ)

ಸಂಶೋಧಕ

ಸೀತಾರಾಮಬಾಬು ಆರ್.

ಮಾರ್ಗದರ್ಶಕರು

ಡಾ. ಸಿ. ಎಸ್. ವಾಸುದೇವನ್

ಸಹ ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ-೫೮೩ ೨೭೬

೨೦೦೯-೧೦

798

ಪರಾಮರ್ಶೆಗೆ ಮಾತ್ರ

798

"ಸಿರಿಗನ್ನಡ" ಗ್ರಂಥಾಲಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

Shri Mahantesh
D.T.P. & BOOK BINDING
Near SBI K.C.D.Road, Dharwad

798

798

AKSHARA GRANTHALAYA
ACC.NO. 048607

8P4

798

798

ಮಧುಗಿರಿ ಪರಿಸರದ ದೇವಾಲಯಗಳ ಅಧ್ಯಯನ

(ಎಂ.ಫಿಲ್. ಪದವಿಯ ಆಂಶಿಕ ಅವಶ್ಯಕತೆಗಾಗಿ ಕನ್ನಡ ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ ನಿಬಂಧ)

ಸಂಶೋಧಕ

ಸೀತಾರಾಮ್‌ಬಾಬು ಆರ್.

Reg. No - KUAH/00435

ಮಾರ್ಗದರ್ಶಕರು

ಡಾ. ಸಿ. ಎಸ್. ವಾಸುದೇವನ್

ಸಹ ಪ್ರಾಧ್ಯಾಪಕರು

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಸಮಾಜವಿಜ್ಞಾನಗಳ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ–೫೮೩ ೨೭೬

೨೦೦೯–೧೦

ಮಾರ್ಗದರ್ಶಕರ ಪ್ರಮಾಣ ಪತ್ರ

ಮಧುಗಿರಿ ಪರಿಸರದ ದೇವಾಲಯಗಳ ಅಧ್ಯಯನ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್. ಪದವಿಗಾಗಿ ಸೀತಾರಾಮ್‌ಬಾಬು ಆರ್. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸಲಾಗಿದೆ.

ಸ್ಥಳ: ವಿದ್ಯಾರಣ್ಯ

ದಿನಾಂಕ: 15.9.2010

C. S. Vasudevan

ಡಾ. ಸಿ.ಎಸ್.ವಾಸುದೇವನ್
ಸಹ ಪ್ರಾಧ್ಯಾಪಕರು ಹಾಗೂ ಮಾರ್ಗದರ್ಶಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

ಪರಿವಿಡಿ

ಅಧ್ಯಾಯ ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ವಿಧಾನ

ಅಧ್ಯಾಯ ೧

ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ ಮತ್ತು ವಿಧಾನ

ಪ್ರಸ್ತಾವನೆ:

ದೇವಾಲಯಗಳು ಭಾರತದಂತಹ ಸಾಂಪ್ರದಾಯಿಕ ದೇಶದಲ್ಲಿ ಮಾನವನ ಸಾಂಸ್ಕೃತಿಕ ಕೇಂದ್ರಗಳಾಗಿ ಮಹತ್ವ ಪಡೆದುಕೊಂಡಿವೆ. ದೇವಾಲಯ ಹೆಸರೇ ಸೂಚಿಸುವಂತೆ ದೇವರ ವಾಸಕ್ಕಾಗಿ ನಿರ್ಮಿಸಿದ ಪವಿತ್ರವಾದ ಸ್ಥಳ. ಪ್ರಾಚೀನ ಕಾಲದಿಂದಲೂ ಮಾನವನು ತಾನು ವಾಸಮಾಡುವ ಪರಿಸರದಲ್ಲಿ (ನಿಸರ್ಗದಲ್ಲಿ) ಕಣ್ಣಿಗೆ ಕಾಣಿಸಿದ ಒಂದು ಶಕ್ತಿ ಇದೆ ಎಂದು ಅರಿತ. ಆ ಶಕ್ತಿಗೆ ಮೂರ್ತಿರೂಪ ನೀಡಿ ಪೂಜಿಸಲು ಆರಂಭಿಸಿದನು.

ಮಾನವನು ಪ್ರಕೃತಿಯ ಅನನ್ಯ ಶಕ್ತಿಯನ್ನು ಜಯಿಸಲಾಗದೇ ಇರುವಂತಹ ಸ್ಥಿತಿಯಲ್ಲಿ ತನ್ನ ನೆಮ್ಮದಿಯ ಜೀವನಕ್ಕೆ ಪೂರಕವಾಗಿ ಕಂಡುಕೊಂಡಂತಹ ಮಾರ್ಗವೇ ದೇವತಾರಾಧನೆ. ಭೂಮಿಯ ಮೇಲೆ ನಿರ್ಮಾಣವಾಗಿರುವ ಕಟ್ಟಡಗಳನ್ನು, ದೇಗುಲಗಳನ್ನು ಮೂರ್ತಿ ಪ್ರತಿಮೆಯ ರಕ್ಷಣೆಗಾಗಿ ವಾಸ್ತುವನ್ನು ಅನುಸರಿಸಿ ಆಲಯಗಳನ್ನು ನಿರ್ಮಿಸಿದನು. ಹೀಗೆ ದೇವರುಗಳಿಗಾಗಿ ನಿರ್ಮಿಸಿದ ಆಲಯಗಳು ದೇವಾಲಯಗಳೆಂದು ನಾಮಾಂಕಿತಗೊಂಡಿವೆ.

ಇಂತಹ ದೇವಾಲಯಗಳು ಜನರನ್ನು ಸಂಸ್ಕೃತಿ ಮತ್ತು ಸನ್ಮಾರ್ಗದ ಕಡೆಗೆ ತಿರುಗಿಸಲು ಕಾರಣವಾಗುತ್ತದೆ ಎಂದು ಹೇಳಬಹುದು. ಭಯ, ಭಕ್ತಿ ಮತ್ತು ಶ್ರದ್ಧೆಯನ್ನು ಈ ದೇವಾಲಯಗಳ ಮೂಲಕ ಪಡೆಯಬಹುದಾಗಿದೆ.

ಮಾನವನು ತನ್ನ ಬದುಕಿಗಾಗಿ ಪ್ರಕೃತಿಯ ಜೊತೆಗೆ ಸಮರವನ್ನು ನಡೆಸಬೇಕಾಗುತ್ತದೆ. ಪ್ರಕೃತಿಯ ಎಲ್ಲ ವಸ್ತುಗಳೂ ಅವನಿಗೆ ಪೂಜನೀಯವಾದವು. ಆದ್ದರಿಂದಲೇ ಗಿಡ, ಮರ, ನದಿ ಇತ್ಯಾದಿಗಳು ಅವನಿಗೆ ಪೂಜನೀಯವಾಗಿವೆ. ಪ್ರಕೃತಿಯಲ್ಲಿ ಸಂಭವಿಸುವ ವಿಕೋಪಗಳಿಂದ ರಕ್ಷಿಸಿಕೊಳ್ಳಲು ದೇವರನ್ನು ಪೂಜಿಸುತ್ತಾನೆ. ಹೀಗೆ ದೇವಾಲಯವು ಒಂದು ಪವಿತ್ರ ಸ್ಥಾನವಾಗಿ ಮಾರ್ಪಟ್ಟಿತು. ಸ್ಥಳೀಯ ಚರಿತ್ರೆಯಲ್ಲಿ ದೇವಾಲಯಗಳ ಕಲೆ ಮತ್ತು ವಾಸ್ತುಶಿಲ್ಪ, ಮೂರ್ತಿಶಿಲ್ಪ ಹಾಗೂ ಶಾಸನಗಳಲ್ಲಿ ದೇವಾಲಯಗಳಿಗೆ ಸಂಬಂಧಿಸಿದ ವಿಚಾರಗಳನ್ನು ಗುರುತಿಸಿ ಅವುಗಳನ್ನು ವಿಶ್ಲೇಷಿಸಿದಾಗ ಆ ಪರಿಸರದ ಚರಿತ್ರೆ ಹಾಗೂ ಸಂಸ್ಕೃತಿಯನ್ನು ಕಟ್ಟಿದಂತಾಗುವುದು. ಒಟ್ಟಾರೆಯಾಗಿ ಸ್ಥಳೀಯ ಚರಿತ್ರೆಯ ರಚನೆಯಲ್ಲಿ ಅಲ್ಲಿನ ಸ್ಮಾರಕಗಳು ಅದರಲ್ಲೂ ಅಸಂಖ್ಯಾತ ದೇವಾಲಯಗಳು ಅಧ್ಯಯನ ಮಾಡಲಾಗುತ್ತದೆ.

ದೇವಾಲಯಗಳ ಪ್ರಾಚೀನತೆಯತ್ತ ಗಮನ ಹರಿಸಿದಾಗ ಕ್ರಿಸ್ತಶಕ ಆರಂಭ ಕಾಲದಲ್ಲಿ ಮರ, ಇಟ್ಟಿಗೆಗಳಿಂದ ದೇವಾಲಯಗಳು ಇದ್ದವೆಂದು ಪ್ರಾಚ್ಯಾವಶೇಷಗಳಿಂದ ತಿಳಿದು ಬರುತ್ತದೆ. ದೇವಾಲಯ ನಿರ್ಮಾಣದಲ್ಲಿ ಇಟ್ಟಿಗೆಗಿಂತ ಶಿಲೆಯ ದೇವಾಲಯಗಳು ಶ್ರೇಷ್ಠ ಮತ್ತು ಬಾಳಿಕೆ ಬರುವಂತಹವುಗಳು ಆಗಿವೆ. ಆದ್ದರಿಂದ ಅನೇಕ ಸಾಮ್ರಾಜ್ಯಗಳ ಸಾಮ್ರಾಟರು ತಾವು ಅಧಿಕಾರಕ್ಕೆ ಬಂದ ನಂತರ ಅವರ ಮೊದಲ ಕಾರ್ಯವೆಂದರೆ ದೇವಾಲಯಗಳ ನಿರ್ಮಾಣ ಹಾಗೂ ಇದ್ದ ದೇವಾಲಯಗಳ ಜೀರ್ಣೋದ್ಧಾರ ಮಾಡುವುದಾಗಿತ್ತು. ತಮ್ಮ ಪರಿಸರದಲ್ಲಿ ದೊರೆಯುವ ಶಿಲೆಯನ್ನು ಬಳಸಿ ದೇವಾಲಯಗಳನ್ನು ನಿರ್ಮಿಸಿದ್ದಾರೆ.

ಧರ್ಮ ಬೆಳೆದಂತೆ ದೇವಾಲಯಗಳು ಬೆಳೆದಿವೆಯೆಂಬುದನ್ನು ಅಲ್ಲಗಳೆಯಲಾಗದು, ಭಾರತೀಯ ಪರಿಸರದಲ್ಲಿ ಧರ್ಮ ಮತ್ತು ದೇವಾಲಯಗಳ ಬೆಳವಣಿಗೆಯ ಚರಿತ್ರೆಯನ್ನು ಗಮನಿಸಿದಾಗ ಈ ಅಂಶ ಸ್ಪಷ್ಟವಾಗುತ್ತದೆ. ಈ ಹಿನ್ನೆಯಲ್ಲಿ ಬೆಳೆದ ಶೈವ, ವೈಷ್ಣವ, ಜೈನ ಹಾಗೂ ಬೌದ್ಧ ಧರ್ಮಗಳಿಗೆ ಭದ್ರವಾದ ನೆಲೆಗಳು ಎಂಬಂತೆ ಆಲಯಗಳು ನಿರ್ಮಾಣವಾದವು. ದೇವಾಲಯಗಳು ಒಂದು ನಾಡಿನ ಸಂಸ್ಕೃತಿಯನ್ನು ಸಹ ತಿಳಿಸುವ ದೇವಾಲಯಗಳು ಪುರಾತನ ಕಾಲದ ಚರಿತ್ರೆ ಹಾಗೂ ಸಂಸ್ಕೃತಿಯನ್ನು ಕಟ್ಟುವ ಬಹು ಮುಖ್ಯವಾದ ಆಕರ ಸಂಪತ್ತಾಗಿರುತ್ತದೆ. ದೇವಾಲಯದ ಕಲೆಯನ್ನು ಉನ್ನತ ಮಟ್ಟದಲ್ಲಿ ಬೆಳೆಸಿರುವುದಕ್ಕೆ, ಶಾಸನಗಳು, ಗ್ರಂಥಗಳು, ನಾಣ್ಯಗಳು, ಹಸ್ತಪ್ರತಿಗಳು, ಆಧಾರವನ್ನು ಒದಗಿಸುತ್ತವೆ. ಸಂಗೀತ, ನೃತ್ಯ, ಮುಂತಾದ ಕಲೆಗಳು ಈ ದೇವಾಲಯಗಳಿಂದ ಬೆಳೆದು ಬಂದವು ಹಾಗೆಯೇ ದೇವಾಲಯದ ವಾಸ್ತುಶಿಲ್ಪ, ಮೂರ್ತಿ ಶಿಲ್ಪಗಳು ಯಾವ ಯಾವ ಕಾಲ ಘಟ್ಟದಲ್ಲಿ ಯಾವ ರೀತಿಯ ಬದಲಾವಣೆಗಳನ್ನು ಹೊಂದಿದವು ಎಂಬುದಕ್ಕೆ ಸಾಕ್ಷಿಭೂತವಾಗಿನಿಂತಿವೆ.

ದೇವಾಲಯ ಎಂದರೆ, ದೇವರಿಗಾಗಿ ನಿರ್ಮಿಸಿದ ಆಲಯವೇ ಆಗಿದೆ. ಪ್ರಾಚೀನ ಕಾಲದಿಂದಲೂ ಮಾನವನು ಮನೆಗಳನ್ನು ನಿರ್ಮಿಸಿಕೊಂಡು ಹೇಗೆ ಜೀವನ ನಿರ್ವಹಿಸುವನೋ ಹಾಗೆಯೇ ದೇವರಿಗೂ ಆಲಯವನ್ನು ನಿರ್ಮಿಸಬೇಕು ಎನ್ನುವ ಉದ್ದೇಶದಿಂದ ದೇವಾಲಯಗಳನ್ನು ನಿರ್ಮಿಸಿದನು.

ಪ್ರಾಚೀನ ಕಾಲದಿಂದಲೂ ದೇವಾಲಯದಲ್ಲಿ ಪರಮಾತ್ಮನನ್ನು ಪೂಜಿಸುವ ಭಕ್ತನ ವಿಶ್ವಾಸ ಶಕ್ತಿಯು ಪರಮಾತ್ಮನ ವಾತ್ಸಲ್ಯವೆಂಬ ಸಮಶಕ್ತಿಯೊಡನೆ ಸೇರಿದಾಗ ಭಕ್ತನಲ್ಲಿ ಒಂದು ಪ್ರಬಲ ಶಕ್ತಿಯು ಉತ್ಪನ್ನವಾಗಿ ಮಾನವನನ್ನು ಉನ್ನತಿಗೇರಿಸುತ್ತದೆ. ಮಾನವ, ದೈವ, ಇಹಪರ, ವಾಸ್ತವಿಕ–ಆದರ್ಶ ಇವುಗಳ ಮಿಲನದ ಸಂಕೇತವೇ ದೇವಾಲಯಗಳು.[೧]

ಲೋಕ ಸಂರಕ್ಷಣೆಗಾಗಿ ಭಗವಂತನು ಭೂಮಿಯಲ್ಲಿ ವಾಸಮಾಡುವ ಸ್ಥಳವಾದ ದೇವಾಲಯವು ಜೀವಾತ್ಮ ಮತ್ತು ಪರಮಾತ್ಮದಲ್ಲಿ ಇರುವ ಆತಂಕವನ್ನು ಬಹುಮಟ್ಟಿಗೆ ಕಡಿಮೆ ಮಾಡುತ್ತದೆ. ಜಗತ್ತಿನ ಸೃಷ್ಟಿಕರ್ತ ಹಾಗೂ ನಿಯಂತ್ರಕನಾದ ದೇವನ ಬಳಿಗೆ ಹೋಗಲು ಸರಿಯಾದ ಮಾರ್ಗವನ್ನು ತೋರಿಸುವಂತೆ ಅವನನ್ನು ಪ್ರಾರ್ಥಿಸುವ ಸ್ಥಳವೂ ದೇವಾಲಯವೇ ಆಗಿದೆ. ಎಂದು ಹೇಳಬಹುದು.[೨] ಚರಿತ್ರೆಯಲ್ಲಿ ಇದುವೆರೆಗೂ ಕೇವಲ ಪ್ರಸಿದ್ಧ ಸಾಮ್ರಾಜ್ಯಗಳ ರಾಜವಂಶಗಳ ಮತ್ತು ರಾಷ್ಟ್ರೀಯ ಚರಿತ್ರೆಯನ್ನೇ ಹೆಚ್ಚಾಗಿ ಅಧ್ಯಯನ ಮಾಡುತ್ತಾ ಬಂದಿದ್ದೇವೆ. ಇದಕ್ಕೇ ಹಲವಾರು ಕಾರಣಗಳಿರಬಹುದು. ಆದರೆ ಕೆಲವು ದಶಕಗಳಿಂದೀಚೆಗೆ ಚರಿತ್ರೆಯ ಅಧ್ಯಯನ ಅಥವಾ ಸಂಶೋಧನೆಯ ದಿಕ್ಕು ಬದಲಾಗಿದೆ. ಇಂದು ಪ್ರಾದೇಶಿಕ ಅಥವಾ ಸ್ಥಳೀಯ ಚರಿತ್ರೆಗೆ ಹೆಚ್ಚು ಮಹತ್ವ ನೀಡಲಾಗುತ್ತಿದೆ. ಸ್ಥಳೀಯ ಚರಿತ್ರೆಯ ಬಗ್ಗೆ ಸೂಕ್ಷ್ಮ ಅಧ್ಯಯನದ ಮೂಲಕ ಸಮಗ್ರ ಅಧ್ಯಯನ ಮಾಡುವಲ್ಲಿ ಹೆಚ್ಚಿನ ಆಸಕ್ತಿ ತೋರಲಾಗುತ್ತಿದೆ.

ಹೊಸ ಹೊಸ ಆಕರಗಳು, ವಿನೂತನ ವಿಧಾನಗಳು, ದೃಷ್ಟಿಕೋನಗಳು ಚರಿತ್ರಕಾರನಿಗೆ ಲಭ್ಯವಾಗಿ ಇತಿಹಾಸ ಬರವಣಿಗೆ ಅನೇಕ ರೀತಿಯಿಂದ ಪ್ರಗತಿಯನ್ನು ಸಾಧಿಸಿದೆ. ಹಿರಿಯ ಇತಿಹಾಸಕಾರರೂ ಯುವ ಸಂಶೋಧಕರು ಹಲವಾರು ಗ್ರಂಥಗಳನ್ನು ಲೇಖನಗಳನ್ನು ಬರೆದು ಪ್ರಾದೇಶಿಕ ಇತಿಹಾಸಕ್ಕೆ ಹೊಸ ಮೆರಗನ್ನು ನೀಡಿದ್ದಾರೆ.[೩]

ಸ್ಥಳೀಯವಾದುದ್ದನ್ನು ಅಥವಾ ಸ್ಥಳೀಯತೆಯನ್ನು 'ದೇಸಿಕರಣ'ವೆಂದು ವ್ಯಾಖ್ಯಾನಿಸುವ ಪ್ರಯತ್ನಗಳು ಕಂಡು ಬರುತ್ತವೆ. ನಮ್ಮನ್ನು ಒಳಗೊಂಡು ನಮ್ಮ ಸುತ್ತಲಿನ ಹಾಗೂ ಇನ್ನೂ ಉಸಿರಾಡುತ್ತಿರುವ ಬದುಕಿನ ವಿವರಗಳುಳ್ಳ ಸ್ಥಳೀಯ ಚರಿತ್ರೆ ವ್ಯಾಪ್ತಿಗೆ ತಂದುಕೊಳ್ಳುವ ಪ್ರಕ್ರಿಯೆಯಲ್ಲಿ ಈ ಬಗೆಯ ಅಧ್ಯಯನದ ಅನನ್ಯತೆಯನ್ನು ಹಿಂದಿನ ಕೆಲವು ದಶಕಗಳಿಂದಲೂ ವಿದ್ವಾಂಸರು

ಗಂಭೀರವಾಗಿ ವಿಮರ್ಶಿಸುವ ಪ್ರಯತ್ನ ನಡೆಸಿರುವುದುಂಟು. ಸ್ಥಳೀಯ ಇತಿಹಾಸವು ಚರಿತ್ರೆಯ ಅಧ್ಯಯನದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಪಡೆದಿದೆ. ಇತಿಹಾಸ ಚರಿತ್ರೆಯ ಅಧ್ಯಯನದಲ್ಲಿ ಒಂದು ವಿಶಿಷ್ಟ ಸ್ಥಾನವನ್ನು ಪಡೆದಿದೆ. ಇತಿಹಾಸ ಶಾಸ್ತ್ರದ ಬೆಳವಣಿಗೆಯ ಪರಿಣಾಮವಾಗಿ ಇತಿಹಾಸಕಾರರಿಂದ ಕಡೆಗಣಿಸಲ್ಪಟ್ಟಿದ್ದ ಸ್ಥಳೀಯ ಇತಿಹಾಸಕ್ಕೆ ಹೆಚ್ಚಿನ ಮಹತ್ವ ದೊರಕಿದೆ.[೪]

ರಾಜಪ್ರಭುತ್ವದ ಆಡಳಿತ ಅವಧಿಯಲ್ಲಿ (ಸಂದರ್ಭದಲ್ಲಿ) ನಿರ್ಮಾಣಗೊಂಡ ಸ್ಮಾರಕಗಳು ಚರಿತ್ರೆಯ ಅಧ್ಯಯನಕ್ಕೆ ಬಹುಮುಖ್ಯ ಆಕರಗಳು ಎನ್ನುವುದರಲ್ಲಿ ಎರಡು ಮಾತಿಲ್ಲ. ಕರ್ನಾಟಕವನ್ನಾಳಿದ ವಿವಿಧ ಅರಸುಮನೆತನಗಳ ಚರಿತ್ರೆಯನ್ನೊಮ್ಮೆ ಅವಲೋಕಿಸಿದಾಗ ಪ್ರಭುತ್ವ ಸ್ಮಾರಕಗಳಿರುವ ನೂರಾರು ಪ್ರದೇಶಗಳು ಕಂಡುಬರುತ್ತವೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಬಾದಾಮಿ, ಬನವಾಸಿ, ತಲಕಾಡು, ಐಹೊಳೆ, ಪಟ್ಟದಕಲ್ಲು, ಎಲ್ಲೋರ, ಎಲಿಫೆಂಟಾ, ಜೋಗೇಶ್ವರಿ, ಸಂಡೂರು, ಲಕ್ಕುಂಡಿ, ಬೇಲೂರು, ಹಳೇಬೀಡು, ಸೋಮನಾಥಪುರ, ಮೈಸೂರು, ಚಿತ್ರದುರ್ಗ, ಹಂಪಿ, ತುಮಕೂರು, ಮುಂತಾದವು. ಕದಂಬರು, ಚಾಲುಕ್ಯರು, ರಾಷ್ಟ್ರಕೂಟರು, ಹೊಯ್ಸಳರು, ವಿಜಯನಗರದ ಅರಸರು ಮುಂತಾದ ಪ್ರಮುಖ ಅರಸು ಮನೆತನಗಳಷ್ಟೇ ಅಲ್ಲದೆ ಅವರ ಸಾಮಂತರು, ಅಧಿಕಾರಿ ವರ್ಗದವರು ಸಹ ಬೃಹತ್ ದೇವಾಲಯಗಳು, ಕೋಟೆಗಳು ಹಾಗೂ ಇನ್ನಿತರ ಸ್ಮಾರಕಗಳನ್ನು ನಿರ್ಮಿಸಿದರು. ಈ ಎಲ್ಲಾ ಸ್ಮಾರಕಗಳು ಪ್ರಭುತ್ವದ ಸ್ಮಾರಕಗಳಾಗಿ ಉಳಿದುಕೊಂಡು ಬಂದು ಅರಸ ಕೇಂದ್ರಿತ ಚರಿತ್ರೆ ನಿರ್ಮಾಣಕ್ಕೆ ಪೂರಕವಾದ ಸಾಮಾಗ್ರಿಗಳನ್ನು ಒದಗಿಸಿಕೊಟ್ಟವು. ಇಂಥ ಸ್ಮಾರಕಗಳಲ್ಲಿ ದೇವಾಲಯಗಳ ಸಂಖ್ಯೆಯೇ ಹೆಚ್ಚಿನವು.[೫]

ಕಲೆ ಮತ್ತು ವಾಸ್ತುಶಿಲ್ಪದ ಹಿನ್ನೆಲೆಯಿಂದ ಕರ್ನಾಟಕದ ಚರಿತ್ರೆಯನ್ನು ನೋಡಿದಾಗ ಆ ಹೆಚ್ಚು ದೇವಾಲಯಗಳು ಕಂಡುಬರುತ್ತವೆ. ಶೈವ, ವೈಷ್ಣವ, ಶಾಕ್ತ, ಕಾವ್ಯದಲ್ಲಿ ಅನೇಕ ಪಂಗಡಗಳಾದ ಪಾಶುಪತ ಮತ್ತು ಕಾಳಮುಖ, ವೈಷ್ಣವ, ದೇವಾಲಯಗಳು, ಹೆಚ್ಚಿನ ಪ್ರಮಾಣದಲ್ಲಿ ನಿರ್ಮಾಣಗೊಂಡವು. ಜೈನ ಮತ್ತು ಭೌದ್ಧ ಧರ್ಮಗಳು ಈ ನಿರ್ಮಾಣ ಕಾರ್ಯದಲ್ಲಿ ಹಿಂದೆ ಬಿದ್ದಿರಲಿಲ್ಲ. ವಾಸ್ತುಶಿಲ್ಪವೆಂದರೆ ಅದು ದೇವಾಲಯಗಳ ನಿರ್ಮಾಣ ಎಂಬ ಅರ್ಥವನ್ನು ಪಡೆದುಕೊಡಿತು. ಹೀಗೆ ದೇವಾಲಯಗಳ ಅಧ್ಯಯನದಿಂದ ಆಯಾ ಪ್ರದೇಶದ ಸ್ಥಳೀಯ ಚರಿತ್ರೆಯಲ್ಲಿ ದೇವಾಲಯಗಳ ಕಲೆ ಮತ್ತು ವಾಸ್ತುಶಿಲ್ಪ. ಮೂರ್ತಿಶಿಲ್ಪ ಹಾಗೂ ಶಾಸನಗಳಲ್ಲಿ ದೇವಾಲಯಗಳಿಗೆ ಸಂಬಂಧಿಸಿದ ವಿಚಾರಗಳನ್ನು ಗುರುತಿಸಿ ಅವುಗಳನ್ನು ವಿಶ್ಲೇಷಿಸಿದಾಗ ಆ ಪರಿಸರದ ಚರಿತ್ರೆ ಹಾಗೂ ಸಂಸ್ಕೃತಿಯನ್ನು ಕಟ್ಟಿದಂತಾಗುವುದು. ಒಟ್ಟಾರೆಯಾಗಿ ಸ್ಥಳೀಯ ಚರಿತ್ರೆಯ ರಚನೆಯಲ್ಲಿ ಅಲ್ಲಿನ ಸ್ಮಾರಕಗಳು ಅದರಲ್ಲೂ ಅಸಂಖ್ಯಾತ ದೇವಾಲಯಗಳು ಬಹುಮುಖ್ಯವಾಗಿವೆ ಎಂದು ಹೇಳಬಹುದು.

ಪ್ರಸ್ತುತ "ಮಧುಗಿರಿ ಪರಿಸರದ ದೇವಾಲಯಗಳ ಅಧ್ಯಯನ" ಎಂಬ ಶೀರ್ಷಿಕೆಯ ಅಡಿಯಲ್ಲಿ ಅಧ್ಯಯನ ಕೈಗೊಂಡು ಮಧುಗಿರಿ ಪರಿಸರದ ಪ್ರಾಚೀನ ದೇವಾಲಯಗಳನ್ನು ಕುರಿತು ಶಾಸ್ತ್ರೀಯವಾಗಿ ಮತ್ತು ವ್ಯವಸ್ಥಿತವಾಗಿ ಅಧ್ಯಯನ ಮಾಡಲು ಪ್ರಯತ್ನಿಸಲಾಗಿದೆ. ಕರ್ನಾಟಕ ಚರಿತ್ರೆ ಹಾಗೂ ಸಾಂಸ್ಕೃತಿಕ ಕ್ಷೇತ್ರದಲ್ಲಿ ವಿಶಿಷ್ಟವಾದ ಸ್ಥಾನವನ್ನು ಪಡೆದಿರುವ ತುಮಕೂರು ಜಿಲ್ಲೆ ಸ್ಥಳೀಯ ಚರಿತ್ರೆಯ ದೃಷ್ಟಿಯಿಂದ ಬಹುಮುಖ್ಯವಾದುದು. ಕಾರಣ ಇಲ್ಲಿನ ಎಲ್ಲಾ ಕ್ಷೇತ್ರಗಳಲ್ಲೂ ಇಲ್ಲಾ ದೃಷ್ಟಿಕೋನಗಳಿಂದಲೂ ಕಿರಿಯ ಹಿರಿಯ ಹಾಗೂ ಯುವ ಸಂಶೋಧಕರಿಂದ ಸಂಶೋಧನೆಗಳು ನಡೆದು ಹೊಸ ಸಂಗತಿಗಳು ಬೆಳಕಿಗೆ ಬರುತ್ತಿವೆ. ಜಿಲ್ಲೆಯಲ್ಲಿ (ತುಮಕೂರು) ಕಂಡುಬರುವ ಅಸಂಖ್ಯಾತ ದೇವಾಲಯಗಳು ಚರಿತ್ರೆಯ ರಚನೆಗೆ ಬಹುಮುಖ್ಯ ಆಕಾರ ಸಂಪತ್ತಾಗಿವೆ ಎನ್ನಬಹುದು. ತುಮಕೂರು ಜಿಲ್ಲೆಯಲ್ಲಿ ಒಟ್ಟು ೧೦ ತಾಲ್ಲೂಕುಗಳಿದ್ದು ಅವುಗಳಲ್ಲಿ ಮಧುಗಿರಿ ತಾಲ್ಲೂಕು ಒಂದಾಗಿದೆ. ಜಿಲ್ಲೆಯ ಪ್ರತಿಯೊಂದು ತಾಲ್ಲೂಕು ಇತಿಹಾಸದ ಕಣಜವೆಂದೇ ಹೇಳಬೇಕು. ಮಧುಗಿರಿ ಪ್ರಾಂತ್ಯದ ಭೌಗೋಳಿಕ ಲಕ್ಷಣ ವಿಶಿಷ್ಟವಾದುದು. ಮಧುಗಿರಿ ತಾಲ್ಲೂಕು ಬಯಲು ಸೀಮೆಯಾಗಿದ್ದು ಜನಜೀವನಕ್ಕೆ ಅತ್ಯಂತ ಉಪಯುಕ್ತವಾಗಿದೆ. ಮಧುಗಿರಿ ತುಮಕೂರು ಜಿಲ್ಲೆಯ ಉಪವಿಭಾಗ ಆಡಳಿತ ಕೇಂದ್ರ ಇದು ತುಮಕೂರಿನಿಂದ ೪೮ ಕಿ.ಮೀ ದೂರದಲ್ಲಿದೆ.

೧.೧ ಅಧ್ಯಯನದ ಉದ್ದೇಶ, ವ್ಯಾಪ್ತಿ ಮತ್ತು ವಿಧಾನ.

೧.೧.೧ ಅಧ್ಯಯನದ ಉದ್ದೇಶ

ಪ್ರಸ್ತುತ ದಿನಗಳಲ್ಲಿ ಸಂಶೋಧನೆಗಳೂ ಹೊಸ ರೂಪ ತಾಳುತ್ತಿವೆ. ಕೇವಲ ರಾಜಕೀಯವಾಗಿ ಗಣ್ಯ ಮನೆತನಗಳ ಬಗ್ಗೆ ನಡೆಯುತ್ತಿದ್ದ ಸಂಶೋಧನೆಗಳು ಕೆಲವು ದಶಕಗಳಿಂದ ಸಾಂಸ್ಕೃತಿಕ, ಪ್ರಾದೇಶಿಕ ಮತ್ತು ಸ್ಥಳೀಯ ಸಂಶೋಧನೆಯತ್ತ ಸಾಗುತ್ತಿವೆ ಅಧ್ಯಯನದ ಉದ್ದೇಶಗಳು ಸಂಶೋಧನಾ ಕೆಲಸಕ್ಕೆ ಒಂದು ಮಾರ್ಗಸೂಚಿಯಂತೆ ಕೆಲಸ ಮಾಡುತ್ತದೆ ಆದ್ದರಿಂದ ಕೆಲವೊಂದು ನಿರ್ದಿಷ್ಟ ಉದ್ದೇಶಗಳನ್ನಿಟ್ಟುಕೊಂಡು ಅಧ್ಯಯನ ಅಥವಾ ಸಂಶೋಧನೆಯನ್ನು ಕೈಗೊಂಡು ಕಾರ್ಯ ನಿರ್ವಹಿಸಿದಾಗ ಅದು ಪರಿಪೂರ್ಣವೆನಿಸುತ್ತದೆ. ಪ್ರಸ್ತುತ ಅಧ್ಯಯನದ ಶೀರ್ಷಿಕೆ " ಮಧುಗಿರಿ ಪರಿಸರದ ದೇವಾಲಯಗಳ ಅಧ್ಯಯನ" ಎಂಬುದಾಗಿದ್ದು, ಅಜ್ಞಾತವಾಗಿರುವ ಮಧುಗಿರಿ ಪರಿಸರದ ಪ್ರಾಚೀನ ದೇವಾಲಯಗಳನ್ನು ಈ ಅಧ್ಯಯನದ ಮೂಲಕ ಬೆಳಕಿಗೆ ತರುವುದು ಇದರ ಮುಖ್ಯ ಉದ್ದೇಶವಾಗಿದೆ. ಅಲ್ಲದೇ ಇಲ್ಲಿನ ದೇವಾಲಯಗಳ ಕಲೆ, ವಾಸ್ತುಶಿಲ್ಪ ಮತ್ತು ಮೂರ್ತಿಶಿಲ್ಪವನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಲಾಗುವುದು. ಈ ದೇವಾಲಯಗಳಿಗೆ ಸಂಬಂಧಿಸಿದ ಶಾಸನಗಳನ್ನು ಪರಾಮರ್ಶಿಸಿ, ಅದಕ್ಕೆ ಪೂರಕವಾಗಿ

ಬಳಸಿಕೊಳ್ಳುವುದು. ಒಟ್ಟಾರೆ ಮಧುಗಿರಿ ಪರಿಸರದ ಪ್ರಾಚೀನ ದೇವಾಲಯಗಳನ್ನು ಕುರಿತು ಒಂದು ಸಮಗ್ರ ಚಿತ್ರಣವನ್ನು ನೀಡುವುದೇ ಪ್ರಸ್ತುತ ಅಧ್ಯಯನದ ಮುಖ್ಯ ಉದ್ದೇಶವಾಗಿದೆ.

೧.೧.೨. ಇದುವರೆಗೂ ನಡೆದ ಅಧ್ಯಯನಗಳ ಸಮೀಕ್ಷೆ

ದೇವಾಲಯಗಳು ಮತ್ತು ಅವುಗಳ ವಾಸ್ತುವಿವರಗಳ ಕುರಿತು ಈವರೆಗೆ ಸಾಕಷ್ಟು ಅಧ್ಯಯನಗಳು ಪಾಶ್ಚಾತ್ಯ ಮತ್ತು ದೇಶಿಯ ವಿದ್ವಾಂಶರಿಂದ ನಡೆದಿವೆ. ಪ್ರಸ್ತುತ 'ಮಧುಗಿರಿ ಪರಿಸರದ ದೇವಾಲಯಗಳ ಅಧ್ಯಯನ' ಎಂಬ ಶೀರ್ಷಿಕೆಯನ್ನು ಅನುಲಕ್ಷಿಸಿ ಹೇಳುವುದಾದರೆ ಈವರೆಗಿನ ಅಧ್ಯಯನಗಳು ಸಂಪಾದಿತ ಕೃತಿಗಳಲ್ಲಿ, ಬಿಡಿ ಲೇಖನಗಳ ರೂಪದಲ್ಲಿ ಹೊರಬಂದಿವೆ. ಎಂ.ಡಿ.ಶ್ರೀನಿವಾಸ್‌ರವರು ಸಂಪಾದಿಸಿರುವ 'ಮಧುಗಿರಿ ಇತಿಹಾಸ' ಎಂಬ ಕೃತಿಯಲ್ಲಿ ಮಧುಗಿರಿ ಚರಿತ್ರೆಯ ಬಗ್ಗೆ ಮಾಹಿತಿ ನೀಡುತ್ತದೆ. 'ಮಧುಗಿರಿ ದೇವಾಲಯಗಳು' ಎಂಬ ಬಿಡಿ ಲೇಖನ ರೂಪದಲ್ಲಿ ಎಂ.ಡಿ.ಶ್ರೀನಿವಾಸ್‌ರವರು ಬರೆದಿದ್ದಾರೆ.

'ಮಹಾನಾಡು ಪ್ರಭುಗಳು' ಎಂಬ ಕೃತಿ ಎಂ.ಎಂ.ಕಲಬುರ್ಗಿ ಪ್ರಧಾನ ಸಂಪಾದಕರ ಕೃತಿಯಾಗಿದ್ದು ಇದರಲ್ಲಿ ಮಧುಗಿರಿ ತಾಲ್ಲೂಕಿನ ಚರಿತ್ರೆ, ಸಾಹಿತ್ಯ, ಕೋಟೆ ಕೊತ್ತಲಗಳು, ರಾಜಕೀಯ ಸಂಬಂಧಗಳು, ಕೆರೆ, ಬಾವಿಗಳು, ಮುಂತಾದ ವಿಷಯಗಳನ್ನು ಕುರಿತು ಹಲವು ಲೇಖನಗಳನ್ನು ಪ್ರಕಟಿಸಿದ್ದಾರೆ.

ನಾನು ಸಮೀಕ್ಷೆ ಮಾಡಿದಂತೆ ಮಧುಗಿರಿ ತಾಲ್ಲೂಕಿನಲ್ಲಿನ ರಾಜಕೀಯ ಚರಿತ್ರೆ, ಜಾನಪದ ಸಾಹಿತ್ಯ, ಐತಿಹಾಸಿಕ ಸ್ಥಳಗಳನ್ನು ಕುರಿತು ಪರಿಚಯಿಸುವ ನಿಟ್ಟಿನಲ್ಲಿ ಅಧ್ಯಯನಗಳೂ ನಡೆದಿವೆಯೆ ಹೊರತು, ಮಧುಗಿರಿ ಪರಿಸರದ ಪ್ರಾಚೀನ ದೇವಾಲಯಗಳು, ಮೂರ್ತಿಶಿಲ್ಪಗಳು, ದೇವಾಲಯಗಳಿಗೆ ಸಂಬಂಧಿಸಿದ ಶಾಸನಗಳು ಮುಂತಾದವುಗಳನ್ನು ಕುರಿತು ಪುರಾತತ್ವೀಯ ಅಧ್ಯಯ, ಶಾಸ್ತ್ರೀಯ ಹಾಗೂ ಶಿಸ್ತುಬದ್ಧ ಅಧ್ಯಯನ ಇದುವರೆಗೂ ನಡೆದಿಲ್ಲವೆಂದೇ ಹೇಳಬಹುದು. ಆದುದರಿಂದ ಪ್ರಸ್ತುತ ಅಧ್ಯಯನದಲ್ಲಿ ಮಧುಗಿರಿ ಪರಿಸರದ ಪ್ರಾಚೀನ ದೇವಾಲಯಗಳನ್ನು ಕುರಿತು ಶಾಸ್ತ್ರೀಯವಾಗಿ ಅಧ್ಯಯನ ಮಾಡಲಾಗಿದೆ.

೧.೧.೩. ಅಧ್ಯಯನದ ವ್ಯಾಪ್ತಿ:

ಯಾವುದೇ ಒಂದು ಸಂಶೋಧನೆಗೆ ಒಂದು ಚೌಕಟ್ಟು ಬಹುಮುಖ್ಯ. ಇದು ಒಂದು ನಿರ್ದಿಷ್ಟ ಹಾಗೂ ಉದ್ದೇಶಪೂರಿತ ಸಂಶೋಧನೆಯ ಯಶಸ್ಸಿಗೆ ಅತ್ಯಗತ್ಯ. ಈ ವ್ಯಾಪ್ತಿಯ ಕ್ರಮ ಬದ್ಧತೆಯಿಂದ ಸ್ಪಷ್ಟವಾದ ಇತಿಹಾಸವನ್ನು ರಚಿಸಲು ಸಾಧ್ಯವಾಗುತ್ತದೆ. ಪ್ರಸ್ತುತ ಅಧ್ಯಯನವು

[illegible]

ಶೀರ್ಷಿಕೆಯನ್ವಯ ಇದರಲ್ಲಿ ಮಧುಗಿರಿ ನಗರವನ್ನು ಒಳಗೊಂಡಂತೆ ಇರುವ ಕಸಬಾ ಹೋಬಳಿಯು ಪ್ರಸ್ತುತ ನನ್ನ ಅಧ್ಯಯನದ ವ್ಯಾಪ್ತಿಯಾಗಿದೆ. ಕಸಬಾ ಹೋಬಳಿಯಲ್ಲಿ ೬೪ ಹಳ್ಳಿಗಳು ಇವೆ.

ಮಧುಗಿರಿ ನಗರ, ಸಿದ್ಧಾಪುರ, ಬಿಜ್ಜಾವಾರ, ಹರಿಹರರೊಪ್ಪ, ತುಂಗೋಟಿ, ವಡೇರಹಳ್ಳಿ ಹಲವು ಗ್ರಾಮಗಳು ನನ್ನ ಅಧ್ಯಯನದ ವ್ಯಾಪ್ತಿಯಲ್ಲಿ ಬರುತ್ತವೆ. ಈ ಪ್ರದೇಶಗಳಲ್ಲಿ (ಗ್ರಾಮಗಳಲ್ಲಿ) ಕಂಡು ಬರುವ ಪ್ರಾಚೀನ ಕಾಲದಿಂದ ವಿಜಯನಗರೋತ್ತರ (ಪಾಳೆಯಗಾರ) ಕಾಲದ ಮಹಾನಾಡು ಪ್ರಭುಗಳ ಕಾಲದವರೆಗಿನ ದೇವಾಲಯಗಳನ್ನು ಕುರಿತು ಅಧ್ಯಯನ ಮಾಡಲಾಗುತ್ತದೆ.

೧.೧.೪.ಅಧ್ಯಯನದ ಸ್ವರೂಪ

ಪ್ರಸ್ತುತ ಈ ಸಂಪ್ರಬಂಧವನ್ನು ಅಧ್ಯಯನದ ಅನುಕೂಲಕ್ಕಾಗಿ ಏಳು ಅಧ್ಯಾಯನಗಳಾಗಿ ವಿಭಾಗಿಸಲಾಗಿದೆ. ಈ ಅಧ್ಯಯನಗಳಲ್ಲಿ ಉಪಶೀರ್ಷಿಕೆಗಳೂ ಇವೆ.

ಮೊದಲನೆ ಅಧ್ಯಾಯನವು ಪ್ರಸ್ತಾವನೆ, ಅಧ್ಯಯನದ ಉದ್ದೇಶ, ಅಧ್ಯಯನದ ಸಮೀಕ್ಷೆ ಅಧ್ಯಯನದ ವ್ಯಾಪ್ತಿ ಮತ್ತು ಅಧ್ಯಯನದ ವಿಧಾನವನ್ನು ಒಳಗೊಂಡಿದ್ದು ಅಧ್ಯಯನದ ಒಟ್ಟಾರೆ ರೂಪರೇಷೆಯನ್ನು ಕುರಿತು ಚರ್ಚಿಸುತ್ತದೆ.

ಎರಡನೆ ಅಧ್ಯಾಯವು ಭೌಗೋಳಿಕ ಹಿನ್ನೆಲೆ ಹಾಗೂ ಚಾರಿತ್ರಿಕ ಹಿನ್ನೆಲೆಯನ್ನು ಒಳಗೊಂಡಿದೆ. ತುಮಕೂರು ಜಿಲ್ಲೆಯ ಬೌಗೋಳಿಕ ಪರಿಸರ, ಮಧುಗಿರಿ ತಾಲ್ಲೂಕಿನ ಭೌಗೋಳಿಕ ಪರಿಸರ, ಈ ಪರಿಸರದಲ್ಲಿ ಕಂಡು ಬಂದಿರುವ ಪ್ರಾಗಿತಿಹಾಸ ಮತ್ತು ವಿವಿಧ ಅರಸು ಮನೆತನಗಳ ಆಳ್ವಿಕೆಯ ಚಾರಿತ್ರಿಕ ಹಿನ್ನೆಲೆಯನ್ನು ಕುರಿತು ಸವಿವರವಾಗಿ ವಿವರಿಸಲಾಗಿದೆ.

ಮೂರನೆಯ ಅಧ್ಯಾಯದಲ್ಲಿ ದೇವಾಲಯಗಳ ಉಗಮ ಮತ್ತು ವಿಕಾಸವನ್ನು ಕುರಿತು ಚರ್ಚಿಸಲಾಗಿದೆ.

ನಾಲ್ಕನೇ ಅಧ್ಯಾಯದಲ್ಲಿ ಮಧುಗಿರಿ ಪರಿಸರದ ದೇವಾಲಯಗಳನ್ನು ಕುರಿತು ಚರ್ಚಿಸಲಾಗಿದೆ. ಆಯ್ಕೆ ಮಾಡಿಕೊಂಡ ವ್ಯಾಪ್ತಿಗೆ ಅನುಗುಣವಾಗಿ ಇಲ್ಲಿ ಕಂಡುಬರುವ ದೇವಾಲಯಗಳನ್ನು ಶೈವ ದೇವಾಲಯಗಳು, ವೈಷ್ಣವ ದೇವಾಲಯಗಳು ಹಾಗೂ ಶಾಕ್ತದೇವಾಲಯಗಳು ಎಂದು ವಿಂಗಡಿಸಿ ಚರ್ಚಿಸಲಾಗಿದೆ. ಇಲ್ಲಿನ ಪ್ರತಿಯೊಂದು ದೇವಾಲಯವನ್ನು ಕುರಿತು ವಿವರವಾದ ಅಧ್ಯಯನ ಮಾಡಲಾಗಿದೆ. ಆಯಾ ಪರಿಸರದ ದೇವಾಲಯಗಳ ಕಲೆ ಮತು ವಾಸ್ತು ಶಿಲ್ಪವನ್ನು ಕುರಿತು ವ್ಯವಸ್ಥಿತವಾಗಿ ಹಾಗೂ ವೈಜ್ಞಾನಿಕವಾಗಿ ವಿಶ್ಲೇಷಿಸಲಾಗಿದೆ.

ಐದನೇ ಅಧ್ಯಾಯದಲ್ಲಿ ಮೂರ್ತಿ ಶಿಲ್ಪಗಳನ್ನು ಕುರಿತು ಚರ್ಚಿಸಲಾಗಿದೆ. ಮಧುಗಿರಿ ಪರಿಸರದ ದೇವಾಲಯಗಳಲ್ಲಿನ ಮೂರ್ತಿಶಿಲ್ಪಗಳು, ಅವುಗಳ ಶೈಲಿ, ಪಂಥ, ಪ್ರತಿಮಾ ಲಕ್ಷಣ ಮುಂತಾದ ಅಂಶಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ.

ಆರನೆಯ ಅಧ್ಯಾಯವು ದೇವಾಲಯಗಳಿಗೆ ಸಂಬಂಧಿಸಿದ ಶಾಸನಗಳನ್ನು ಕುರಿತು ಅಧ್ಯಯನ ಮಾಡಲಾಗಿದೆ. ಇಲ್ಲಿನ ಶಾಸನಗಳು ದೇವಾಲಯಗಳಿಗೆ ಸಂಬಂಧಿಸಿದಂತೆ, ಯಾವ ವಿಚಾರಗಳನ್ನು ಕುರಿತು ಹೇಳುತ್ತವೆ ಎಂಬುದನ್ನು ವಿವರವಾಗಿ ಚರ್ಚಿಸಲಾಗಿದೆ. ಒಟ್ಟಾರೆ ಈ ಅಧ್ಯಾಯದಲ್ಲಿ ಈಗಾಗಲೆ ಪ್ರಕಟಗೊಂಡ ಶಾಸನಗಳಿಂದ ದೇವಾಲಯಗಳಿಗೆ ಸಂಬಂಧಿಸಿದ ಹಲವು ಸಂಗತಿಗಳನ್ನು ವಿಶ್ಲೇಷಿಸಲಾಗಿದೆ.

ಏಳನೆಯ ಅಧ್ಯಾಯವು ಸಮರೂಪವಾಗಿದ್ದು ಇದು ಇಡೀ ಅಧ್ಯಯನದಲ್ಲಿ ಕಂಡುಕೊಂಡ ಒಟ್ಟಾರೆ ಸಂಶೋಧನೆಯ ಫಲಿತಾಂಶವನ್ನು ಒಳಗೊಂಡಿದೆ. ಅದರೊಂದಿಗೆ ಇಡೀ ಅಧ್ಯಾಯಗಳ ಸಂಕ್ಷಿಪ್ತ ರೂಪವನ್ನು ಸಹ ಇಲ್ಲಿ ಕಾಣಬಹುದು.

ಪ್ರಸ್ತುತ ಅಧ್ಯಯನಕ್ಕೆ ಬಳಸಿಕೊಂಡ ಕೃತಿಗಳು, ಲೇಖನಗಳು, ಶಾಸನ ಸಂಪುಟಗಳು, ಅಪ್ರಕಟಿತ ಸಂಶೋಧನಾ ಪ್ರಬಂಧಗಳು ಮುಂತಾದವುಗಳ ವಿವರವನ್ನು ಗ್ರಂಥಋಣದಲ್ಲಿ ನೀಡಲಾಗಿದೆ. ದೇವಾಲಯಗಳಿಗೆ ಸಂಬಂಧಿಸಿದ ಛಾಯಚಿತ್ರಗಳು, ತಳನಕ್ಷೆಗಳನ್ನು ಅನುಬಂಧದಲ್ಲಿ ಅಳವಡಿಸಲಾಗಿದೆ.

೧.೧.೫. ಅಧ್ಯಯನದ ವಿಧಾನ

ಸಂಶೋಧನೆಗೆ ಅಧ್ಯಯನ ಕ್ರಮ ಅತಿಮುಖ್ಯ. ಅಧ್ಯಯನವು ಯಾವುದೆ ಅಡೆತಡೆಗಳಿಲ್ಲದೆ ಸುಸೂತ್ರವಾಗಿ ಮುನ್ನಡೆಯಲು ಕ್ರಮಬದ್ಧವಾದ ಅಧ್ಯಯನದ ವಿಧಾನ ಮುಖ್ಯ. ಪ್ರಸ್ತುತ ಅಧ್ಯಯನದ ವಿಧಾನವು ಬಹುತೇಕವಾಗಿ ಕ್ಷೇತ್ರಕಾರ್ಯ ಆಧಾರಿತ ವಿಧಾನವಾಗಿ ಈ ಅಧ್ಯಯನದಲ್ಲಿ ಮಧುಗಿರಿ ತಾಲ್ಲೂಕಿನ ಕಸಬಾ ಹೋಬಳಿಯ ಗ್ರಾಮವಾರು ಕ್ಷೇತ್ರಕಾರ್ಯ ಮಾಡುವುದರ ಮೂಲಕ ಅಲ್ಲಿನ ಪ್ರಾಚೀನ ದೇವಾಲಯಗಳನ್ನು ದಾಖಲೀಕರಣ ಮಾಡಿಕೊಳ್ಳಲಾಗಿದೆ. ಪ್ರತಿ ದೇವಾಲಯದ ಸ್ಥಳ ನಿರ್ದೇಶನದೊಂದಿಗೆ, ಅದು ಇರುವ ಗ್ರಾಮ, ದೇವಾಲಯದ ಅಭಿಮುಖ, ದೇವಾಲಯದ ಪಂಥ, ದೇವಾಲಯದ ನಿರ್ಮಾಣಕ್ಕೆ ಬಳಸಿರುವ ವಸ್ತು, ಅದರ ನಿರ್ಮಾಣ ಶೈಲಿ, ದೇವಾಲಯದಲ್ಲಿರುವ ಮೂರ್ತಿಶಿಲ್ಪಗಳು, ದೇವಾಲಯದ ಪರಿಸರದ ಶಾಸನಗಳು, ದೇವಾಲಯ ತಲನಕ್ಷೆ, ಮುಂತಾದವುಗಳ ಮೂಲಕ ದೇವಾಲಯಗಳಿಗೆ ಸಂಬಂಧಿಸಿದಂತೆ ಹಲವು ವಿಷಯಗಳನ್ನು ದಾಖಲೀಕರಣ ಮಾಡಿಕೊಳ್ಳಲಾಗಿ ದೇವಾಲಯಗಳಿಗೆ ಸಂಬಂಧಿಸಿದಂತೆ

ಹಲವು ವಿಷಯಗಳನ್ನು ದಾಖಲೀಕರಣ ಮಾಡಿಕೊಳ್ಳಲಾಗಿದೆ. ಅದರೊಂದಿಗೆ ದೇವಾಲಯಗಳು ಹಾಗೂ ಮೂರ್ತಿಶಿಲ್ಪಗಳಿಗೆ ಸಂಬಂಧಿಸಿದಂತೆ ಛಾಯಾಚಿತ್ರಗಳನ್ನು ತೆಗೆಯಲಾಗಿದೆ. ದೇವಾಲಯಗಳಿಗೆ ಸಂಬಂಧಿಸಿದಂತೆ ಅಲ್ಲಿನ ಮೌಕಿಕ ಪರಂಪರೆಯನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಲಾಗಿದೆ. ಒಟ್ಟಾರೆಯಾಗಿ ಕ್ಷೇತ್ರಕಾರ್ಯದ ಮೂಲಕ ಮಧುಗಿರಿ ಪರಿಸರದ ದೇವಾಲಯಗಳನ್ನು ಬೆಳಕಿಗೆ ತರಲಾಗುತ್ತಿದೆ. ಅಂತಿಮವಾಗಿ ಅದಕ್ಕೆ ಪೂರಕವಾಗಿ ಅನುಷಂಗಿಕ ಆಕರಗಳನ್ನು (ಸಾಹಿತ್ಯಿಕ ಆಕರಗಳು) ಬಳಸಿಕೊಳ್ಳಲಾಗಿದೆ.

ಅಡಿಟಿಪ್ಪಣಿಗಳು

೧. ಸುರೇಶ.ಬಿ., 'ಚಿತ್ರದುರ್ಗ – ದಾವಣಗೆರೆ ಜಿಲ್ಲೆಗಳ ದೇವಾಲಯಗಳು.', ಪು.೩೯

೨. ಅದೇ. ಪು. ೩೯

೩. ಶ್ರೀನಿವಾಸ್ ಎಂ.ವಿ., "ಪ್ರಾದೇಶಿಕ ಇತಿಹಾಸ ಅಧ್ಯಯನ: ಒಂದು ಸಂಮೀಕ್ಷೆ.", ಹರಿತಿಸಿರಿ, ಲಕ್ಷ್ಮಣ್ ತೆಲಗಾವಿ (ಸಂ), ಪು.೫೮೨.

೪. ಅದೇ. ಪು. ೩೯

೫. ಮೋಹನ್‌ಕೃಷ್ಣ ರೈ., "ಸ್ಮಾರಕಗಳು ಮತ್ತು ಸಾಮಾಜಿಕ ವಾಸ್ತವತೆ," ಚರಿತ್ರೆ ಅಧ್ಯಯನ, ಸಂಪುಟ–೧, ಸಂಚಿಕೆ–೧, ಲಕ್ಷ್ಮಣ್ ತೆಲಗಾವಿ (ಸಂ), ಪು.೧೫೦.

ಅಧ್ಯಾಯ ೨

ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

ಅಧ್ಯಾಯ ೨
ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

೨.೧ ಭೌಗೋಳಿಕ ಹಿನ್ನಲೆ

ಅಧ್ಯಯನಕ್ಕಾಗಿ ಆಯ್ದುಕೊಂಡ ಪ್ರದೇಶದ ಭೌಗೋಳಿಕ ವಿವರಗಳನ್ನು ಅರಿತುಕೊಳ್ಳುವುದು ಅತ್ಯಂತ ಅವಶ್ಯಕ. ಐತಿಹಾಸಿಕ ಪ್ರಕ್ರಿಯೆ ಮತ್ತು ಭೌಗೋಳಿಕ ಸನ್ನಿವೇಶಗಳ ಪರಂಪರೆ ನಿಕಟ ಸಂಬಂಧ ಹೊಂದಿದ್ದು ಭೌಗೋಳಿಕ ವೈಶಿಷ್ಟಗಳನ್ನು ಮರೆತು ಚರಿತ್ರೆ ಬರೆಯಲು ಸಾಧ್ಯವಿಲ್ಲ ಎಂದು ಹೇಳಿದರೆ ತಪ್ಪಾಗುವುದಿಲ್ಲ. ಭೂಗೋಳ ಮತ್ತು ಚರಿತ್ರೆ ಅತ್ಯಂತ ನಿಕಟ ಸಂಪರ್ಕವನ್ನು ಹೊಂದಿವೆ. ಭೂಗೋಳದ ಅರಿವಿಲ್ಲದೆ ಚರಿತ್ರೆ ಬರೆಯುವುದು ಕಷ್ಟಸಾಧ್ಯ. ಪ್ರತಿಯೊಂದು ಚಾರಿತ್ರಿಕ ಸನ್ನಿವೇಶಗಳೂ, ಸ್ಮಾರಕಗಳು ಹಾಗೂ ಅವಶೇಷಗಳ ಮೇಲೆ ಭೂಗೋಳದ ಪ್ರಭಾವ ಇದ್ದೇ ಇರುತ್ತದೆ. ಒಂದು ದೇಶದ ಸರ್ವತೋಮುಖ ಬೆಳವಣಿಗೆಗೆ ಅಲ್ಲಿನ ಭೌಗೋಳಿಕ ಅಂಶಗಳು ಬಹುಮುಖ್ಯವಾಗಿರುತ್ತವೆ. ಯಾವ ದೇಶಕ್ಕೆ ಹೆಚ್ಚು ಪ್ರಕೃತಿಯ ಸಹಾಯವಿರುತ್ತದೆತಯೋ ಆ ದೇಶ ಬಹುಬೇಗ ಅಭಿವೃದ್ಧಿಯನ್ನು ಸಾಧಿಸುತ್ತದೆ. ಒಂದು ಪ್ರದೇಶದ ಪರ್ವತಶ್ರೇಣಿ, ಬೆಟ್ಟಗುಡ್ಡ, ನದಿ, ನದಿಯ ಬಯಲು, ತೀರ ಪ್ರದೇಶ, ಬಂದರು, ಮಣ್ಣಿನ ರಚನೆ, ಹವಾಮಾನ, ಉಷ್ಣಾಂಶ, ರೇಖಾಂಶ ಮುಂತಾದ ಭೌಗೋಳಿಕ ಅಂಶಗಳು ಮಾನವನನ್ನು ಆ ಪ್ರದೇಶದಲ್ಲಿ ವಾಸಿಸುವಂತೆ ಅನುವು ಮಾಡಿಕೊಡುತ್ತದೆ. ಉತ್ತಮ ಭೌಗೋಳಿಕ ಪರಿಸರದ ಆ ಪ್ರದೇಶದ ನೈಸರ್ಗಿಕ ಸಂಪತ್ತನ್ನು ಹೆಚ್ಚಿಸಿ ಜನಜೀವನ, ನಾಗರಿಕತೆ, ಸಂಸ್ಕೃತಿ, ಕಲೆ ಮತ್ತು ಸಾಹಿತ್ಯದ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ. ಆ ಪ್ರದೇಶ ತನ್ನದೇ ಆದ ಇತಿಹಾಸ ಮತ್ತು ಸಂಸ್ಕೃತಿಯನ್ನು ಹೊಂದಲು ಭೌಗೋಳಿಕ ಪರಿಸರ ಬಹಳ ಮುಖ್ಯವಾಗಿದೆ. ಆಯಾ ಭೌಗೋಳಿಕ ಪರಿಸರಕ್ಕೆ

ಅನುಗುಣವಾಗಿ ಸ್ಮಾರಕಗಳು ನಿರ್ಮಾಣಗೊಂಡಿವೆ. ಹೀಗೆ ನಿರ್ಮಾಣಗೊಂಡ ಸ್ಮಾರಕಗಳಲ್ಲಿ ಕೋಟೆಕೊತ್ತಲಗಳು, ಅರಮನೆ ಅವಶೇಷಗಳು, ನಗರ ನಿವೇಶನಗಳು, ಕೆರೆಕಟ್ಟಡಗಳು ಹಾಗೂ ದೇವಾಲಯಗಳು ಮುಂತಾದವುಗಳನ್ನು ಕಾಣಬಹುದು. ಇವುಗಳು ಆಯಾ ಭೌಗೋಳಿಕ ಪರಿಸರದ ಚರಿತ್ರೆ ಮತ್ತು ಅಂದಿನ ಸಂಸ್ಕೃತಿಯನ್ನು ಸಾರುವ ಸ್ಮಾರಕಗಳಾಗಿ ಕಂಡುಬರುತ್ತದೆ.

ಪ್ರಾಚೀನ ಕಾಲದಿಂದಲೂ ಮಾನವನು ಭಕ್ತಿ ಹಾಗೂ ಸಂಸ್ಕೃತಿಯ ಸಂಕೇತವಾಗಿ ದೇವರು ಹಾಗೂ ದೇವಾಲಯ ಸಂಸ್ಕೃತಿಯನ್ನು ಬೆಳಸಿಕೊಂಡು ಬಂದಿದ್ದು ಅವುಗಳ ನಿರ್ಮಾಣದಲ್ಲಿ ಭೌಗೋಳಿಕ ವಾತಾವರಣವು ತುಂಬಾ ಸಹಾಯಕವಾಗಿವೆ. ದೇವಾಲಯವನ್ನು ಯಾವ ಪ್ರದೇಶದಲ್ಲಿ, ಯಾವ ಮಾದರಿ ವಸ್ತುಗಳನ್ನು ಬಳಸಿ ನಿರ್ಮಿಸಿದ್ದಾರೆ. ಅದು ಯಾವ ಭೌಗೋಳಿಕ ಪರಿಸರದ ಸಂಸ್ಕೃತಿಯನ್ನು ಪ್ರತಿಬಿಂಬಿಸುತ್ತದೆ. ಮುಂತಾದವು ದೇವಾಲಯಗಳ ನಿರ್ಮಾಣಕ್ಕೆ ಯೋಗ್ಯವಾದವುಗಳು. ಅದರೊಂದಿಗೆ ಆ ಪ್ರದೇಶದ ಭೌಗೋಳಿಕ ಅಂಶಗಳನ್ನು ಕುರಿತು ತಿಳಿಯುವುದು ಅತ್ಯಂತ ಅವಶ್ಯಕ. ಪ್ರಸ್ತುತ ಮಧುಗಿರಿ ಪರಿಸರದ ದೇವಾಲಯಗಳನ್ನು ಅಧ್ಯಯನ ಮಾಡುವುದಕ್ಕೂ ಪೂರ್ವದಲ್ಲಿ ತುಮಕೂರು ಜಿಲ್ಲೆ ಹಾಗೂ ಮಧುಗಿರಿ ತಾಲ್ಲೂಕಿನ ಭೌಗೋಳಿಕ ಲಕ್ಷಣಗಳನ್ನು ಕುರಿತು ತಿಳಿದುಕೊಳ್ಳುವುದು (ಅರಿಯುವುದು) ಬಹುಮುಖ್ಯವಾದುದು.

೨.೧.೧. ತುಮಕೂರು ಜಿಲ್ಲೆಯ ಭೌಗೋಳಿಕ ಅಂಶಗಳು:

ತುಮಕೂರು ಜಿಲ್ಲೆಯು ಕರ್ನಾಟಕ ಆಗ್ನೇಯ ಭಾಗದಲ್ಲಿದೆ. ಪ್ರಾಕೃತಿಕವಾಗಿ ಸಂಪದ್ಭರಿತವಾಗಿದ್ದು, ಭೌಗೋಳಿಕವಾಗಿಯು ವಿಶಿಷ್ಟತೆಗಳನ್ನೊಳಗೊಂಡಿದೆ. ಜಿಲ್ಲೆಯ ಈಶಾನ್ಯಕ್ಕೆ ಆಂಧ್ರಪ್ರದೇಶದ ಅನಂತಪುರ, ಪೂರ್ವಕ್ಕೆ ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳು, ದಕ್ಷಿಣಕ್ಕೆ ಮಂಡ್ಯ, ಪಶ್ಚಿಮಕ್ಕೆ ಮತ್ತು ವಾಯುವ್ಯ ಭಾಗಕ್ಕೆ ಹಾಸನ ಮತ್ತು ಚಿತ್ರದುರ್ಗ ಜಿಲ್ಲೆಗಳಿವೆ. ಪಶ್ಚಿಮದ ಮಧ್ಯಭಾಗದಲ್ಲಿ ಹಾಸನ ಮತ್ತು ಚಿಕ್ಕಮಗಳೂರು ಜಿಲ್ಲೆಗಳಿಂದ ಸುತ್ತುವರಿದಿದೆ. ಚಿಕ್ಕಮಂಗಳೂರು ಜಿಲ್ಲೆಯು ಈ ಜಿಲ್ಲೆಗೆ ತಾಕಿಕೊಂಡಿದ್ದು, ಕೇವಲ ಸ್ವಲ್ಪ ದೂರದ ಸಮಾನ ಗಡಿಯನ್ನು ಹೊಂದಿದೆ. ಇದರ ಈಶಾನ್ಯಭಾಗವು ಜಿಲ್ಲೆಯ ಉಳಿದ ಪ್ರದೇಶಗಳಿಗಿಂತ ಪೂರ್ಣವಾಗಿ ಬೇರ್ಪಟ್ಟಿರುವುದು ಇದರ ಒಂದು ವಿಶಿಷ್ಟ ಲಕ್ಷಣ ಈ ಭಾಗವು ಪಾವಗಡ ತಾಲ್ಲೂಕಿನ ಪ್ರದೇಶವನ್ನು ಒಳಗೊಂಡಿದ್ದು ಇದು ನೆರೆ ರಾಜ್ಯ ಆಂಧ್ರಪ್ರದೇಶದ ಗಡಿಯನ್ನು ಎಲ್ಲಾ ಕಡೆಯಿಂದಲೂ ಸುತ್ತುವರಿದಿದೆ.[೧]

ಜಿಲ್ಲೆಯ ಭೌಗೋಳಿಕ ವಿಸ್ತೀರ್ಣ ೧೦,೫೯೮ ಚದುರ ಕಿಲೋಮೀಟರ್‌ಗಳು ಈ ಜಿಲ್ಲೆಯು ೧೨° ೪೫" ದಿಂದ ೧೪° ೨೪" ಉತ್ತರ ಅಕ್ಷಾಂಶ ಮತ್ತು ೭೬° ೨೦" ದಿಂದ

೭೭° ೩೨" ಪೂರ್ವ ರೇಖಾಂಶಗಳ ನಡುವೆ ನೆಲೆಸಿದೆ. ಒಟ್ಟು ೧೦ ತಾಲ್ಲೂಕುಗಳಿದ್ದು ಅವುಗಳಲ್ಲಿ ತುಮಕೂರು,, ಕೊರಟಗೇರಿ, ಮಧುಗಿರಿ, ಪಾವಗಡ, ಶಿರಾ, ಚಿಕ್ಕನಾಯಕನ ಹಳ್ಳಿ ತುರುವೆಕೇರಿ, ಗುಬ್ಬಿ, ತಿಪಟೂರು, ಕುಣಿಗಲ್, ತಾಲ್ಲೂಕುಗಳನ್ನು ಕಾಣಬಹುದು.[೩]

ಈ ಜಿಲ್ಲೆಯು ದಕ್ಷಿಣ ಭಾರತದ ದಖ್ಖನ್-ಪ್ರಸ್ಥಭೂಮಿಯ ಮೃದು ಶಿಲಾ ರಚನೆಯ ಭಾಗದಲ್ಲಿದ್ದು ಸ್ಫಟಿಕ ಶಿಲಾ ರೂಪದ ಬಂಡೆಗಳಿಂದ ಕೂಡಿದ ಪ್ರದೇಶವಾಗಿದೆ. ಜಿಲ್ಲೆಯ ಹೆಚ್ಚು ಭಾಗ ತಗ್ಗಾದ ಕಣಶಿಲೆಯ ಬೋಳು ಬೆಟ್ಟಗಳಿಂದಲೂ, ಮಧ್ಯೆ ಇರುವ ಸ್ವಲ್ಪ ಸಮಮಟ್ಟವಾದ ಕಣಿವೆಗಳಿಂದಲೂ ಕೂಡಿದೆ. ಮುಖ್ಯವಾದ ಬೆಟ್ಟ ಸಾಲುಗಳು ಉತ್ತರದ ನಿಡುಗಲ್ ಮತ್ತು ದಕ್ಷಿಣದ ಹುಲಿಯೂರು ದುರ್ಗದವರೆಗಿನ ಬೆಟ್ಟಗಳ ಸಾಲಿನಲ್ಲಿ ಕಾಮನದುರ್ಗ, ನಿಡುಗಲ್ಲು, ಮಿಡಿಗೇಶಿದುರ್ಗ, ಮಧುಗಿರಿ ಬೆಟ್ಟ ಚನ್ನರಾಯನ ದುರ್ಗ, ಕೊರಟಗೆರೆ ಬೆಟ್ಟ, ದೇವರಾಯನ ದುರ್ಗ, ಬೆಟ್ಟಸಾಲುಗಳು ಮುಖ್ಯವಾಗಿ ಕಂಡುಬರುತ್ತವೆ.[೪]

ಜಿಲ್ಲೆಯಲ್ಲಿ ದಕ್ಷಿಣ ಭಾಗದ ತಾಲ್ಲೂಕುಗಳಾದ ತುರುವೇಕೆರೆ, ತಿಪಟೂರು, ಗುಬ್ಬಿ ಮತ್ತು ಕುಣಿಗಲ್ ತಾಲ್ಲೂಕುಗಳ ಕೆಲವು ಭಾಗಗಳಿಗೆ ಈಗಾಗಲೇ ಹೇಮಾವತಿ ನಾಲಾ ನೀರಾವರಿ ಸೌಲಭ್ಯ ದೊರೆತಿದ್ದು, ಇದರ ಸೌಲಭ್ಯ ಜಿಲ್ಲೆಯ ಇನ್ನಷ್ಟು ಭಾಗಗಳಿಗೆ ಸಿಗುವ ಸಾಧ್ಯತೆ ಇದೆ. ಜಿಲ್ಲೆಯಲ್ಲಿ ಮೂರು ಜಲಾನಯನ ಪ್ರದೇಶಗಳು ಕಂಡುಬರುತ್ತವೆ. ಜಿಲ್ಲೆಯ ದಕ್ಷಿಣದ ತಿಪಟೂರು ಮತ್ತು ತುಮಕೂರು ಭಾಗಗಳು ಕಾವೇರಿ ಜಲಾನಯನಕ್ಕೆ ಸೇರಿದ್ದು, ಶಿಂಷಾನದಿ ಹರಿದು ಮುಂದೆ ಕಾವೇರಿ ನದಿ ಸೇರುತ್ತದೆ.[೫]

ತುಮಕೂರು ಜಿಲ್ಲೆಯಲ್ಲಿ ನೀರಾವರಿ ವ್ಯವಸ್ಥೆ ಸ್ಪಷ್ಟ ಉಲ್ಲೇಖವಿರುವ ಶಾಸನಗಳು ೮ನೇ ಶತಮಾನದಿಂದ ೧೮ನೇ ಶತಮಾನದವರೆಗೂ ವಿಸ್ತರಿಸಿದೆ. ಜಿಲ್ಲೆಯಾದ್ಯಂತ ಲಭ್ಯವಿರುವ ಶಾಸನಗಳಲ್ಲಿ ಸರಿಸುಮಾರು ೯೦ ರಿಂದ ೧೦೦ ಶಾಸನಗಳು ಕೆರೆ, ನೀರಾವರಿ ನಿರ್ಮಾಣ, ದುರಸ್ತಿ, ನಿರ್ವಹಣೆ, ದಾನ ದತ್ತಿಗಳ ಕುರಿತಂತೆ ಉಲ್ಲೇಖಿತಗೊಂಡಿರುವುದು ಸಮೀಕ್ಷೆಯಿಂದ ತಿಳಿಯಲಾಗಿದೆ.[೬]

ತುಮಕೂರು ಜಿಲ್ಲೆಯಲ್ಲಿ ಸದಾ ತುಂಬಿ ಹರಿಯುವ ನದಿಗಳಿಲ್ಲವಾದರೂ, ಮಳೆಗಾಲದಲ್ಲಿ ಮಾತ್ರ ಕಂಡುಬರುವ, ಗಿರಿದುರ್ಗಗಳಲ್ಲಿ ಉಗಮಗೊಂಡು ಹಲವು ಹಳ್ಳಗಳ ಮೂಲಕ ಹರಿವನ್ನು ಪಡೆಯುತ್ತಾ ಕೆರೆ-ಕಾಲುವೆಗಳಿಗೆ ಹರಿದು ಸಾಗುವ ಹೆಸರಿಸಬಹುದಾದ ನದಿಗಳು ಮಾತ್ರ ಕಂಡುಬರುತ್ತವೆ. ಜಿಲ್ಲೆಯ ಪ್ರಮುಖ ನದಿಗಳೆಂದರೆ ಶಿಂಷಾ, ಜಯಮಂಗಲಿ, ಸುವರ್ಣಮುಖಿ, ನಾಗಿನಿ, ಗರುಡಾಚಲ ಮತ್ತು ಉತ್ತರ ಪಿನಾಕಿನಿ ಮಾತ್ರ.

ಜಯಮಂಗಲಿ: ಉತ್ತರ ಪಿನಾಕಿನಿ ಅಥವಾ ಪೆನ್ನಾರ್‌ನ ಉಪನದಿಯಾಗಿದ್ದು, ದೇವರಾಯದುರ್ಗದ ಜಲದಗೊಂದಿಯಲ್ಲಿ ಉಗಮಗೊಳ್ಳುತ್ತದೆ. ಉತ್ತರದಿಕ್ಕಿಗೆ ಹರಿಯುತ್ತಾ ಮಧುಗಿರಿ ತಾಲೂಕನ್ನು ಪ್ರವೇಶಿಸಿ ಪೂರ್ವದಿಕ್ಕಿನಿಂದ ಹೊಳವನಹಳ್ಳಿ ಬಳಿ ಗುರುಡಾಚಲದ ಹರಿವನ್ನೂ, ರಾಂಪುರದ ಪಶ್ಚಿಮ ಕಡೆಯಿಂದ ಸುವರ್ಣಮುಖಿ ಹರಿವನ್ನು ಪಡೆಯುತ್ತಾ, ಮಧುಗಿರಿ ತಾಲೂಕಿನ ಪೂರ್ವಕ್ಕೂ ಹರಿಯುತ್ತಾ, ಅನಂತಪುರ ಜಿಲ್ಲೆಯಲ್ಲಿ ಉತ್ತರ ಪಿನಾಕಿನಿಯನ್ನು ಸೇರುತ್ತದೆ.[೮]

ಸುವರ್ಣಮುಖಿ: ಚಿನ್ನರಾಯದುರ್ಗದಲ್ಲಿ ಉಗಮಗೊಂಡು ಮೊದಲಿಗೆ ನೈಋತ್ಯ ದಿಕ್ಕಿಗೆ ಹರಿದು, ನಂತರ ವಾಯುವ್ಯ ದಿಕ್ಕಿಗೆ ಹರಿಯುತ್ತಾ ಕೊರಟಗೆರೆ ಮೂಲಕ ೧೫ ಕಿ.ಮೀಟರ್ ಹರಿದು ಜಯಮಂಗಲಿ ಸೇರುತ್ತದೆ.[೯]

ಉತ್ತರ ಪಿನಾಕಿನಿ: 'ಉತ್ತರ ಪೆನ್ನಾರ್' ಎಂದು ಕರೆಯಲ್ಪಟ್ಟಿರುವ ಈ ನದಿಯು ಜಿಲ್ಲೆಯಲ್ಲಿ ಹಲವೇ ಮೈಲಿಗಳು ಮಾತ್ರ ಹರಿದು (ಪಾವಗಡ ತಾಲ್ಲೂಕಿನಲ್ಲಿ) ತಾಲ್ಲೂಕಿನ ನೈಋತ್ಯ ದಿಕ್ಕಿನ ಮೂರು ಮೈಲಿಗಳು ಹರಿದು ಪೆನುಗೊಂಡ ತಾಲ್ಲೂಕಿನ ಪಾಂಡಿಗಿರಿ ಬಳಿ ಸೇರುತ್ತದೆ. ಕುಂದಾರ ಅಥವಾ ಕುಮುದ್ವತಿ–ಈ ನದಿಯು ದೊಡ್ಡ ಬಳ್ಳಾಪುರ ತಾಲ್ಲೂಕಿನ ಮಾಕಳಿದುರ್ಗ ಬೆಟ್ಟದಲ್ಲಿ ಉಗಮಗೊಂಡು ಗೌರಿಬಿದನೂರು ತಾಲ್ಲೂಕಿನ ಉತ್ತರಕ್ಕೇ ಹರಿಯುತ್ತಾ ಮಧುಗಿರಿ ತಾಲ್ಲೂಕಿನಲ್ಲಿ ಹರಿದು, ಉತ್ತರ ಪಿನಾಕಿನಿಯನ್ನು ರಾಜ್ಯದ ಗಡಿಯಲ್ಲಿ ಸೇರುತ್ತದೆ.[೧೦]

ಜಿಲ್ಲೆಯಲ್ಲಿ ಅನೇಕ ಬಗೆಯ ಖನಿಜಗಳು ದೊರೆಯುತ್ತಿದ್ದು ಅವುಯಾವುವೆಂದರೆ ಮ್ಯಾಂಗನೀಸ್, ಸುಣ್ಣದಕಲ್ಲು, ಕಬ್ಬಿಣದ ಅದಿರು, ಬೆಣಚುಕಲ್ಲು, ಜೇಡಿಮಣ್ಣು, ಮರಳು ಗ್ರಾನೈಟ್ ಸೋಪ್ ಸ್ಟೋನ್ ಮತ್ತು ಚಿನ್ನದ ಅದಿರುಗಳು ಈ ಜಿಲ್ಲೆಯಲ್ಲಿ (ತುಮಕೂರು) ಇವೆ. ಜಿಲ್ಲೆಯಲ್ಲಿ ಮೂರು ರೀತಿಯ ಮಣ್ಣುಗಳಿದ್ದು, ಮಧುಗಿರಿ, ಕೊರಟಗೆರೆ, ತುಮಕೂರು ಮತ್ತು ಕುಣಿಗಲ್ ತಾಲ್ಲೂಕಿನ ಸ್ವಲ್ಪಭಾಗಗಳಲ್ಲಿ ಕೆಂಪು ಜೇಡಿಮಣ್ಣು ಕಂಡು ಬಂದರೆ, ಉಳಿದೆಲ್ಲಾ ಕಡೆ ಮರಳು ಮಿಶ್ರಿತ ಕೆಂಪು ಮಣ್ಣು ಕಂಡು ಬರುತ್ತದೆ.[೧೧]

ತುಮಕೂರು ಜಿಲ್ಲೆಯ ಮುಖ್ಯ ಬೆಳೆಗಳು ರಾಗಿ, ಭತ್ತ, ಜೋಳ, ಅವರೆ ಹುರುಳಿ, ಇತರೆ ಬೆಳೆಗಳಾಗಿ, ತೆಂಗು, ಅಡಿಕೆ, ಬಾಳೆ, ಕಡಲೆ, ತೊಗರಿ, ವಾಣಿಜ್ಯ ಬೆಳೆಗಳಾಗಿ ಜಿಲ್ಲೆಯಲ್ಲಿ ಕಂಡುಬರುತ್ತಿವೆ. ಜಿಲ್ಲೆಯ ತಿಪಟೂರು ತಾಲ್ಲೂಕಿನಲ್ಲಿ ತೆಂಗು ಕೃಷಿಯಲ್ಲಿ ಪ್ರಸಿದ್ಧಿ ಪಡೆದಿದ್ದೆ. ರೇಷ್ಮೆ ಕೃಷಿಯು ಜಿಲ್ಲೆಯಲ್ಲಿ ಎಲ್ಲಾ ಭಾಗಗಳಲ್ಲಿಯೂ ಕಾಣಬಹುದಾಗಿದೆ.[೧೨] ೨೦೦೧ ರ ಜನಗಣತಿಯ ಪ್ರಕಾರ ಜಿಲ್ಲೆಯ ಒಟ್ಟು ಜನಸಂಖ್ಯೆ ೨೫,೭೯,೫೧೬ ಇದೆ. ಅರಣ್ಯ ಸಂಪತ್ತಿನಲ್ಲಿ

ತುಮಕೂರು ಜಿಲ್ಲೆ ಹಿಂದುಳಿದಿದೆ. ಜಿಲ್ಲೆಯ ನೈಸರ್ಗಿಕ ಸಸ್ಯ ಸಂಪತ್ತುಗಳಲ್ಲಿ ಗಟ್ಟಿಮುಟ್ಟಾದ ಅಮೂಲ್ಯ ಅರಣ್ಯ ಉತ್ಪನ್ನಗಳು ಮತ್ತು ನದಿ ನೀರಿನಂತಹ ಸಂಪನ್ಮೂಲಗಳು ಬಹುಮಟ್ಟಿಗೆ ಕಡಿಮೆಯೇ ಎನ್ನಬಹುದು. ಸಾಧಾರಣವಾಗಿ ಒಣ ಭೂಪ್ರದೇಶವಾಗಿದ್ದು, ಹಳ್ಳಿಗಾಡಿನ ಮಾನವ ನಿರ್ಮಿತ ವಸತಿ ಪ್ರದೇಶಗಳಿಂದ ಕೂಡಿದ ಭೂ ಪ್ರದೇಶವಗಿದೆ.[೧೩] ರಕ್ಷಿತ ಅರಣ್ಯ ಮತ್ತು ಬೆಟ್ಟಗುಡ್ಡಗಳ ಪ್ರದೇಶಗಳಲ್ಲಿ ತೆಳುವಾದ ನೈಸಗಿಕ ಸಸ್ಯ ಸಂಪತ್ತಿದೆ. ಜಿಲ್ಲೆಯಲ್ಲಿ ಒಟ್ಟು ೪೪೯೮೪ ಹೆಕ್ಟೇರ್‌ನಷ್ಟು ಭೂ ಪ್ರದೇಶ ಅರಣ್ಯದಿಂದ ಕೂಡಿದ್ದು, ಬಹುತೇಕ ಎಲೆ ಹುದುರುವ ಶುಷ್ಕ ಪ್ರದೇಶದ ಅರಣ್ಯಗಳು ಮತ್ತು ಕುರುಚಲು ಕಾಡಿನ ಅರಣ್ಯ ಪ್ರದೇಶ ಹೆಚ್ಚಾಗಿ ಕಂಡುಬರುತ್ತದೆ. ಜಿಲ್ಲೆಯಲ್ಲಿ ಸಿದ್ದರ ಬೆಟ್ಟ ಮತ್ತು ದೇವರಾಯನದುರ್ಗದ ಅರಣ್ಯ ಪ್ರದೇಶಗಳಲ್ಲಿ ಕಾಡು ಹಂದಿಗಳು ಮತ್ತು ಕರಡಿಗಳು ಕಂಡುಬರುತ್ತವೆ. ಶಿರಾ ಮತ್ತು ಮಧುಗಿರಿ ಭಾಗಗಳ ಅರಣ್ಯ ಪ್ರದೇಶಗಳಲ್ಲಿ ಜಿಂಕೆಗಳು ಸಣ್ಣಹಿಂಡಿ (ಮಂದೆ) ಕಂಡುಬರುತ್ತದೆ.

೨.೧.೨. ಮಧುಗಿರಿ ತಾಲ್ಲೂಕಿನ ಭೌಗೋಳಿಕ ಅಂಶಗಳು

ತುಮಕೂರು ಜಿಲ್ಲೆಯ ೧೦ ತಾಲ್ಲೂಕುಗಳಲ್ಲಿ ಮಧುಗಿರಿ ಒಂದಾಗಿದೆ. ಆದಿ ಮಾನವನಿಂದ ಹಿಡಿದು ಗಂಗರು, ಚೋಳರು, ಹೊಯ್ಸಳರು, ವಿಜಯನಗರ ಅರಸರು ಹಾಗೂ ಮೈಸೂರು ಅರಸರು, ಹೀಗೆ ಹಲವು ರಾಜವಂಶಗಳ ಚಾರಿತ್ರಿಕ ಕುರುಹುಗಳು ಮಧುಗಿರಿ ಪರಿಸರದಲ್ಲಿ ಕಂಡುಬರುತ್ತವೆ.

ವಿಶ್ವ ಪ್ರಸಿದ್ಧ ಗಿರಿಧರೆಯಾದ 'ಮಧುಗಿರಿ' ತುಮಕೂರು ಜಿಲ್ಲೆಗೆ ಸೇರಿದ ಒಂದು ತಾಲ್ಲೂಕು ಕೇಂದ್ರ ಮತ್ತು ಉಪವಿಭಾಗವಾಗಿದೆ. ಆಡಳಿತ ವ್ಯವಸ್ಥೆಯ ದೃಷ್ಟಿಯಿಂದ ಈ ತಾಲ್ಲೂಕನ್ನು ಆರು ಹೋಬಳಿಗಳಾಗಿ ವಿಭಾಗಿಸಲಾಗಿದೆ. ಅವುಗಳೆಂದರೆ, ಮಧುಗಿರಿ ಕಸಬಾ, ದೊಡ್ಡೇರಿ, ಮೀಡಿಗೇಶಿ, ಐ.ಡಿ. ಹಳ್ಳಿ, (ಇಟಕದಿಬ್ಬನಹಳ್ಳಿ) ಪುರವರ, ಕೊಡಗೇನಹಳ್ಳಿ, ಮಧಗಿರಿ ಉಪವಿಭಾಗಕ್ಕೆ, ಮಧುಗಿರಿ, ಪಾವಗಡ, ಶಿರಾ, ಮತ್ತು ಕೊರಟಗೆರೆ ಈ ನಾಲ್ಕು ತಾಲ್ಲೂಕುಗಳು ಸುತ್ತುವರೆದಿವೆ. ಮಧುಗಿರಿ ಪ್ರದೇಶವು ಪೂರ್ವ,ಉತ್ತರ, ವಾಯುವ್ಯ ಈ ಮೂರು ದಿಕ್ಕುಗಳಲ್ಲಿ ಆಂಧ್ರಪ್ರದೇಶದಿಂದ ಸುತ್ತುವರೆದಿದೆ.[೧೪] ಭೌಗೋಳಿಕವಗಿ ೧೧೨೧೧೯ ಹೆಕ್ಟೇರ್ ಭೂಮಿ ಈ ತಾಲ್ಲೂಕಿನಲ್ಲಿದೆ ಹಾಗೂ ೩೨೧ ಕಂದಾಯ ಗ್ರಾಮಗಳು ಮತ್ತು ೧೩೭ ಮಜರೆ ಗ್ರಾಮಗಳು ಕಂಡುಬರುತ್ತವೆ.[೧೫]

ಈ ತಾಲ್ಲೂಕಿನಲ್ಲಿ ಜೀವನದಿಗಳು ಹರಿಯುವುದಿಲ್ಲವಾದರೂ ಕಲವು ಸಣ್ಣನದಿಗಳೂ ಹಲವಾರು ದೊಡ್ಡ ಹಳ್ಳಿಗಳೂ ಬೆಟ್ಟಗುಡ್ಡಗಳಲ್ಲಿ ಹುಟ್ಟಿ ಹಲವಾರು ಕೆರೆಕಟ್ಟೆಗಳಿಗೆ ನೀರನ್ನು

[illegible]

ಒದಗಿಸುತ್ತವೆ. ಇವು ಬಹುತೇಕವಾಗಿ ಬೇಸಿಗೆ ಕಾಲದಲ್ಲಿ ಬತ್ತಿದ್ದು ಮಳೆಗಾಲದಲ್ಲಿ ಮಾತ್ರ ಹರಿಯುತ್ತಿರುವುತ್ತವೆ.[೧೭]

ಮಧುಗಿರಿ ತಾಲ್ಲೂಕಿನಲ್ಲಿ ಜಯಮಂಗಳ ನದಿಯು ಬಾಲ್ಯ, ಕೊಡಿಗೇನಹಳ್ಳಿಯ ಸಮೀಪ ಹರಿದು ಆಂದ್ರ ಪ್ರದೇಶದ ಮೂಲಕ ಉತ್ತರ ಪಿನಾಕಿನಿಯನ್ನು ಸೇರುತ್ತದೆ. ಮತ್ತು ಸುವರ್ಣ ಮುಖಿ ನದಿಯು ಬಡವನಹಳ್ಳಿ, ಸಜ್ಜೆ ಹೊಸಹಳ್ಳಿ ಮಾರ್ಗವಾಗಿ ಹರಿದು ಆಂದ್ರ ಪ್ರದೇಶದ ಮದೂಡಿಯನ್ನು ಸೇರುತ್ತದೆ. ಈ ತಾಲ್ಲೂಕಿನ ಈಶಾನ್ಯ ಭಾಗದಲ್ಲಿ ದಕ್ಷಿಣೋತ್ತರವಾಗಿ ಕುಮುದ್ವತಿ ನದಿ ಹರಿಯುತ್ತದೆ.[೧೮]

ಮಧುಗಿರಿ ತಾಲ್ಲೂಕಿನಲ್ಲಿ ಬೆಟ್ಟಗಳು ಆವರಿಸಿವೆ. ಮಧುಗಿರಿಯನ್ನು ಸುತ್ತಲೂ ಬೆಟ್ಟಗುಡ್ಡಗಳು ಇವೆ. ತಾಲ್ಲೂಕಿನ ಎತ್ತರವಾದ ಬೆಟ್ಟಗಳು ಇವೆ. ಮಧುಗಿರಿ ದುರ್ಗ (೧೧೯೨ ಮೀ), ಮಿಡಿಗೇಶಿ ದುರ್ಗ (೧೦೩೯ ಮೀ), ಬಾಲ್ಯ (೮೮೮ ಮೀ), ದೊಡ್ಡನರಮಂಡಲಬೆಟ್ಟ, (೯೪೫ ಮೀ), ಈ ಬೆಟ್ಟ ಶ್ರೇಷ್ಟಗಳಲ್ಲಿ ಪ್ರಾಚೀನಕಾಲದ ಹಲವು ಸ್ಮಾರಕಗಳು ಮತ್ತು ದೇವಾಲಯಗಳು ನಿರ್ಮಾಣವಾಗಿರುವುದನ್ನು ಕಾಣಬಹುದು.[೧೯]

ಮಧುಗಿರಿ ತಾಲ್ಲೂಕಿನಲ್ಲಿ ೩೨೭೯ ಹೆಕ್ಟೇರು ವಿಸ್ತೀರ್ಣದ ಅರಣ್ಯ ಇದೆ. ತಿಮ್ಮಲಾಪುರ ಅರಣ್ಯ, ಮೈದನಹಳ್ಳಿ ಅರಣ್ಯ, ಗಮನ ಸೆಳೆಯುವ ಅರಣ್ಯಭಾಗಗಳಾಗಿವೆ. ಈ ಅರಣ್ಯ ಭಾಗದಲ್ಲಿ ಜಾಲಿ, ನೆರಳೆ, ನೀಲಗಿರಿ, ಹೊನ್ನೆ, ಹಲಸು ಹೊಂಗೆ ಮುಂತಾದ ಮರಗಳು ಕಂಡುಬರುತ್ತವೆ.[೨೦]

ಮಧುಗಿರಿ ತಾಲ್ಲೂಕಿನಲ್ಲಿ ೧೯೨ ಕೆರೆಗಳಿದ್ದು ಅವುಗಳಲ್ಲಿ ಸಿದ್ದಾಪುರ ಕೆರೆ, ಬಿಜಾವರ ಕೆರೆ, ರಂಟನಾಳು ಕೆರೆ, ಮಿಡಿಗೇಳಿಕೆರೆ, ಇಟಕ್ ದಿಬ್ಬನಹಳ್ಳಿ ದೊಡ್ಡ ಕೆರೆ, ಗರಣೆಕೆರೆ, ಮೈದನಹಳ್ಳಿ ಕೆರೆ, ಕಡಗತ್ತೂರು ಕೆರೆ, ದೊಡ್ಡ ಮಾಲೂರು ಕೆರೆ, ಕಲಿದೇವಪುರ ಕೆರೆ, ಹೀಗೆ ಮುಂತಾದ ಪ್ರಮುಖ ಕೆರೆಗಳು ಕಂಡು ಬರುತ್ತವೆ.[೨೧] ಇವುಗಳು ಈ ಪರಿಸರದ ಬಹುಮುಖ್ಯ ನೀರಾವರಿ ಮೂಲಗಳಾಗಿವೆ. ತಾಲ್ಲೂಕಿನಲ್ಲಿ ಕಪ್ಪುಮಣ್ಣು ಮರಳುಮಿಶ್ರಿತ ಕೆಂಪುಮಣ್ಣು, ಚೌಳುಮಣ್ಣು, ಮುಂತಾದ ಮಣ್ಣಿನ ವಿಧಗಳನ್ನು ಕಾಣಬಹುದು. ರಾಗಿ, ಭತ್ತ, ಕಬ್ಬು, ಅಡಿಕೆ, ಕಡಲೇಕಾಯಿ (ಶೇಂಗಾ), ಜೋಳ, ತೊಗರಿ, ಅಲಸಂದಿ, ದಾಳಿಂಬೆ, ಮುಂತಾದ ಬೆಳೆಗಳನ್ನು ಕಾಣಬಹುದು.[೨೨]

ಈ ರೀತಿಯಾಗಿ ಮಧುಗಿರಿ ತಾಲ್ಲೂಕನ್ನು ಒಳಗೊಂಡಂತೆ ಇಡೀ ತುಮಕೂರು ಜಿಲ್ಲೆಯು ಬೌಗೋಳಿಕವಾಗಿ ಸಮೃದ್ಧಿಯಿಂದ ಕೂಡಿದೆ.

ಪ್ರಾಗಿತಿಹಾಸ

ಅಪಾರವಾದ ಚಾರಿತ್ರಿಕ ಕುರುಹುಗಳನ್ನು ಹೊಂದಿರುವ ಮಧುಗಿರಿ ಪರಿಸರ ತುಮಕೂರು ಜಿಲ್ಲೆಯಲ್ಲಿ ಬಹುಮುಖ್ಯವಾಗಿ ಇಲ್ಲಿನ ಪ್ರಾಚೀನತೆಯನ್ನು ಪ್ರಾಗಿತಿಹಾಸದಿಂದ ಗುರುತಿಸಬಹುದು.

ಆದಿಮಾನವನು ವಾಸಮಾಡಲು ಮಧುಗಿರಿ ಪರಿಸರ ಬೆಟ್ಟಗುಡ್ಡಗಳಿಂದ ಆವರಿಸಿದೆ. ಆದ್ದರಿಂದ ಈ ಪ್ರದೇಶದಲ್ಲಿ ಆದಿ ಹಳೇಶಿಲಾಯುಗ ಉಪಕರಣಗಳು ದೊರೆತಿವೆ. ಕೈಗೊಡಲಿ ಮಚ್ಚುಗತ್ತಿ, ಚಕ್ರಾಕಾರದ ಉಪಕರಣಗಳು ದೊರೆತಿವೆ. ಪ್ರಾಚೀನಕಾಲದ ಕುರುಹುಗಳನ್ನು ಹೊಂದಿರುವ ಮಧುಗಿರಿ ಪರಿಸರ ಮತ್ತು ತುಮಕೂರು ಜಿಲ್ಲೆಯಲ್ಲಿ ಶಿಲಾಯುಗ ಕಾಲದಿಂದಲೂ ಮಾನವನಿಗೆ ಆಶ್ರಯ ತಾಣವಾಗಿದ್ದಿತೆಂಬುದನ್ನು ಜಿಲ್ಲೆಯದ್ಯಂತ ಇದುವರೆಗೂ ಪತ್ತೆಯಾಗಿರುವ ಸುಮಾರು ೨೬೬ ನೆಲೆಗಳನ್ನು ಗುರುತಿಸಲಾಗಿದೆ.[೨೨] ಈ ಜಿಲ್ಲೆಯ ಮಾನವ ಇತಿಹಾಸವನ್ನು ಶಿಲಾಯುಗದಿಂದ ಗುರುತಿಸಬಹುದು. ಆದಿ ಹಳೇ ಶಿಲಾಯುಗ, ಸೂಕ್ಷ್ಮ ಶಿಲಾಯುಗ, ನೂತನ ಶಿಲಾಯುಗ, ತಾಮ್ರ ಶಿಲಾಯುಗ, ಬೃಹತ್ ಶಿಲಾಯುಗ, ಸಂಸ್ಕೃತಿಗಳ ನೆಲೆಗಳು ದೊರೆತಿವೆ. ಮಧುಗಿರಿ ತಾಲ್ಲೂಕು ಪರಿಸರದಲ್ಲಿ ಆದಿ ಹಳೇ ಶಿಲಾಯುಗ ನೂತನ ಶಿಲಾಯುಗ, ಅಂತ್ಯ ಹಳೆ ಶಿಲಾಯುಗ, ಮಧ್ಯ ಹಳೆ ಶಿಲಾಯುಗ, ಸಂಸ್ಕೃತಿಯ ಹಲವು ನೆಲೆಗಳನ್ನು ಹೊಂದಿದೆ. ಅವುಗಳಲ್ಲಿ ಬಹು ಮುಖ್ಯವಾಗಿ ಮಧುಗಿರಿ ತಾಲ್ಲೂಕಿನ ಅವರಲ್ಲು, ಗುಟ್ಟಿ, ಗುರಮ್ಮನ ಕಟ್ಟಿ, ಮಿಡಿಗೇಶಿ, ಪ್ರದೇಶಗಳನ್ನು ಗಮನಿಸಬಹುದು.[೨೩]

ತುಮಕೂರು ಜಿಲ್ಲೆಯಲ್ಲಿ ಅದಿ, ಮಧ್ಯ ಮತ್ತು ಅಂತ್ಯ ಹಳೇ ಶಿಲಾಯುಗಕ್ಕೆ ಸೇರಿದ ಶಿಲಾ ಆಯುದಗಳು ಕಿಬ್ಬನಹಳ್ಳಿ, ಬಾಣಸಂದ್ರ ಬೆಟ್ಟ, ಬಿಳಿಗೆರೆ, ಯಲ್ಲಪ್ಪನಾಯಕನ ಹೊಸಕೋಟೆ, ನಿಡುಗಲ್ಲು, ಕೈಮರ, ದೊಡ್ಡಗುಣೆ, ಓಬಳಾಪುರ ಮಂಚಲ್ದೊರೆ, ಯಕ್ಕಲಕಟ್ಟೆ, ಮುಂತಾದ ಪ್ರದೇಶಗಳಲ್ಲಿ ಇರುವುದನ್ನು ಗುರುತಿಸಿದ್ದಾರೆ. ಈ ಆದಿ ಹಳೆ ಶಿಲಾಯುಗದಲ್ಲಿ ಕೈಗೊಡಲಿ, ಮುಚ್ಚುಗತ್ತಿ, ಸೀಗುಗತ್ತಿ ಹಾಗೂ ಚೌಕಾಕಾರದ ಉಪಕರಣ, ಅಂಡಾಕೃತಿಯ ಉಪಕರಣಗಳೆಂದು ವರ್ಗೀಕರಿಸಲಾಗಿದೆ.[೨೪]

ತುಮಕೂರು ಜಿಲ್ಲೆಯ ಬಹುಭಾಗದಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿ ಕಂಡುಬಂದಿದೆ. ಅದರಲ್ಲಿ ತುಮಕೂರು ತಾಲ್ಲೂಕು ಉರಡಗೆರೆ ಹೋಬಳಿಯ ಬೆಳ್ಳಬಟ್ಟಲಹಳ್ಳಿಯಲ್ಲಿ ಬೃಹತ್ ಶಿಲಾಯುಗ ಗೋರಿಗಳಿರುವುದನ್ನು ಬಿ.ಎಲ್. ರೈಸ್ ರವರು ತಿಳಿಸಿದ್ದಾರೆ. ಇವುಗಳು ಶಿಲಾಗೋರಿಗಳಾಗಿದ್ದು, ಬೃಹತ್ ಶಿಲಾಯುಗದ ಕಾಲದ ಮಡಿಕೆ ಚೂರುಗಳು ಸಿಕ್ಕಿದೆ ಎಂದು ತಿಳಿಸಿದ್ದಾರೆ.[೨೫]

ಈ ಜಿಲ್ಲೆಯಲ್ಲಿ (ತುಮಕೂರು) ಒಟ್ಟು ೩೮ ಬೃಹತ್ ಶಿಲಾಯುಗ ಸಂಸ್ಕೃತಿಯ ನೆಲೆಗಳಾಗಿದ್ದು, ಇವುಗಳಲ್ಲಿ ೧೭ ವಸತಿ ನೆಲೆಗಳಾದರೆ, ಉಳಿದ ೨೧ ನೆಲೆಗಳು ಶಿಲಾಗೋರಿಗಳನ್ನು ಹೊಂದಿವೆ. ಮಧುಗಿರಿ ತಾಲ್ಲೂಕು ಕತ್ತಿರಾಜನಹಳ್ಳಿಯ ಪ್ರದೇಶದಲ್ಲಿ ಹೆಚ್ಚು ಸಂಖ್ಯೆಯ ಶಿಲಾಗೋರಿಗಳು ಪತ್ತೆಯಾಗಿವೆ. ಈ ಗೋರಿಗಳು ವಿವಿಧ ಮಾದರಿಗಳಲ್ಲಿವೆ. ವಾಸ್ತವ್ಯದ ನೆಲೆಗಳಲ್ಲಿ ಕಪ್ಪು ಮತ್ತು ಕೆಂಪು ವರ್ಣದ ಪಾತ್ರೆಗಳು ದೊರೆತಿವೆ.[೨೬]

ತುಮಕೂರು ಜಿಲ್ಲೆಯಲ್ಲಿ ಪಾವಗಡ ತಾಲ್ಲೂಕಿನ ಮರಿದಾಸನಹಳ್ಳಿ, ಕೊರಟಗೆರೆ ತಾಲ್ಲೂಕಿನ ಇರಕಸಂದ್ರ ಕಾಲೋನಿಗಳಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ಪತ್ತೆಯಾಗಿವೆ.[೨೭]

ಹೀಗೆ ತುಮಕೂರು ಜಿಲ್ಲೆಯ ಪ್ರಾಗೈತಿಹಾಸಿಕವಾಗಿ ಸಂಪದ್ಭರಿತವಾಗಿದ್ದು ಹಾಗೂ ಮಧುಗಿರಿ ತಾಲ್ಲೂಕು ಮತ್ತು ಸುತ್ತಮುತ್ತಲ ಹಲವು ಭಾಗಗಳು ಪ್ರಾಗೈತಿಹಾಸಿಕ ಕಾಲದ ಹಲವು ಸಂಗತಿಗಳನ್ನು ಹರಿತು ತಿಳೀಯಬಹುದು.

೨.೨. ಚಾರಿತ್ರಿಕ ಹಿನ್ನಲೆ

ಮಧುಗಿರಿಯು ತುಮಕೂರು ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರ, ಇದರ ಮೊದಲ ಹೆಸರು ಮದ್ದಗಿರಿ 'ಮಧು' ಎಂಭ ಹೆಸರನ್ನು ಎತ್ತರದ ಬುಡದಲ್ಲಿ ಈ ಊರು ಇದ್ದುದರಿಂದ ಮಧುಗಿರಿ ಎಮದು ಹೆಸರು ಬಂದಿದೆ. ಇದನ್ನು ದಾಳಿಂಬೆ ಮಟ್ಟವೆಂತಲೂ ಕರೆಯಲಾಗುತ್ತಿತ್ತು. "ಮಧುಗಿರಿಯನ್ನು ಧರೆಯೊಳಲ್ಲೇ ಇರಲ್ಲಿ ನಾನು ಮರೆಯಲಾರೆ ಮಧುಗಿರಿ," ಎಂದು ಮನದುಂಬಿ ಸುತ್ತಿಸಿದ್ದಾರೆ. ಹೊಯ್ಸಳ ಕವಿ. 'ಮದ್ಗರಿ' ಇದರ ಪ್ರಾಚೀನ ಹೆಸರು 'ಮದ್ದಗಿರಿ' ಎಂದು ಕಾಲಾನಂತರದಲ್ಲಿ ಪರಿವರ್ತಿಸಲಾದ ಹೆಸರು 'ಪ್ರಸನ್ನಗಿರಿ' ಮೈಸೂರು ಅರಸರಿಟ್ಟ ಹೆಸರು, 'ಪತ್ತೇಹಾಬಾದ್' ಹೈದರಾಲಿ ಇಟ್ಟ ಹೆಸರು, ಇವಲ್ಲದೆ ಕೃಷ್ಣಗಿರಿ, ಮಾಧಗಿರಿ ಎಂದು ಕರೆಯುತ್ತಿದ್ದರೆಂದು ತಿಳಿದು ಬರುತ್ತದೆ. 'ಮದ್ದಗಿರಿ' ಎಂಬುದನ್ನು ಇಂಗ್ಲೀಷ್‌ನಲ್ಲಿ ಬರೆದು ಅಸಹ್ಯೋಕ್ತಿಯಾಗಿ ತೆಲುಗಿನವರು ಉಚ್ಛರಿಸುತ್ತಿದ್ದುದನ್ನು ಮನಗಂಡ 'ಮಾಸ್ತಿವೆಂಕಟೇಶಯ್ಯಂಗಾರ್' ಅವರು ಇಲ್ಲಿ ಅಧಿಕಾರಿಗಳಾಗಿದ್ದಾಗ ೧೯೨೭ರಲ್ಲಿ 'ಮಧುಗಿರಿ' ಎಂದು ಮರುನಾಮಕರಣ ಮಾಡಿರುವುದಾಗಿ ಸರ್ಕಾರಿ ಕಡತಗಳಿಂದ ತಿಳಿದು ಬರುತ್ತದೆ.[೨೮] ಹೀಗೆ ಮಧುಗಿರಿಯನ್ನು ಹಲವು ಹೆಸರುಗಳಿಂದ ವಿವಿಧ ಕಾಲಘಟ್ಟಗಳಲ್ಲಿ ತನ್ನದೇ ಆದ ಚಾರಿತ್ರಿಕ ಹಿನ್ನಲೆಯೊಂದಿಗೆ ಇಂದಿಗೂ ತನ್ನ ಮಹತ್ವವನ್ನು ಸಾರುತ್ತಿರುವುದು ಗಮನಾರ್ಹ ಸಂಗತಿಯಾಗಿದೆ.

ಮಧುಗಿರಿ ಪರಿಸರವನ್ನು ಗಂಗರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು ನೊಳಂಬರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮಧುಗಿರಿ ಮಹಾನಾಡ ಪ್ರಭುಗಳು,

ಮರಾಠರು, ಹೈದರ್‌ಟಿಪ್ಪು, ಮೈಸೂರು ಒಡೆಯರು ಮೊದಲಾದವರು, ಆಳ್ವಿಕೆ ಮಾಡಿರುವುದು ಈ ಪರಿಸರದಲ್ಲಿ ದೊರತಿರುವ ಶಿಲಾಶಾಸನಗಳು, ತಾಮ್ರ ಶಾಸನಗಳು, ವೀರಗಲ್ಲುಗಳು ಮತ್ತು ದಾನಶಾಸನಗಳಿಂದ ದಾಖಲೆಗಳಿಂದ ತಿಳಿದು ಬರುತ್ತದೆ.[೨೯]

೨.೨.೧. ತಲಕಾಡಿನ ಗಂಗರು

ತುಮಕೂರು ಜಿಲ್ಲೆಯಲ್ಲಿ ತಮ್ಮ ಆಡಳಿತ ನಡೆಸಿದ ಮೊದಲ ಅರಸರೆಂದರೆ ತಲಕಾಡಿನ ಗಂಗರು. ಕರ್ನಾಟಕದ ದಕ್ಷಿಣ ಮತ್ತು ಪೂರ್ವಭಾಗದ ಜಿಲ್ಲೆಗಳಲ್ಲಿ ಕ್ರಿ.ಶ. ಆರಂಭದಿಂದ ೧೦೨೫ರವರೆಗೆ ಆಳ್ವಿಕೆ ನಡೆಸಿದರು. ಈ ಜಲ್ಲೆಯಲ್ಲಿ ಗಂಗರಿಗೆ ಸೇರಿದ ಅನೇಕ ದಾಖಲೆಗಳು ದೊರಕಿವೆ. ಕ್ರಿ.ಶ. ೪೦೦ರ ಸುಮಾರಿಗೆ ಸೇರಿದ ಶಾಸನವನ್ನು ಬರೆಸಿದವನು ಮಾಧವ ವರ್ಮ್ನೆಂಬ ಅರಸ ಈ ಮಾಧವವರ್ಮನು ಪ್ರಾಯಶಃ ದಡಿಗ ದೊರೆಯ ಪುತ್ರನಾದ ಕಿರಿಯ ಮಾಧವನಿರಬಹುದು. ಇವನು ಬೋಧಿಸತ್ವನೆಂಭ ಬೌದ್ದ ಸನ್ಯಾಸಿಗೆ ಭೂಮಿಯನ್ನು ದಾನವಾಗಿ ನೀಡಿದನೆಂಭ ವಿಷಯವು ಈ ಶಾಸನದಲ್ಲಿ ಉಲ್ಲೇಖಿತವಾಗಿದೆ.[೩೦]

ಗಂಗ ದೊರೆಗಳಿಗೆ ಸೇರಿದ ಕ್ರಿ.ಶ. ೫೪೫ರ ಸುಮಾರಿನ ಐದು ತಾಮ್ರ ಶಾಸನಗಳು ಮಧುಗಿರಿ ತಾಲ್ಲೂಕಿನ ಕಡಗೂಟೂರಿನಲ್ಲಿ ದೊರೆತಿದ್ದು, ಗಂಗರ ಅರಸರ ಆಳ್ವಿಕೆಯ ಬಗ್ಗೆ ಹಾಗೂ ಬಿರುದುಗಳ ಬಗ್ಗೆ ಮಾಹಿತಿ ನೀಡುತ್ತವೆ. ಕ್ರಿ.ಶ. ೭೨೫ರಿಂದ ೭೮೮ರವರೆಗೆ ಆಳಿದ ಗಂಗರ ಹೆಸರಾಂತ ದೊರೆ ಶ್ರೀಪುರುಷನಿಗೆ ಸಂಬಂಧಿಸಿದ ಶಾಸನಗಳು ವೀರಗಲ್ಲುಗಳು ಈ ಪ್ರದೇಶದಲ್ಲಿ ದೊರೆತಿವೆ. ಅವುಗಳಲ್ಲಿ ಕಾಲ ನಮೂದಾಗಿಲ್ಲ.[೩೧] ಮಧುಗಿರಿ ತಾಲ್ಲೂಕಿನ ಬೇಡತ್ತೂರುನಲ್ಲಿ ಇವರ ಕಾಲಕ್ಕೆ ಸಂಬಂಧಿಸಿದ ವೀರಗಲ್ಲುಗಳು ಲಭ್ಯವಾಗಿವೆ. ಇವು ಗಂಗರಿಗೆ ಮತ್ತು ರಾಷ್ಟ್ರಕೂಟರ ಮಧ್ಯೆ ನಡೆದ ಹೋರಾಟದ ಬಗ್ಗೆ ಮಾಹಿತಿ ನೀಡುತ್ತವೆ. ಸುಮಾರು ಕ್ರಿ.ಶ.೭೫೦ ರ ಮಿಡಿಗೇಶಿ ಬಳಿ ದೊರಕಿರುವ ೯೯ರ ಶಾಸನದಲ್ಲಿ ರಾಷ್ಟ್ರಕೂಟರು ಮತ್ತು ಗಂಗರ ಮಧ್ಯ ನಡೆದ ಹೋರಾಟದ ಬಗ್ಗೆ ಮಾಹಿತಿ ನೀಡುತ್ತದೆ.[೩೨]

೨.೨.೨ ರಾಷ್ಟ್ರಕೂಟರು

ಕ್ರಿ.ಶ ೬ನೇ ಶತಮಾನದ ಮಧ್ಯಭಾಗದಿಂದ ೮ನೇ ಶತಮಾನದ ಮಧ್ಯ ಭಾಗದವರೆಗೆ ದಖನ್ನಿನಲ್ಲಿ ಆಳಿದ ಬಾದಾಮಿ ಚಾಲುಕ್ಯರಿಗೆ ಸೇರಿದ ಯಾವ ದಾಖಲೆಗಳೂ ಈ ಮಧುಗಿರಿ ಪರಿಸರದಲ್ಲಿ ಲಭ್ಯವಾಗಿಲ್ಲ. ಬಾದಾಮಿ ಚಾಲುಕ್ಯರ ಉತ್ತರಾದಿಕಾರಿಗಳಾಗಿ, ರಾಷ್ಟ್ರಕೂಟರು ಕ್ರಿ.ಶ.೭೫೩ರಿಂದ ೯೭೩ರವರೆಗೆ ಕರ್ನಾಟಕದ ಅನೇಕ ಭಾಗಗಳಲ್ಲಿ ಆಡಳಿತ ನಡೆಸಿದರು. ಕ್ರಿ.ಶ ೭೫೩ ರಲ್ಲಿ ರಾಷ್ಟ್ರ ಕೂಟರ ಪ್ರಸಿದ್ಧ ದೊರೆ ದಂತಿದುರ್ಗನು ಬಾದಾಮಿ ಚಾಲುಕ್ಯರ ಕೊನೆಯ

ಅರಸನಾದ ಎರಡನೇ ಕೀರ್ತಿವರ್ಮನನ್ನು ಸೋಲಿಸುವುದರೊಂದಿಗೆ ರಾಷ್ಟ್ರಕೂಟರ ಪ್ರಭುತ್ವ ಸ್ಥಾಪಿಸಿದ ರಾಷ್ಟ್ರಕೂಟರ ಸ್ಥಳೀಯ ರಾಜರಾಗಿದ್ದು, ಎರಡು ಶರಮಾನಗಳ ಕಾಲ ವೈಭವದಿಂದ ಕರ್ನಾಟಕವನ್ನು ಆಳಿದರು.[೩೩]

ಮಧುಗಿರಿಯನ್ನು ಒಳಗೊಂಡತೆ ತುಮಕೂರು ಜಿಲ್ಲೆಯ ಬಹುಭಾಗ ರಾಷ್ಟ್ರಕೂಟರ ಆಳ್ವಿಕೆಗೆ ಒಳಪಟ್ಟಿದ್ದಿತು. ಜಿಲ್ಲೆಯಲ್ಲಿ ರಾಷ್ಟ್ರಕೂಟರಿಗೆ ಸಂಬಂಧಿಸಿದಂತೆ ಪ್ರಮುಖವಾಗಿ ಮೂರು ಶಾಸನಗಳು ಲಭ್ಯವಾಗಿವೆ. ಅವುಗಳಲ್ಲಿ ಗುಬ್ಬಿಯ ೬೧ನೇ ಶಾಸನವು ಪ್ರಮುಖವಾದುದು. ಈ ಶಾಸನದಲ್ಲಿ ಚಾಲುಕ್ಯರ ಕುಟುಂಬಕ್ಕೆ ಸಂಬಂಧಿಸಿದ ವಿವರಣೆಯೂ ಇದೆ. ಚಾಲುಕ್ಯರ ಬಾಲವರ್ಮ, ಅವರ ಮಗ ಯಶೋವರ್ಮ, ಅವನ ಪುತ್ರ ವಿಮಾಲಾದಿತ್ಯರ ಬಗ್ಗೆ ವಿವರಣೆಗಳಿವೆ. ವಿಮಲಾದಿತ್ಯನು ವೀರ ರಾಜನೆಂದು ಹೆಸರು ಪಡೆದು ಗಂಗ ಮಂಡಲಕ್ಕೆಲ್ಲಾ ಅಧಿರಾಜನಾಗಿದ್ದನು. ಕೆಲವು ತಾಮ್ರ ಶಾಸನಗಳ ಗುಂಪಿನಲ್ಲಿ ಇರುವ ಈ ಶಾಸನ ರಾಷ್ಟ್ರಕೂಟರ ಅರಸರ ಬಗ್ಗೆ ಮಾಹಿತಿ ಒದಗಿಸುತ್ತದೆ.[೩೪]

ಈ ಜಿಲ್ಲೆಯಲ್ಲಿ ದೊರೆತಿರುವ ರಾಷ್ಟ್ರಕೂಟರ ಮತ್ತೊಂದು ದಾಖಲೆ ಎಂದರೆ ಮಧುಗಿರಿ ಪರಿಸರದಿಂದ ಸುಮಾರು ೩೦ ಕಿ.ಮೀ ದೂರದಲ್ಲಿ ದೊರೆತಿರುವ ಶಿರಾದ ೨೭ನೇ ಶಾಸನದಲ್ಲಿ ರಾಷ್ಟ್ರಕೂಟರ ಕೊನೆಯ ಅರಸು ಇಂದ್ರರಾಜನು ನಡೆಸಿದ ದಿಗ್ವಿಜಯಗಳು, ಕದನಗಳು ಹಾಗೂ ಅವನ ಸಾವಿನ ರೀತಿಯನ್ನು ತಿಳಿಸುವುದರಿಂದ ಈ ಶಾಸನವು ಇತಿಹಾಸಕಾರರಿಗೆ ಮಹತ್ವದ್ದಾಗಿದೆ. ಈ ಪರಿಸರದ ಚರಿತ್ರೆಯನ್ನು ಪ್ರತಿಬಿಂಬಿಸುತ್ತದೆ. ಹಾಗೆಯೇ ಮಣ್ಣೆಯಲ್ಲಿ ದೊರೆತ ರಾಷ್ಟ್ರಕೂಟರ ಮೂರನೆ ದಾಖಲೆಯು ೯೦೩ರ ಸುಮಾರಿಗೆ ಸೇರಿದ್ದು, ದೊರೆ ಎರಡನೇ ಕೃಷ್ಣನ ಕಾಲಾವಧಿಗೆ ಸಂಬಂಧಿಸಿದ್ದಾಗಿದೆ. ಮಧುಗಿರಿ ಪರಿಸರವು ರಾಷ್ಟ್ರಕೂಟರ ಆಳ್ವಿಕೆಯ ಪ್ರದೇಶದ ವ್ಯಾಪ್ತಿಗೆ ಒಳಪಟ್ಟಿತ್ತು. ಎಂದು ತಿಳಿಯಬಹುದು.[೩೫]

೨.೨.೩ ಕಲ್ಯಾಣ ಚಾಲುಕ್ಯರು

ಬಾದಾಮಿ ಚಾಲುಕ್ಯರ ಉತ್ತರಾದಿಕಾರಿಗಳೆಂದು ಕರೆದುಕೊಳ್ಳುವ ಕಲ್ಯಾಣ ಚಾಲುಕ್ಯರು ರಾಷ್ಟ್ರಕೂಟರನ್ನು ಸೋಲಿಸಿ ಅಧಿಕಾರವನ್ನು ಪಡೆದರು. ಈ ವಂಶದ ಎರಡನೇ ತೈಲನು ೯೭೩ರಲ್ಲಿ ಪಟ್ಟವೇರಿದ ವಿಚಾರ ಆರನೆಯ ವಿಕ್ರಮಾದಿತ್ಯನ ಗದುಗಿನ ಶಾಸನದಿಂದ ತಿಳಿಯುತ್ತದೆ. ಈಗಿನ ಬೀದರ್ ಜಿಲ್ಲೆಯ ಬಸವ ಕಲ್ಯಾಣವು ಇವರ ರಾಜಧಾನಿಯಾಗಿತ್ತು.[೩೬]

ಮಧುಗಿರಿಯನ್ನು ಒಳಗೊಂಡಂತೆ ತುಮಕೂರು ಜಿಲ್ಲೆಯ ಬಹುಭಾಗ ಕಲ್ಯಾಣ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿದ್ದಿತು. ಎಂಬುದಕ್ಕೆ ಕೆಲವು ಶಾಸನಗಳು ಮಾಹಿತಿ ನೀಡುತ್ತವೆ. ಕಲ್ಯಾಣ

[illegible]

[illegible]

[illegible]

[illegible]

ಚಾಲುಕ್ಯರ ಚರಿತ್ರೆ ನಾಡಿನ ಬಹುಭಾಗ ವ್ಯಾಪಿಸಿದೆ. ಈ ಮನೆತನದ ನಾಲ್ಕನೇಯ ಸೋಮೇಶ್ವರನ ಮಹಾಮಂಡಳೇಶ್ವರನ ಸಾಮಂತನಾಗಿ ನಿಡಗಲ್ಲು ಚೋಳರಾಜ ತ್ರಿಭುವನಮಲ್ಲ ಸಾಮಂತನಾಗಿ ಆಳಿದ್ದನು. ಶಿರಾದ ಹುಲಿಕುಂಟಿ ಹೋಬಳಿ ಬರಗೂರು ಗ್ರಾಮದ ನರಸನನಾಯಕನ ಹೊಲದಲ್ಲಿ ದೊರೆತ ಶಾಸನವಾಗಿದೆ.[೩೭]

ಕಲ್ಯಾಣದ ಚಾಲುಕ್ಯರು ತುಮಕೂರು ಜಿಲ್ಲೆಯ ಪಶ್ಚಿಮ ಮತ್ತು ಉತ್ತರ ಭಾಗಗಳಲ್ಲಿ ಆಡಳಿತದ ಹಿಡಿತ ಹೊಂದಿದ್ದರೆಂದು ಶಾಸನಗಳೂ ಹೇಳುತ್ತವೆ. ಆದರೆ ಈ ಶಾಸನಗಳು ನೇರವಾಗಿ ಕಲ್ಯಾಣ ಚಾಲುಕ್ಯ ಪರಮಾಧಿಕಾರ ಹಾಗೂ ಅವರ ಬಿರುದು ಬಾವಲಿಗಳ ಬಗೆಗೆ ವ್ಯಕ್ತವಾಗಿದೆ. ಚಾಲುಕ್ಯರ ಬಹುತೇಕ ಶಾಸನಗಲೂ ತಿಪಟೂರು, ಚಿಕ್ಕನಾಯಕನಹಳ್ಳಿ, ಪಾವಗಡ, ಗುಬ್ಬಿ, ಶಿರಾ ತಾಲ್ಲೂಕಿನಲ್ಲಿ ದೊರೆತಿವೆ.[೩೮] ಶಾಸನದ ಆಧಾರದ ಮೇಲೆ ಮಧುಗಿರಿ ಪರಿಸರ ಕಲ್ಯಾಣ ಚಾಲುಕ್ಯರ ಆಳ್ವಿಕೆಗೆ ಒಳಪಟ್ಟಿತು ಎಂದು ತಿಳಿಯಬಹುದು.

೨.೨.೪. ನೊಳಂಬರು

ನೊಳಂಬ ಅಥವಾ ನೊಳಂಬಪಲ್ಲವರ ಮನೆತನವು ಕರ್ನಾಟಕದಲ್ಲಿ ಆಳಿದ ಅನೇಕ ಪ್ರಮುಖ ರಾಜಮನೆತನಗಳಲ್ಲಿ ಒಂದು ಕ್ರಿ.ಶ. ೮ನೇ ಶತಮಾನದಿಂದ ಸುಮಾರು ಮೂರು ಶತಮಾನಗಳ ಕಾಲ ಆಳಿದ ನೊಳಂಬರು ಕಂಚಿಯ ಪಲ್ಲವರ ವಂಶದೊಂದಿಗೆ ಮೂಲವನ್ನು ಕಲ್ಪಿಸಿಕೊಳ್ಳುತ್ತಾರೆ.[೩೯]

ಮಧುಗಿರಿ ಪರಿಸರವನ್ನು ಒಳಗೊಂಡಂತೆ ತುಮಕೂರು ಜಿಲ್ಲೆಯಲ್ಲಿ ನೊಳಂಬರು ಆಳ್ವಿಕೆಯನ್ನು ಗುರುತಿಸಬಹುದು. ಇವರ ರಾಜ್ಯವು ನೊಳಂಬವಾಡಿ (೩೨೦೦೦) ಎಂಬ ಹೆಸರು ಹೊಂದಿತ್ತು. ಇದೇ ಜಿಲ್ಲೆಯ ಹೇಮಾವತಿ ಅಥವಾ ಹೆಂಜೇರು (ಈಗ ಇದು ಆನಂತಪುರ ಜಿಲ್ಲೆಯ ಮಡಕ ಶಿರಾ ತಾಲ್ಲೂಕಿನಲ್ಲಿದೆ)ವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಸುಮಾರು ೫೦೦ ವರ್ಷಗಳ ಕಾಲ ಆಳಿದ ಕೀರ್ತಿ ಈ ಮನೆತನಕ್ಕೆ ಸೇರುತ್ತದೆ.

ತುಮಕೂರು ಜಿಲ್ಲೆಯ ಮಧುಗಿರಿ, ಪಾವಗಡ, ಮತ್ತು ಶಿರಾ ತಾಲ್ಲೂಕುಗಳ ಪ್ರದೇಶಗಳು ನೊಳಂಬುವಾಡಿ ರಾಜ್ಯದ ಅಂಗಗಳಾಗಿದ್ದವು.[೪೦]

ಹೇಮಾವತಿಯ ಸ್ತಂಭ ಶಾಸನದಿಂಬ ನುಂಗಳ (ಕ್ರಿ.ಶ.ಸು. ೭೪೦ರಿಂದ ೭೭೫)ನು ನೊಳಂಬರ ಮೊದಲನೆಯ ಅರಸನೆಂದು ತಿಳಿದುಬರುತ್ತದೆ.[೪೧] ಇವನ ನಂತರ ಸಿಂಹಪೋತ (ಕ್ರಿ.ಶ ಸು ೭೭೫-೮೦೦)ನು ನೊಳಂಬ ಪಲ್ಲವರ ಉತ್ತರಾಧಿಕಾರಿಯಾದನೆಂದು ಚಿತ್ರದುರ್ಗ ಜಿಲ್ಲೆ ದೊಡ್ಡ ಉಳ್ಳರ್ತಿಯ ಶಾಸನ ಉಲ್ಲೇಖಿಸುತ್ತದೆ. ಸಿಂಹಪೋತನ ಮಗ ಚಾರು ಪೊನ್ನೇರನು

(ಕ್ರಿಶ ೮೦೦-೮೩೦) ಆಳ್ವಿಕೆಗೆ ಬಂದನು. ರಾಷ್ಟ್ರ ಕೂಟರ ೩ನೇ ಗೋವಿಂದನ ಮಾಂಡಳಿಕನಾಗಿ ಚಿತ್ರದುರ್ಗ ಜಿಲ್ಲೆಯಲ್ಲಿ ರಾಜ್ಯವಾಳುತ್ತಿದ್ದ. ಈತನು ನೊಳಂಬರಿಗೆ ೧೦೦೦ ದೀರ್ಗುಂದ-೩೦೦ ನಾಡುಗಳನ್ನು ಸಾಮಂತನಾಗಿ ಆಳುತ್ತಿದ್ದ ಅಂಶ ಚಳ್ಳಕೆರೆ ತಾಲ್ಲೂಕು ಚಿಕ್ಕಮಧುರೆಯ ಶಾಸನದಿಂದ ತಿಳಿದುಬರುವುದು.[೪೨] ಚಾರುಪೊನ್ನೆರನ ಮಗ ಪಲ್ಲವಮಲ್ಲನು ತೊಂಡುರು, ಮಲ್ಚರ್-೧೨, ಅಮ್ಮವಳ್ಳಿ-೧೨, ಕೋಲುರು-೧೨, ಗಂಗವೂರು-೩೦ ಮೊದಲಾದ ಪ್ರತ್ಯಾಗಳನ್ನು ಆಳುತ್ತಿದ್ದರೆಂಬುದನ್ನು ತಿಳಿಸುತ್ತದೆ. ಈತನ ರಾಜಕೀಯ ಅನುಕೂಲಕ್ಕಾಗಿ ರಾಷ್ಟ್ರಕೂಟರ ೩ನೇ ಗೋವಿಂದನ ಸಮಾಂತನಾದನು.[೪೩]

ತುಮಕೂರು ಜಿಲ್ಲೆಯಲ್ಲಿ ಕೆಲವು ಶಾಸನಗಳು ದೊರೆತಿವೆ. ತನ್ನ ತಂದೆ ಪೊಳಲ್ಚೋರನ ನಂತರ ಪಟ್ಟಕ್ಕೆ ಬಂದ ನೊಳಂಬಧಿರಾಜ ಮಹೇಂದ್ರನ (ಕ್ರಿ.ಶ.೮೭೦ ರಿಂದ ೮೯೭) ಕಾಲದ ಮೂರು ಈ ಜಿಲ್ಲೆಯಲ್ಲಿ ದೊರೆಕಿವೆ. ೨೪ ಮತ್ತು ೩೮ನೇ ಸಂಖ್ಯೆಯ ಶಾಸನಗಳು ಶಿರಾದಲ್ಲೂ ೪೫ನೇ ಸಂಖ್ಯೆಯ ಶಾಸನವು ಪಾವಗಡದಲ್ಲಿ ದೊರೆಕಿದೆ. ಈ ಎರಡು ಶಾಸನಗಳಲ್ಲಿ ಮಹೇಂದ್ರ ವಂಶ. ಚೋಳ ಮತ್ತು ಇತರ ಶತ್ರುಗಳನ್ನು ಸದೆಬಡಿದು ಅವರ ರಾಜ್ಯವನ್ನು ವಶಪಡಿಸಿಕೊಂಡನೆಂದು ಉಲ್ಲೇಖಿಸಲಾಗಿದೆ. ಶಿರಾ ೩೮ನೇ ಶಾಸನದಲ್ಲಿ ಮಹೇಂದ್ರನು ಬರಗೂರಿನಲ್ಲಿ ಬೀಡುಬಿಟ್ಟಾಗ, ಅಲ್ಲಿನ ದೇವರ ಮಹಾದೇವನಿಗೆ ತನ್ನ ದಾನ,ದತ್ತಿ ನೀಡಿ ಮಹೇಂದ್ರೇಶ್ವರ ಮೂರ್ತಿ ಪ್ರತಿಷ್ಠಾಪಿಸಿ ಅದರ ಪೂಜೆ ಸೇವಾ ಕಾರ್ಯಗಳಿಗಾಗಿ ಶಿರಾ ನಾಡಿನ ನಂದೂರು ಪ್ರಾಂತ್ಯವನ್ನು ದಾನವಾಗಿ ನೀಡಿ, ರಾಜ್ಯವಾಳಿದ ಉಲ್ಲೇಖಗಳಿವೆ.[೪೪]

ಕೆಲವು ಶಾಸನಗಳು ಕ್ರಿ.ಶ. ೮೯೭ರ ಮಧುಗಿರಿ ತಾಲ್ಲೂಕಿನ ಮಿಡಿಗೇಶಿ ಬಳಿ ದೊರೆತ ೫೨ನೇಯ ಮತ್ತು ೨೭ನೆಯ ಶಾಸನಗಳಲ್ಲಿ ಮಹೇಂದ್ರ ರಾಜನ ಮಗನಾದ ಅಯ್ಯಪ್ಪದೇವ ಅಥವಾ ನನ್ನಿಗನ ಬಗ್ಗೆ ಮಾಹಿತಿನೀಡುತ್ತವೆ. ಈ ನನ್ನಿಗನನ್ನು ಶಾಸನಗಳಲ್ಲಿ ನೊಳಂಬಾದಿ ರಾಜ ನೊಲಿಯಪ್ಪನೆಂದು ಹೇಳಲಾಗಿದೆ. ಶಿರಾದ ೩೯ನೇಯ ಶಾಸನದಲ್ಲಿ ಕ್ರಿ.ಶ.೯೨೦ರಲ್ಲಿ ಬರಗೂರಿನ ಮಹೇಂದ್ರೇಶ್ವರ ದೇವಾಲಯಕ್ಕೆ ದಾನ ಧರ್ಮದ ವಿಚಾರಗಳು ತಿಳಿಸುತ್ತದೆ. ತುಮಕೂರು ಜಿಲ್ಲೆಯಲ್ಲಿ ಹಲವು ಶತಮಾನಗಳವರೆಗೆ ವೈಭವದಿಂದ ಆಳಿದ ನೊಳಂಬರು ಕರ್ನಾಟಕದ ಸಾಮಂತ ಮನೆತನಗಳಲ್ಲಿ ಮಹತ್ವ ಸ್ಥಾನ ಪಡೆದಿದ್ದರು. ಸಾಂಸ್ಕೃತಿಕ ಮುನ್ನಡೆ ಕಾರ್ಯದಲ್ಲಿ ಇವರ ಸೇವೆ ಗಣನೀಯವಾದುದು ಎಂದು ಹೇಳಬಹುದು.

೨.೨.೫. ಚೋಳರು.

ಮಧುಗಿರಿ ಪರಿಸರವನ್ನು ಒಳಗೊಂಡತೆ ತುಮಕೂರು ಜಿಲ್ಲೆಯ ಬಹುಭಾಗ ಚೋಳರ ಆಳ್ವಿಕೆಗೆ ಒಳಪಟ್ಟಿದ್ದಿತು. ಎಂಬುದಕ್ಕೆ ಕೆಲವು ಶಾಸನಗಳು ಮಾಹಿತಿ ನೀಡುತ್ತವೆ. ಸಂಗಮ

ಚೋಳರ ಕಾಲದಿಂದಲೂ ದಕ್ಷಿಣ ಕರ್ನಾಟಕ ಮತ್ತು ಆಂದ್ರ ಪ್ರದೇಶದ ಕೆಲವುಭಾಗಗಳು ಚೋಳರ ಆಳ್ವಿಕೆಗೆ ಒಳಪಟ್ಟಿದ್ದವು.

ಕರ್ನಾಟಕದಲ್ಲಿ ಚೋಳ ಆಳ್ವಿಕೆಯ ಮೊದಲ ಕುರುಹು ಬೆಂಗಳೂರಿನ 'ಕುಡಲೂರಿನಲ್ಲಿ' ದೊರೆತಿದೆ. ಇಂಪೀರಿಯಲ್ ಚೋಳ ಸಾಮ್ರಾಜ್ಯದ ಸ್ಥಾಪಕ ವಿಜಯಲಯನಿಗೆ ಸೇರಿದ ಈ ಶಾಸನ ತಮಿಳಿನಲ್ಲಿದೆ. ಒಂದನೇ ರಾಜರಾಜನ ಕಾಲದಲ್ಲಿ ಮೊದಲ ಬಾರಿಗೆ ತುಮಕೂರಿನ ಕುಣಿಗಲ್, ಮಧುಗಿರಿ ತಾಲ್ಲೂಕು ಚೋಳರ ವಶವಾಗಿದ್ದವು. ಈ ಭಾಗಗಳು ಒಂದನೇ ರಾಜೇಂದ್ರ ಚೋಳ, ಒಂದನೇ ರಾಜಾಧಿರಾಜ ಚೋಳ, ರಾಜೇಂದ್ರದೇವ ಚೋಳ, ವೀರ ರಾಜೇಂದರ ಚೋಳ, ಒಂದನೇ ಕುಲೋತ್ತುಂಗ ಚೋಳನ ಕಾಲದವರೆಗೂ ಚೊಳ ಸಾಮ್ರಾಜ್ಯದ ಭಾಗಗಳಾಗಿದ್ದವರು.[೪೬] ನಂತರ ಚೋಳರಿಂದ ನೇಮಕಗೊಂಡಿದ್ದು ಕೆಲವರು ಅಧಿಕಾರಗಳು ನಿಡುಗಲ್ ಸುತ್ತಮುತ್ತಲಿನ ಪ್ರದೇಶಗಳನ್ನು ಆಳುತ್ತಿದ್ದು, ನಂತರದಲ್ಲಿ ನಿಡುಗಲ್ ಚೋಳರೆಂದು ಗುರುತಿಸಿಕೊಂಡರು ಎಂದು ಕುಣಿಗಲ್ ತಾಲ್ಲೂಕು ಕೊತ್ತಗೆರೆ ಸ್ಥಳದಲ್ಲಿ ಕ್ರಿಶ ೧೦೪೪ರ ಶಾಸನದಲ್ಲಿ ಒಂದನೇ ರಾಜಾರಾಜ ಚೋಳನ ಕಾಲಕ್ಕೆ ಸಂಬಂಧಿಸಿದ್ದು, ಈ ಮೇಲಿನ ಎಲ್ಲಾ ವಿಷಯಗಳು ಉಲ್ಲೇಖವಾಗಿವೆ.[೪೭]

ತುಮಕೂರಿನ ಪರಿಸರದಲ್ಲಿ ಚೋಳರಿಗೆ ಸಂಬಂಧಿಸಿದ ಎರಡು ಶಾಸನಗಳು ಮಾತ್ರ ಲಭ್ಯವಾಗಿದ್ದು, ಇವು ತಮಿಳು ಶಾಸನಗಳಾಗಿವೆ. ೧೧ನೇ ಶತಮಾನಕ್ಕೆ ಎರಡು ಶಾಸನಗಳು ಸೇರಿವೆ. ಈ ಶಾಸನಗಳು ಕುಣಿಗಲ್ ತಾಲ್ಲೂಕಿನ ಕೊತ್ತಗೆರೆ ಮತ್ತು ಮಧುಗಿರಿ ತಾಲ್ಲೂಕಿನ ತೆರೆಮಾರಿನಲ್ಲಿ ದೊರೆತಿವೆ. ಈ ಎರಡೂ ತಾಲ್ಲೂಕಿನ ಅನೇಕ ಭಾಗಗಳು ಚೋಳರಿಗೆ ಸೇರಿದ್ದವೆಂದು ಹೇಳಬಹುದು.[೪೮]

ಮಧುಗಿರಿ ತಾಲ್ಲೂಕಿನಲ್ಲಿರುವ ತೆರೆಯೂರಿನಲ್ಲಿರುವ ಚೋಳರ ಕಾಲದ ಎರಡನೇ ಶಾಸನವು ಕ್ರಿ.ಶ.೧೦೬೧ ರಲ್ಲಿ ವೀರರಾಜೇಂದ್ರ ಚೋಳನ ಕಾಲದಾಗಿದ್ದು, ಈ ಶಾಸನಗಳಿಂದ ಅನೇಕ ವಿಷಯಗಳನ್ನು ಈ ಕೆಳಕಂಡಂತೆ ವಿಶ್ಲೇಷಿಸಬಹುದು.

ತುಮಕೂರು ಜಿಲ್ಲೆಯಲ್ಲಿ ಚೋಳರು ಆಡಳಿತದ ಅನುಕೂಲಕ್ಕಾಗಿ ಏಳು ಮಂಡಲಗಳಾಗಿ ವಿಂಗಡಿಸಲಾಗಿತ್ತು. ಏಳು ಮಂಡಲಂಗಳಲ್ಲಿ ವಿಕ್ರಮಚೋಳ ಮಂಡಲಂ ಸಹ ಒಂದು ಪೂರ್ವಕ್ಕೆ ಉತ್ತರ ಆರ್ಕಾಟನಿಂದ ಪಶ್ಚಿಮಕ್ಕೆ ಕುಣಿಗಲ್‌ವರೆಗೂ ವ್ಯಾಪಿಸಿತು. ಒಂದನೇ ರಾಜೇಂದ್ರ ಚೋಳನು ವಿಕ್ರಮ ಚೋಳ ಮಂಡಲಂನ್ನು ಸ್ಥಾಪಿಸಿದನು.[೪೯]

ತುಮಕೂರಿನ ಭಾಗವಾಗಿ ಹೊಂದಿದ್ದಂತಹ ಮತ್ತೊಂದು ಮಂಡಲ ವಿಜಯ ರಾಜೇಂದ್ರ ಮಂಡಲ ಈ ಮಂಡಲದ ಸ್ಥಾಪನೆ ೩ನೇ ರಾಜೇಂದ್ರ ದೇವ ಇವನ ಕಾಲದಲ್ಲಿ ಮಧುಗಿರಿ ಮತ್ತು ಕೋಲಾರದ ಕೆಲವು ಭಾಗಗಳು ಸೇರಿ ವಿಜಯರಾಜೇಂದ್ರ ಮಂಡಲವಾಗಿತ್ತು.

ಕ್ರಿ.ಶ.೧೦೧೮ ರಿಂದ ೧೦೫೪ ರವರೆಗೆ ಆಳಿದ ರಾಜಾದಿರಾಜದೇವ ಚೋಳನು ಕ್ರಿ.ಶ. ೧೦೪೮ರಲ್ಲಿ ಕುಣಿಗಲ್ ರಾಜೇಂದ್ರ ಚೋಳಪುರವೆಂದು ಪುನರ್ ನಾಮಕರಣ ಮಾಡಿದನು.[೫೦]

ರಾಜಾಧಿರಾಜನ ನಂತರ ಅವನ ಮಗ ರಾಜೇಂದ್ರ ದೇವನು ಕ್ರಿ.ಶ. ೧೦೫೨ ರಲ್ಲಿ ಆಳ್ವಿಕೆಗೆ ಬಂದನು. ಇವನ ಒಂದು ಶಾಸನ ಮಧುರಿಯಲ್ಲಿ ದೊರಕಿದೆ. ರಾಜೇಂದ್ರ ದೇವನ ಆಕ್ರಮಣಗಳ ಬಗ್ಗೆ ಈ ಶಾಸನ ತಿಳಿಸುತ್ತದೆ.[೫೧] ಮಧುಗಿರಿ ಪರಿಸರದಲ್ಲಿ ಸಿದ್ದಪುರದ ಕರೆ ಪಕ್ಕದಲ್ಲಿ ಚೋಳೇಶ್ವರ ಪ್ರಸಿದ್ಧವಾದ ದೇವಾಲಯ ಇದೆ. ಈ ಪ್ರದೇಶವು ಚೋಳರ ಅಧೀನಕ್ಕೆ ಸೇರಿತ್ತೆಂದು ಊಹಿಸಬಹುದಾಗಿದೆ.

ತುಮಕೂರು ಜಿಲ್ಲೆಯಲ್ಲಿ ಇಂಪೀರಿಯಲ್ ಚೋಳ ದೊರೆಗಳಾದ ರಾಜೇಂದ್ರ ಚೋಳ ಮತ್ತು ರಾಜಧಿರಾಜ ಆಳ್ವಿಕೆ ನಡೆಸಿದ್ದಾರೆ. ಈ ಪ್ರದೇಶವನ್ನು ಸು ೭೦ ವರ್ಷಗಳ ಕಾಲ ಆಳಿದ್ದಾರೆ. ಚೋಳರು ದೇವಾಲಯಗಳ ನಿರ್ಮಾಣ ಮಾಡುವುದರ ಮೂಲಕ ಕಲೆ ಮತ್ತು ವಾಸ್ತುಶಿಲ್ಪಕ್ಕೆ ಮಹತ್ವ ನೀಡಿದ್ದರು. ಚೋಳರ ಇಂತಹ ಆಳ್ವಿಕೆಯ ನಿಡುಗಲ್‌ನಲ್ಲಿ ಸಾಮಂತ ಚೋಳರು ಉದಯಿಸಲು ಕಾರಣವಾಯಿತು.[೫೨] ಈ ಎರಡು ಶಾಸನಗಳಲ್ಲಿ ಈ ಮೇಲಿನ ರೀತಿಯಲ್ಲಿ ಉಲ್ಲೇಖಿಸಲಾಗಿದೆ.

೨.೨.೬ ಹೊಯ್ಸಳರು

ಕರ್ನಾಟಕವನ್ನಾಳಿದ ಬಹುಮುಖ್ಯ ರಾಜಮನೆತನಗಳಲ್ಲಿ ಹೊಯ್ಸಳ ವಂಶವು ಪ್ರಮುಖವಾಗಿದೆ. ಕರ್ನಾಟಕದ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯಲ್ಲಿ ತನ್ನದೇ ಆದ ಸ್ಥಾನವನ್ನು ಹೊಂದಿರುವ ಹೊಯ್ಸಳ ಮನೆತನವು ಕ್ರಿ.ಶ.೧೧ ನೇ ಶತಮಾನದಿಂದ ೧೪ ನೇ ಶತಮಾನದ ಮಧ್ಯಕಾಲದವರೆಗೂ ಕರ್ನಾಟಕ ಮಾತ್ರವಲ್ಲದೆ ದಕ್ಷಿಣದ ಬಹುಭಾಗಗಳಲ್ಲಿ ಆಳ್ವಿಕೆ ಮಾಡಿದ್ದಾರೆ. ರಾಜಕೀಯ, ಸಾಮಾಜಿಕ, ಸಾಂಸ್ಕೃತಿಕ, ಧಾರ್ಮಿಕ, ಸಾಹಿತ್ಯಕ ಮತ್ತು ಶಿಲ್ಪಕಲೆಗಳ ದೃಷ್ಟಿಯಿಂದ ಹೊಯ್ಸಳರ ಆಳ್ವಿಕೆಯ ಅವಧಿ ಅತ್ಯಂತ ಪ್ರಾಮುಖ್ಯವಾದುದು. ಪ್ರಸ್ತುತ ಮಧುಗಿರಿ ತಾಲ್ಲೂಕನ್ನು ಒಳಗೊಂಡಂತೆ ತುಮಕೂರು ಜಿಲ್ಲೆಯ ಬಹುಭಾಗ ಹೊಯ್ಸಳರ ಆಳ್ವಿಕೆಗೆ ಒಳಪಟ್ಟಿದ್ದಿತು ಎಂಬುದಕ್ಕೆ ಹಲವು ಶಾಸನಗಳು ಮಾಹಿತಿ ನೀಡುತ್ತವೆ. ಇವರು ದ್ವಾರಸಮುದ್ರವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಇನ್ನಿತರ ಪ್ರದೇಶ ಮೇಲೆ ಹಿಡಿತ ಹೊಂದಿದ್ದರು.

ತುಮಕೂರು ಜಿಲ್ಲೆಯಲ್ಲಿ ಪ್ರಾಚೀನ ಶಾಸನ ತಿಪಟೂರು ತಾಲ್ಲೂಕಿನಲ್ಲಿ ಸಿಕ್ಕಿದೆ. ಕ್ರಿಶ ೧೦೭೮ರಲ್ಲಿ ಬರೆಯಿಸಿದ್ದು, ವಿನಯಾದಿತ್ಯ ಮತ್ತು ವಿಷ್ಣುವರ್ಧನನಿಗೆ ಸಂಬಂಧಿಸಿದ ಕೆಲವು ಶಾಸನಗಳು ತಿಪಟೂರು ತಾಲ್ಲೂಕಿನಲ್ಲಿ ದೊರಕಿವೆ. ಕ್ರಿಶ ೧೧೩೦ರಲ್ಲಿ ಬರೆಯಿಸಲ್ಪಟ್ಟ ತಿಪಟೂರಿನ ೧೦೪ ನೇ ಶಾಸನ ಕ್ರಿ.ಶ. ೧೧೩೪ ರಲ್ಲಿ ರಚಿಸಲ್ಪಟ್ಟ ಶಾಸನವು ವಿಷ್ಣುವರ್ಧನನ ಕಾಲಕ್ಕೆ ಸೇರಿದ್ದವುಗಳಾಗಿವೆ.[೩೩] ಈ ಜಿಲ್ಲೆಗೆ ಅತಿ ಹೆಚ್ಚು ಶಾಸನಗಳನ್ನು (೧೫೭) ಕೊಟ್ಟ ಕೀರ್ತಿ ಹೊಯ್ಸಳರದು. ಅದೇ ರೀತಿ ವಾಸ್ತುಶಿಲ್ಪದಲ್ಲಿ ಅತ್ಯುನ್ನತ ಶೈಲಿಯನ್ನು ಬಳಸಿಕೊಂಡು ಈ ಜಿಲ್ಲೆಯಲ್ಲಿ ದೇವಾಲಯಗಳನ್ನು ನಿರ್ಮಿಸಿರುವುದನ್ನು ಕಾಣಬಹುದು. ಅರಳುಗುಪ್ಪೆ, ಶೆಟ್ಟಿಕೆರೆ, ನೊಣವಿನ ಕೆರೆ, ಕೈದಾಳ, ನಿಟ್ಟೂರು, ತುರುವೇಕೆರೆ ಮತ್ತು ನಾಗಲಾಪುರದಲ್ಲಿ ವಿಶಿಷ್ಟ ಶೈಲಿಯ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಹೊಯ್ಸಳ ದೊರೆ ಎರಡನೆಯ ವೀರಬಲ್ಲಾಳನ ಶಾಸನಗಳು ತುಮಕೂರು ಜಿಲ್ಲೆಯಲ್ಲಿ ದೊರಕಿದ್ದು, ಚಿಕ್ಕನಾಯಕನಹಳ್ಳಿ ೩೬ನೇ ಶಾಸನದಲ್ಲಿ ಬಲ್ಲಾಳದೇವನ ದಿಗ್ವಿಜಯಗಳ ಬಗ್ಗೆ ಇದೆ. ಇವನ ರಾಜಧಾನಿ ಉಚ್ಛಂಗಿಯಾಗಿದ್ದು, ಈ ಶಾಸನದಲ್ಲಿ ಬಲ್ಲಾಳದೇವನನ್ನು ದುಷ್ಟ ಶಿಕ್ಷಕ, ಶಿಷ್ಟ ಪಾರಿಪಾಲಕನೆಂದು ಬಣ್ಣಿಸಲಾಗಿದೆ.[೩೪] ಇವನ ಸೇನಾಪತಿ ಮಾಧವ ದಂಡಾಧಿಪತಿಯ ಬಗ್ಗೆ ಉಲ್ಲೇಖಿಸಲಾಗಿದೆ. ಶಿರಾದಲ್ಲಿ ಬೋರಸಂದ್ರದ ಹೊಯ್ಸಳ ಕಾಲದ ವೀರಗಲ್ಲು ಶಾಸನದಲ್ಲಿ ವೀರಬಲ್ಲಾಳನು ಉಚ್ಚಂಗಿ ಪಾಂಡ್ಯರು, ನೊಳಂಬವಾಡಿಯನ್ನು ಆಳುತ್ತಿದ್ದ ಸಮಯದಲ್ಲಿ ಈ ಪ್ರದೇಶದ ಮೇಲೆ ದಾಳಿಮಾಡಿ ಸೀಭಿ ಪ್ರಾಂತ್ಯವನ್ನು ವಶಪಡಿಸಿಕೊಂಡನು ಎಂದು ಉಲ್ಲೇಖವಾಗಿದೆ.[೩೫]

ಕ್ರಿ.ಶ೧೨೨೦ ರಿಂದ ೧೨೩೮ವರೆಗೆ ಆಳಿದ ಹೊಯ್ಸಳರ ಎರಡನೇ ನರಸಿಂಹನಿಗೆ ಸೇರಿದ ಶಾಸನಗಳು ದೊರೆತಿವೆ. ಕ್ರಿಶ ೧೨೨೬ರಲ್ಲಿ ಬರೆಸಿದ ಗುಬ್ಬಿಯ ಬಳಿ ಇರುವ ೧೧ ನೇ ಶಾಸನವು ನರಸಿಂಹ ದೊರೆಯ ಹಿರಿಯ ರಾಣಿ ಪದ್ಮಮಹಾದೇವಿಯ ಮಂತ್ರಾಲೋಚನ ಸಭೆಯ ವಿಶೇಷಾಧಿಕಾರಿ ನಾಗಣ್ಣನ ಬಗ್ಗೆ ತಿಳಿಸುತ್ತದೆ.[೩೮] ಕ್ರಿ.ಶ.೧೨೩೩ ರಲ್ಲಿ ಬರೆಸಿದ ಗುಬ್ಬಿಯ ೪೫ ನೇ ಶಾಸನದ ಪ್ರಕಾರ ಇವನು ದೋರಸಮುದ್ರದಿಂದ ಆಳುತ್ತಿದ್ದನು ಎಂಬ ವಿಷಯ ತಿಳಿಯುತ್ತದೆ.[೩೬] ಎರಡನೆ ನರಸಿಂಹನ ನಂತರ ಸೋಮೇಶ್ವರನು ೧೨೩೨ರಿಂದ ೧೨೬೭ರವರೆಗೆ ಆಳಿದನು. ಇವನ ಕಾಲದ ಶಾಸನಗಳು ದೊರಕಿದ್ದರೂ ಅವು ರಾಜಕೀಯ ಮಹತ್ವ ಪಡೆದಿಲ್ಲ. ಇವನ ನಂತರ ಪಟ್ಟಕ್ಕೆ ಬಂದ ದೊರೆ ೩ ನೇ ನರಸಿಂಹನ (ಕ್ರಿ.ಶ. ೧೨೫೪-೧೨೯೨) ಕಾಲದ ಅನೇಕ ಶಾಸನಗಳ ಈ ಜಿಲ್ಲೆಯಲ್ಲಿ ದೊರಕಿವೆ. ಈ ಶಾಸನಗಳಲ್ಲಿ ನರಸಿಂಹನ ಬಿರುದುಗಳ ಬಗ್ಗೆ ಉಲ್ಲೇಖಿಸಲಾಗಿದೆ.[೩೭]

ಮೂರನೇ ಬಲ್ಲಾಳ (ಕ್ರಿ.ಶ. ೧೨೯೧ರಿಂದ೧೩೪೨) ವರೆಗೆ ಆಳಿದ್ದಾನೆ. ಹೊಯ್ಸಳರ ದೊರೆ ಮೂರನೇ ಬಲ್ಲಾಳನು ಪಟ್ಟಕ್ಕೆ ಬಂದ ಕಾಲದಲ್ಲಿ ಹೊಯ್ಸಳರಿಗೆ ತುಂಬ ಕಷ್ಟದ ದಿನಗಳಾಗಿದ್ದವು. ಏಕೆಂದರೆ ಮಹಮ್ಮದೀಯರು ಇವರ ರಾಜ್ಯದ ಮೇಲೆ ದಾಳಿ ಮಾಡುತ್ತಿದ್ದರು. ಮಹಮ್ಮದೀಯರು ರಾಜಧಾನಿ ದೋರಸಮುದ್ರವನ್ನು ವಶಪಡಿಸಿಕೊಂಡರು ಎಂದು ಕ್ರಿ.ಶ ೧೩೧೮ ರ ಚಿಕ್ಕನಾಯಕನಹಳ್ಳಿಯ ೪ ನೇ ಶಾಸನ ತಿಳಿಸುತ್ತದೆ.[೫೮] ಹೀಗೆ ಮೇಲಿನ ಎಲ್ಲಾ ಶಾಸನಗಳ ಆಧಾರದಿಂದ ಮಧುಗಿರಿ ಪರಿಸರ ಹೊಯ್ಸಳರ ಆಳ್ವಿಕೆಗೆ ಒಳಪಟ್ಟ ಪ್ರದೇಶವೆಂದು ಹೇಳಬಹುದು.

೨.೨.೭ ವಿಜಯನಗರದ ಅರಸರು

ಕರ್ನಾಟಕದಲ್ಲಿ ಆಳ್ವಿಕೆ ನಡೆಸಿ ಬೆಳಕಿಗೆ ಬಂದ ಪ್ರಮುಖ ರಾಜ ಮನೆತನವೆಂದರೆ ವಿಜಯನಗರ ಸಾಮ್ರಾಜ್ಯ. ಹೊಯ್ಸಳರ ಸಾಮ್ರಾಜ್ಯ ಪತನ ಹೊಂದಿದ ತರುವಾಯ ಅಧಿಕಾರಕ್ಕೆ ಬಂದ ವಿಜಯನಗರ ಸಾಮ್ರಾಜ್ಯ ಕ್ರಿ.ಶ ೧೩೩೬ ರಲ್ಲಿ ಅಧಿಕಾರಕ್ಕೆ ಬಂದು ಕ್ರಿ.ಶ. ೧೫೬೮ ರವರೆಗೆ ಸುಮಾರು ೨೯೯ ವರ್ಷಗಳ ಕಾಲ ಸುಧೀರ್ಘ ಆಳ್ವಿಕೆ ಮಾಡಿದ ಸಾಮ್ರಾಜ್ಯವಾಗಿತ್ತು.[೫೯] ವಿಜಯನಗರದ ಅರಸರು ತುಮಕೂರು ಜಿಲ್ಲೆಯನ್ನು ತಮ್ಮ ಸಾಮ್ರಾಜ್ಯದ ಭಾಗವಾಗಿಸಿಕೊಂಡು ಆಳಿದರು. ವಿಜಯನಗರ ಕಾಲದಲ್ಲಿ ನಿರ್ಮಾಣಗೊಂಡ ಕೆರೆ, ಕಾಲುವೆಗಳು, ದೇವಾಲಯಗಳು, ಅಗ್ರಹಾರಗಳು ಇತ್ಯಾದಿಗಳನ್ನು ಕುರಿತು ಈ ಪ್ರದೇಶದಲ್ಲಿ ಸಿಕ್ಕ ಶಾಸನಗಳೂ ಸಾರುತ್ತವೆ. ಕೇವಲ ರಾಜಕೀಯವಾಗಿ ಅಲ್ಲದೆ ಈ ಜಿಲ್ಲೆಯ ಸಾಮಾಜಿಕ ಮತ್ತು ಸಾಂಸ್ಕೃತಿಕ ಕ್ಷೇತ್ರಗಳಿಗೆ ಇತರ ರಾಜಮನೆತನಗಳಂತೆ ವಿಜಯನಗರ ಅರಸರ ಕೊಡುಗೆಯೂ ಮಹತ್ವವಾದುದೆಂಬುದು ದೊರೆತ ಶಾಸನಗಳಿಂದ ತಿಳಿಯಬಹುದು.

ಕ್ರಿ.ಶ. ೧೨೪೬ರಲ್ಲಿಯೇ ಈ ಪ್ರದೇಶವು (ತುಮಕೂರು) ವಿಜಯನಗರ ಸಾಮ್ರಾಜ್ಯದಲ್ಲಿ ಸೇರಿಹೋದರೂ, ಒಂದನೇ ಹರಿಹರನು ೧೨೫೬ ರವರೆಗೂ ಸಿಂಹಾಸನ ರೂಢನಾಗಿದ್ದರೂ ಅವರಿಗೆ ಸಂಬಂಧಿಸಿದ ಯಾವ ಶಾಸನವೂ ಈ ಜಿಲ್ಲೆಯಲ್ಲಿ ದೊರಕಿಲ್ಲ. ಈ ಜಿಲ್ಲೆಯಲ್ಲಿ ದೊರಕಿರುವ ಬಹಳ ಹಿಂದಿನ ದಾಖಲೆಯೆಂದರೆ ಕ್ರಿ.ಶ. ೧೩೫೪ರ ಪಾವಗಡ ೭೪ ನೇ ಶಾಸನ. ಇದು ಬುಕ್ಕರಾಯ(ಕ್ರಿ.ಶ.೧೩೪೪-೧೩೭೭)ನ ಕಾಲಕ್ಕೆ ಸೇರಿದೆ.

ಮಧುಗಿರಿ ಪರಿಸರದಿಂದ ೩೦ ಕಿ.ಮೀ. ದೂರದಲ್ಲಿರುವ ಶಿರಾ ತಾಲ್ಲೂಕಿನ ಬುಕ್ಕಪಟ್ಟಣ ಹೋಬಳಿ ಗಾಣದಹುಣಸೆ ಗ್ರಾಮದಲ್ಲಿ ಇರುವ ಶಾಸನದಲ್ಲಿ ವಿಜಯನಗರದ ಅರಸ ವೆಂಕಟಪತಿ ಮಹಾರಾಯರ ಪ್ರತಿನಿಧಿಯಾದ ಹರತಿ ಕೆಂಚಪ್ಪನಾಯಕರು ದಳವಾಯಿ ಬಸವನಾಯಕರಿಗೆ

[illegible]

ಹಿರಿಯೂರು ಸ್ಥಳದ ಒಳಗೇ ಬುಕ್ಕಾಪಟ್ಟಣಕ್ಕೆ ಸೇರಿದ ಗಾಣದ ಹುಣಸೆ ಗ್ರಾಮವನ್ನು ಎಲ್ಲಾ ತೆರಿಗೆಗೆಳ ಹಕ್ಕು, ದಾನವಾಗಿ ಕೊಟ್ಟಿರುವ ಗ್ರಾಮವಾಗಿದೆ ಎಂದು ಈ ಶಾಸನದಲ್ಲಿ ಉಲ್ಲೇಖಿಸಲಾಗಿದೆ.[೪೧]

ಶಿರಾ ತಾಲ್ಲೂಕಿನಲ್ಲಿರುವ ಗಾಡಗೆರೆ ಹೋಬಳಿ ತಡಕಲೂರಿನ ಸದಾಶಿವರಾಯನ ಶಾಸನದಲ್ಲಿ ಶಕ, ೧೪೬೨, ಶಾರ್ವರಿ ನಾಮಸಂವತ್ಸರ ಕಾರ್ತಿಕ ಶುದ್ಧ ಪಾಡ್ಯಮಿಯಂದು ಕ್ರಿಶ ೧೫೪೦ ರಲ್ಲಿ ಸದಾಶಿವರಾಯರು ವಿಜಯನಗರ ಸಾಮ್ರಾಜ್ಯವನ್ನು ಆಳುತ್ತಿದ್ದ ಸಮಯದಲ್ಲಿ ಅವನ ಮಹಾಮಂಡಲೇಶ್ವರನಾದ ಅಪ್ರತಿಮವಲ್ಲ, ಮಹಾಬಲ ಚಂಗಯ್ಯ ದೇವರಸನು ತಡಕಲೂರು ಶಿವನೇ ಗೌಡನ ಮಗ ಪನ್ನಪನಿಗೆ ಕೆರೆಯ ತೊಬನ್ನೂ ಕಟ್ಟಿದ್ದಕ್ಕೆ ಕೆರೆಯ ಹಿಂದೆ ಭೂಮಿಯನ್ನು ದಾನವಾಗಿ ಕೊಟ್ಟುದು. ವಿಠಲರಾಜರು ಮತ್ತು ತಿರುಮಲ ಗೌಡನ ಶಿವದೇವಗೌಡನ ಅಮರನಾಯಕತನಕ್ಕೆ ಮೆಚ್ಚಿ ದಾನ ಕೊಟ್ಟನು ಎಂದು ಈ ಶಾಸನದಲ್ಲಿ ಉಲ್ಲೆಖಿತವಾಗಿದೆ.[೪೨]

ಮಧುಗಿರಿ ಪರಿಸರದಿಂದ ೩೦ ಕಿ.ಮೀಟರ್ ದೂರದಲ್ಲಿ ಇರುವ ಶಿರಾ ತಾಲ್ಲೂಕಿನಲ್ಲಿ ದೊರೆತಿರುವ ಶಾಸನಗಳಿಂದ ಮಧುಗಿರಿಯ ಪರಿಸರವು ಇವರ ಆಳ್ವಿಕೆಗೆ ಒಳಪಟ್ಟಿರುವ ಪ್ರದೇಶವಾಗಿದೆ ಎಂದು ತಿಳಿಯಬಹುದು.

ಎರಡನೇ ದೇವರಾಯ (ಕ್ರಿ.ಶ ೧೪೨೨ರಿಂದ೧೪೪೬) ಕಾಲಕ್ಕೆ ಸೇರಿದ ಕೆಲವು ಶಾಸನಗಳು ಈ ಜಿಲ್ಲೆಯಲ್ಲಿ ದೊರಕಿವೆ. ೧೪೨೬ರ ತುಮಕೂರಿನ ೧೧ ನೇ ಶಾಸನ, ಹುಲ್ಲೇನಹಳ್ಳಿಯನ್ನು ಮಲ್ಲಿಭಟ್ಟರಿಗೆ ಗ್ರಾಮವನ್ನು ದಾನವಾಗಿ ನೀಡಿರುವುದು ಉಲ್ಲೇಖವಾಗಿದೆ.[೪೩]

ಕ್ರಿ.ಶ.೧೫೦೩ರ ಮಿಡಿಗೇಶಿ ೫೯ರ ಶಾಸನ ಮಧುಗಿರಿ ತಾಲ್ಲೂಕಿನ ಹಂದ್ರಾಳು ಗ್ರಾಮದಲಿ ದೊರಕಿದೆ. ಈ ಶಾಸನದಲ್ಲಿ ತಿಮ್ಮನಾಯಕನ ಮಗ ತಮ್ಮನಾಯಕನು ಹಂದರಹಾಲ ಗ್ರಾಮವನ್ನು ದೇವಾಲಯದ ಪುರವನ್ನಾಗಿ ಹೆಸರಿಸಿ, ತಿರುಮಲದೇವರ ಸೇವೆಗೆ ಮಾನ್ಯವಾಗಿ ನೀಡಿದನೆಂದು ಉಲ್ಲೇಖಿಸಲಾಗಿದೆ.[೪೪] ನಂತರ ತುಳುವಂಶದ ನರಸನಾಯಕ ಕ್ರಿ.ಶ.೧೪೯೧ ರಿಂದ್ ೧೫೦೩ ರವರೆಗೆ ವಿಜಯನಗರವನ್ನು ಆಳಿದ ಈ ಅವಧಿಯಲ್ಲಿ ತುಳುವ ನರಸನಾಯಕನ ಮತ್ತು ಸಾಳುವ ಇಮ್ಮಡಿ ನರಸಿಂಹನಿಗೆ ಸಂಬಂಧಿಸಿದ ಶಾಸನಗಳು ಈ ಜಿಲ್ಲೆಯಲ್ಲಿ ದೊರಕಿವೆ. ಕುಣಿಗಲ್ ತಾಲ್ಲೂಕಿನ ಚಂದ್ರಹಳ್ಳಿಯಲ್ಲಿ ದೊರಕಿರುವ ೧೪೯೪ ರ ೨೦ ರ ಶಾಸನದಲ್ಲಿ ಉಲ್ಲೇಖವಾಗಿರುವಂತೆ ದೊರೆಗಳು ತಮ್ಮನ್ನು ಮಹಾಮಂಡಲೇಶ್ವರ, ಇಮ್ಮಡಿ ಮಹಾರಾಯರು ಎಂದು ಕರೆದುಕೊಂಡಿದ್ದಾರೆ.[೪೫]

ವಿಜಯನಗರ ಕಾಲದ ಮಿಕ್ಕ ಶಾಸನಗಳು ಬಹುತೇಕವು ಕೃಷ್ಣದೇವರಾಯ (೧೫೦೯–೧೫೨೯) ಅಚ್ಯುತರಾಯ (೧೫೨೯–೧೫೪೨), ಸದಾಶಿವರಾಯ (೧೫೪೨–೧೫೭೦) ಇವರಿಗೆ

ಸೇರಿದ್ದವು. ಕೆಲವು ಚಾರಿತ್ರಿಕ ಹಾಗೂ ಐತಿಹಾಸಿಕ ಮಹತ್ವ ಪಡೆದಿದ್ದರೂ ಅವುಗಳೆಲ್ಲವೂ ಭೂಮಿ, ಗ್ರಾಮಗಳನ್ನು ದಾನವಾಗಿ ನೀಡಿದ್ದು, ಕೆಲವು ಜನಾಂಗದವರಿಗೆ ಕಂದಾಯ ಮಾಫಿ ಮಾಡಿದ್ದನ್ನು ತಿಳಿಸುತ್ತದೆ.[೬೬]

೧೫ ಮತ್ತು ೧೬ ನೇ ಶತಮಾನಗಳಲ್ಲಿ ವಿಜಯನಗರ ಅರಸರು, ತಮ್ಮ ಆಶ್ರಯದಲ್ಲಿದ್ದ ಅಧಿಕಾರಿಗಳಿಗೆ ಮತ್ತು ಸಾಮಂತ ಪಾಳೆಯಗಾರರಿಗೂ, ಭೂ ಪ್ರದೇಶಗಳನ್ನು ಗ್ರಾಮಗಳನ್ನು ನೀಡಿ ಬಿರುದು ಬಾವಲಿಗಳನ್ನು ನೀಡಿದರು, ಆಯಾ ಅಧಿಕಾರಿಗಳು ಪಾಳೆಯಗಾರರು ಸಲ್ಲಿಸಿದ ಸೇವೆಯನ್ನು ಗುರುತಿಸಿ, ಅವರಿಗೆ ಆಯಾ ಪ್ರದೇಶದ ಆಳ್ವಿಕೆಯನ್ನು ನೀಡಿದ್ದರು.[೬೭] ಅಂತಹ ಸಾಮಂತ ಸಂಸ್ಥಾನಗಳನ್ನು ಅಧೀನ ಪಾಳೀಪಟ್ಟುಗಳನ್ನು ಮಧುಗಿರಿ ಪರಿಸರದಲ್ಲಿ ಆಳ್ವಿಕೆ ಮಾಡಿರುವುದನ್ನು ತಿಳಿಯಬಹುದು.

೨.೨.೮. ಮಧುಗಿರಿಯ ಮಹಾನಾಡು ಪ್ರಭುಗಳ ಆಳ್ವಿಕೆ

ಕರ್ನಾಟಕದ ಚರಿತ್ರೆಯಲ್ಲಿ ೧೧ ನೇ ಶತಮಾನದ ಮಧ್ಯದ ವೇಳೆಗೆ ನೊಳಂಬರ ಆಳ್ವಿಕೆಯ ಒಂದು ಘಟ್ಟ ಮುಕ್ತಾಯವಾಗಿ ಮತ್ತು ೧೩ನೇ ಶತಮಾನದಿಂದ ನೊಳಂಬಳ ದ್ವಿತೀಯ ಘಟ್ಟ ಪ್ರಾರಂಭವಾಗುತ್ತದೆ. ನೊಳಂಬರು ವಿಶೇಷವಾಗಿ ಮಧುಗಿರಿ ಮತ್ತು ಸುತ್ತಮುತ್ತಲಿನ ಪ್ರಾಂತ್ಯಗಳನ್ನು ಆಳಿದವರೆ ಮಹಾನಾಡು ಪ್ರಭುಗಳಾಗಿದ್ದರು. ಕ್ರಿ.ಶ. ೧೫ ನೇ ಶತಮಾನದಲ್ಲಿ ವಿಜಯನಗರ ಅರಸರ ಮನ್ನಣೆಗೆ ಪಾತ್ರರಾಗಿ ಏಳಿಗೆಗೆ ಬಂದ ಮಹಾನಾಡು ಪ್ರಭುಗಳು ತಮ್ಮ ಆಳ್ವಿಕೆಯ ಅವಧಿಯಲ್ಲಿ ಮುಮ್ಮಡಿ ಪಟ್ಟಣ, ಬಿಜ್ಜಾವರ, ಮದುಗಿರಿಗಳನ್ನು ತಮ್ಮ ರಾಜಧಾನಿಯನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿದ್ದಾರೆ. ಹಾಗೂ ಇವರನ್ನು ಬಿಜ್ಜಾವರದ ಪುರಾಧೀಶ್ವರರು, ಮಹಾನಾಡು ಪ್ರಭುಗಳು, ಮುಮ್ಮಡಿ ಪ್ರಭುಗಳು ಎಂದು ಶಾಸನಗಳು ಮತ್ತು ಸಾಹಿತ್ಯ ಕೃತಿಗಳಲ್ಲಿ ಉಲ್ಲೇಖವಾಗಿದೆ.[೬೮]

ದೆಹಲಿಯಿಂದ ಬಂದಿದ್ದ ದಾಳಿಕಾರ ಮುಲ್ಲಾಖಾನನ್ನು ಮಹಾನಾಡು ಪ್ರಭುಗಳು ಸೋಲಿಸಿ ವಿಜಯನಗರದ ಅರಸ ಹರಿಹರನಿಂದ ಆಸ್ಥಾನದ ಗೌರವವನ್ನು ಪಡೆದರು. ಹರಿಹರನು ಇದಕ್ಕೆ ಪ್ರತಿಯಾಗಿ ಅನೇಕ ಗ್ರಾಮಗಳನ್ನು ಉಂಬಳಿಯಾಗಿ ಕೊಟ್ಟನು. ಹರಿಹರನು ಸಂತುಷ್ಟನಾಗಿ ನೀವು ಮುಂದೆ ಗ್ರಾಮಗಳನ್ನು ಸ್ಥಾಪಿಸಿದರೆ ನಿಮಗೆ 'ಮಹಾನಾಡು ಪ್ರಭು' ಎಂಬ ಬಿರುದು ಕೊಡುವುದಾಗಿ ಹೇಳಿ ಪ್ರೋತ್ಸಾಹಿಸಿ ಕಳುಹಿಸಿದನು.[೬೯] ವಿಜಯನಗರ ಚಕ್ರವರ್ತಿಯಿಂದ ಸನ್ಮಾನಿತರಾದ ಈ ಸೋದರರು ಮುಂದೆ ಕ್ರಿ.ಶ ೧೩೪೬ರಲ್ಲಿ ಕೋರಾಗ್ರಾಮವನ್ನು ಸ್ಥಾಪಿಸಿ, ಕೋಟೆ ಕಟ್ಟಿ ನೆಲೆನಿಂತರು. ಕಾಲಕ್ರಮೇಣ ಈ ಸೋದರರಿಗೆ ಸ್ವತಂತ್ರವಾಗಿ ನೆಲೆನಿಲ್ಲಬೇಕೆಂಬ

ಹಾಗೂ ರಾಜ್ಯ ಕಟ್ಟುವ ಉದ್ದೇಶದಿಂದ ಈ ಸೋದರರೆಲ್ಲರೂ ಬೇರೆ, ಬೇರೆ ಪ್ರದೇಶಗಳಲ್ಲಿ ನೆಲೆಸಿದರು. ಇದರಲ್ಲಿ ಕಾಳಣ್ಣ ಗೌಡರು ಕೋರಗ್ರಾಮದಲ್ಲಿಯೆ ಇದ್ದರು ಮತ್ತು ಚನ್ನಪ್ಪಗೌಡರು ತೆರೆಯೂರಿನಲ್ಲೂ ಸಂಗಪ್ಪಗೌಡರು, ಚೇಳೂರಿನಲ್ಲೂ ಕಾಳ ಚಿಕ್ಕಪ್ಪಗೌಡರು, ಗುಬ್ಬಿ ಹೊಸಹಳ್ಳಿಯಲ್ಲೂ ರಾಮಪ್ಪಗೌಡರು, ಎಣ್ಣೆಗೆರೆಯಲ್ಲಯೂ, ಚಿಕ್ಕಪ್ಪಗೌಡರು, ಬಿದರೆಯಲ್ಲಿಯೂ ಕೋಟೆಗಳನ್ನು ಸ್ಥಾಪಿಸಿದರು. ಈ ಸೋದರರಲ್ಲಿ ಹಿರಿಯವನಾದ ಮಾರೇಗೌಢನು ರಾಜ್ಯ ಸ್ಥಾಪಿಸಲು ಜಯಮಂಗಲಿ ನದಿ ತೀರದಲ್ಲಿದ್ದ ದಟ್ಟವಾದ ಅರಣ್ಯವನ್ನು ಕಡಿದು ನಗರವನ್ನು ನಿರ್ಮಿಸಿ ಆ ಸ್ಥಳಕ್ಕೆ ಮುಮ್ಮಡಿ ಪಟ್ಟಣ ಎಂದು ಹೆಸರಿಟ್ಟರು.[೨೦] ಹೀಗೆ ಈ ಏಳೂ ಜನ ಸಹೋದರರಿಂದ ಸ್ಥಾಪಿತವಾದ ಈ ಊರುಗಳಿಗೆ (ನಾಡುಗಳಿಗೆ) ಮಹಾನಾಡು ಎಂಬುದಾಗಿಯೂ, ಇವುಗಳ ಒಡೆಯರಿಗೆ ಮಹಾನಾಡು ಪ್ರಭುಗಳು ಎಂದು ಕರೆಯಲಾಗಿದೆ.

ಮಹಾನಾಡು ಪ್ರಭುಗಳ ಚರಿತ್ರೆ ಅಧ್ಯಯನ ಮಾಡಲು ಲಭ್ಯವಾಗಿರುವ ಶಾಸನಗಳಲ್ಲಿ ದಾನ ಶಾಸನಗಳೇ ಪ್ರಮುಖವಾಗಿವೆ. ಹೇರಳವಾಗಿ ದೊರೆಯುವ ಸತಿಕಲ್ಲು ಮತ್ತು ವೀರಗಲ್ಲುಗಳು ತ್ಯಾಗ ಮತ್ತು ಕಾರ್ಯವನ್ನು ಎತ್ತಿಡಿಯುತ್ತಿವೆ. ಸಾಹಿತ್ಯ ಆಧಾರಗಳಾದ ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯ, ಮುಮ್ಮಡಿ ಚಿಕ್ಕಪ್ಪಗೌಡರಿಂದ ರಚಿತವಾದ ಅಭಿನವ ಭರತಸಾರ ಸಂಗ್ರಹ ಕೃತಿಗಳು ಅಂದಿನ ಸಾಂಸ್ಕೃತಿಕ ಚರಿತ್ರೆ ತಿಳಿಯಲು ಹೆಚ್ಚು ಉಪಯುಕ್ತವಾಗಿವೆ. ಕರ್ನಲ್ ಮೆಕೆಂಜಿಯವರ ಮಧುಗಿರಿ ಕೈಫೀಯತ್ತು, ಅಧ್ಯಯನಕ್ಕೆ ಪೂರಕ ಮಾಹಿತಿಯನ್ನು ಒದಗಿಸುತ್ತವೆ.[೨೧]

ಮಧುಗಿರಿ ಪರಿಸರದಲ್ಲಿ ಸಿದ್ದಾಪುರದಲ್ಲಿ ಕೋಟೆಯ ಪಕ್ಕದಲ್ಲಿರುವ ಶಾಸನದಲ್ಲಿ ವಿಜಯನಗರ ಇತಿಹಾಸದಲ್ಲಿ ಕಂಡುಬರುವ ರಾಜಮನೆತನವಾದ ಅರವೀಡು ವಂಶದ ವೆಂಕಟಪತಿ ಮಹಾರಾಯನ ಆಳ್ವಿಕೆಯ್ನನು ಪ್ರಸ್ತಾಪಿಸುತ್ತಾ ಮಹಾನಾಡುಪ್ರಭು ಬಿಜಾವರದ ಚಿಕಕಪ್ಪಗೌಡನ ಮಗನ ಕಾಲದಲ್ಲಿ ಕಟ್ಟಲಾದ ಕೋಟೆಯ ನಿರ್ಮಾಣ, ಇದರ ಜೊತೆಗೆ ಪಂಚದೇವಾಸ್ಥಾನಗಳನ್ನು ಸಿದ್ದಾಪುರದಲ್ಲಿ ಕಟ್ಟಿದ್ದರು. ಅವುಗಳು ಯಾವುವೆಂದರೆ, ವಿಘ್ನೇಶ್ವರ, ವೀರಭದ್ರ, ಭೈರವ ಮತ್ತು ಬಸವ ದೇವಾಲಯಗಳ ಪ್ರಸ್ತಾಪವಿದೆ.[೨೨] ಕಲೆ, ವಾಸ್ತು ಶಿಲ್ಪಗಳಿಗೆ ಹೆಚ್ಚಿನ ಮಹತ್ವ ನೀಡಿದ್ದಾರೆ, ಎಂದು ತಿಳಿಯಬಹುದು.

ಮಾರೇಗೌಡನಿಂದ ಪ್ರಾರಂಭವಾದ ಈ ವಂಶದ ಆಳ್ವಿಕೆ ಮುಮ್ಮಡಿ ಪಟ್ಟಣದಲ್ಲಿ ವೈಭವಯುತವಾಗಿ ಅವನ ಮಗ ವೀರೆಗೌಡನಿಂದ ಮುಂದುವರೆಯುತ್ತದೆ. ಇವರ ಮಗ ದೊಡ್ಡೆಗೌಡನ ಆಳ್ವಿಕೆಯಲ್ಲಿ ಬಹುಮನಿ ಸುಲ್ತಾನರದಾಳಿಗೆ ತುತ್ತಾಗಿ ಮುಮ್ಮಡಿ ಪಟ್ಟಣ ನಾಶಹೊಂದಿತು. ಈ ಯುದ್ಧದ್ಲಲಿ ದೊಡ್ಡೆಗೌಡರು ಮರಣ ಹೊಂದಿದರು. ನಂತರ

ಹಿರೇಚಿಕ್ಕಪ್ಪಗೌಡರು ಮತ್ತೆ ವಿಜಯನಗರದ ಅರಸು ಶ್ರೀಕೃಷ್ಣದೇವಾರಯರ ಅಪ್ಪಣೆಯನ್ನು ಪಡೆದುಕೊಂಡು ಕ್ರಿ.ಶ. ೧೫೨೪ರಲ್ಲಿ ಶಾಲಿವಾಹನ ಶಕೆ ೧೪೪೬ರಲ್ಲಿ ಬಿಜ್ಜಾವರ ನಗರವನ್ನು ನಿರ್ಮಿಸಿ ತಮ್ಮ ರಾಜಧಾನಿಯನ್ನು ಮುಮ್ಮಡಿ ಪಟ್ಟಣದಿಂದ ಬಿಜ್ಜಾವರಕ್ಕೆ ಸ್ಥಳಾಂತರಿಸಿದನು.[೭೩] ಹಿರೇಚಿಕ್ಕಪ್ಪಗೌಡರ ದೀರ್ಘ ಆಳ್ವಿಕೆಯ ನಂತರ ಇವನ ಮಗ ಕರಿತಿಮ್ಮ ಚಿಕ್ಕಪ್ಪಗೌಡರು ಆಳ್ವಿಕೆ ನಡೆಸಿದರು.[೭೪] ಇಮ್ಮಡಿ ಚಿಕ್ಕಪ್ಪಗೌಡರು ಪ್ರಮುಖ ಅರಸರಾಗಿದ್ದು ಇವರ ನಂತರ ಬಂದ ಅರಸರು ಅಸಮರ್ಥರಾದುದರಿಂದ ಮೈಸೂರು ಒಡೆಯರಾದ ಚಿಕ್ಕದೇವರಾಜರು ಮಧುಗಿರಿಯನ್ನು ವಶಪಡಿಸಿಕೊಂಡು ತಮ್ಮ ಆಳ್ವಿಕೆಯ ಅವಧಿಯಲ್ಲಿ ಅನೇಕ ಅಭಿವೃದ್ಧಿ ಕಾರ್ಯಗಳನ್ನು ನಡೆಸಿರುತ್ತಾರೆ. ಚಿಕ್ಕದೇವರಾಜ ಒಡೆಯರ ನಂತರ ಮಧುಗಿರಿಯು ಮರಾಠ ಆಳ್ವಿಕೆಗೆ (೧೭೭೦)ರಲ್ಲಿ ಒಳಪಟ್ಟಿದ್ದ ನಂತರ, ಹೈದರ್ ಮತ್ತು ಟಿಪುಸುಲ್ತಾನ ಮತ್ತೆ ಕ್ರಿ.ಶ.೧೭೭೪ರಲ್ಲಿ ಮಧುಗರಿಯನ್ನು ವಶಪಡಿಸಿಕೊಳ್ಳುತ್ತಾನೆ.[೭೫] ಟಿಪ್ಪುವಿನ ಕಾಲದಲ್ಲಿ ಮಧುಗರಿಯನ್ನು ಚನ್ನಪ್ಪಗೌಡನು ಆಳುತ್ತಿದ್ದ ಸಂದರ್ಭದಲ್ಲಿ ಕ್ರಿ.ಶ.೧೭೯೧ರಲ್ಲಿ ಮರಾಠರು ಮಧುಗಿರಿಯನ್ನು ವಶಪಡಿಸಿಕೊಂಡರು ನಂತರ ಟಿಪ್ಪುವು ಮಧುಗಿರಿಯನ್ನು ಮರಾಠರಿಂದ ಪುನಃ ಪಡೆದನು.[೭೬]

ಹೀಗೆ ಮಹಾನಾಡು ಪ್ರಭುಗಳ ಕೊನೆ ಪ್ರಭು ಚನ್ನಪ್ಪ ಗೌಡನು ಬ್ರಿಟೀಷರ ಪರಸೇರಿಕೊಂಡು ಟಿಪ್ಪು ಸುಲ್ತಾನನ್ನು ಕ್ರಿ.ಶ.೧೭೯೯ರಲ್ಲಿ ಶ್ರೀರಂಗ ಪಟ್ಟಣದ ಕೋಟೆಯಲ್ಲಿ ಸೋಲಿಸಲಾಯಿತು. ಕೊನೆಗೆ ಬ್ರಿಟಿಷರು ಚನ್ನಪ್ಪಗೌಡರ ಆಕಾಂಕ್ಷೆಗಳನ್ನು ಈಡೇರಿಸಲಾಗಲಿಲ್ಲ. ಇದರಿಂದ ಚನ್ನಪ್ಪಗೌಡರು ದುಃಖಿತರಾಗಿ ದೇಶಾಂತರ ಹೋದರು.[೭೭] ಬ್ರಿಟೀಷರು ಒಡೆಯರಿಗೆ ಮೈಸೂರು ಸಂಸ್ಥಾನವನ್ನು ಹಿಡಿದುಹಾಸಿದಾಗ ಮಧುಗಿರಿಯು ಮೈಸೂರು ಸಂಸ್ಥಾನದಲ್ಲಿ ವಿಲೀನವಾಯಿತು. ಮಹಾನಾಡು ಪ್ರಭುಗಳ ವಂಶದವರು ಮಧುಗಿರಿ ತಾಲ್ಲೂಕಿನಲ್ಲಿ ಈಗ ವಾಸವಾಗಿರುವುದನ್ನು ಕಾಣಬಹುದು.[೭೮]

ಅಡಿಟಿಪ್ಪಣಿಗಳು

೧. ಲಕ್ಷ್ಮಣ ಸಿ.ಎಂ., ತುಮಕೂರು ಜಿಲ್ಲೆಯ ಭೌಗೋಳಿಕ ಲಕ್ಷಣಗಳು, ಪು.೧

೨. ಅದೇ, ಪು.೧

೩. ಜೋಶಿ ಎಸ್.ಕೆ, ತುಮಕೂರು ಜಿಲ್ಲೆಯ ಕೋಟೆ–ಕೊತ್ತಲಗಳು, ಪು.೨೫೬.

೪. ಲಕ್ಷ್ಮಣ ಸಿ.ಎಂ., ಪೂರ್ವೋಕ್ತ, ಪು.೧–೨

೫. ಅದೇ, ಪೂರ್ವೋಕ್ತ, ಪು.೩

೬. ನಾಗರಾಜ ಟಿ.ವಿ., ತುಮಕೂರು ಜಿಲ್ಲೆಯ ಪ್ರಾಚೀನ ನೀರಾವರಿ ವ್ಯವಸ್ಥೆ–ಒಂದು ಪರಿಶೀಲನೆ, ಪು.೩೩೨

೭. ಅದೇ, ಪು.೩೩೧

೮. ಅದೇ, ಪು.೩೩೧

೯. ಅದೇ, ಪು.೩೩೧

೧೦. ಅದೇ, ಪು.೩೩೨

೧೧. ಲಕ್ಷ್ಮಣ.ಸಿ.ಎಂ, ಪೂರ್ವೋಕ್ತ, ಪು.೪

೧೨. ಅದೇ, ಪು.೪

೧೩. ಅದೇ, ಪು.೪

೧೪. ಅದೇ, ಪು.೨–೩

೧೫. ನರಸಿಂಹಮೂರ್ತಿ ಎಂ.ಎಲ್, 'ಮಧುಗಿರಿ', ಜಯಮಂಗಲಿ, ಕವಿತಾಕೃಷ್ಣ (ಸಂ), ಪು.೨೦೩

೧೬. ಮಧುಗಿರಿ ತಹಸೀಲ್ದಾರ್ ಕಛೇರಿಯ ಅಂಕಿ–ಅಂಶಗಳು

೧೭. ನರಸಿಂಹಮೂರ್ತಿ ಎಂ.ಎಲ್, ಪೂರ್ವೋಕ್ತ, ಪು.೨೦೩

೧೮. ಅದೇ, ಪು.೨೦೩

೧೯. ಅದೇ, ಪು.೨೦೩–೨೦೪

೨೦. ಅದೇ, ಪು.೨೦೪.

೨೧. ಅದೇ, ಪು.೨೦೩-೨೦೪

೨೨. ಲಕ್ಷ್ಮಣ ಸಿ.ಎಂ, ಪೂರ್ವೋಕ್ತ, ಪು.೪

೨೩. ಶಿವತಾರಕ್ ಕೆ.ಬಿ., ತುಮಕೂರು ಜಿಲ್ಲೆಯ ಪ್ರಾಗಿತಿಹಾಸ, ಜಯಮಂಗಲಿ, ಕವಿತಾಕೃಷ್ಣ (ಸಂ), ಪು.೯-೧೦

೨೪. ಶಿವತಾರಕ್ ಕೆ.ಬಿ, ಪೂರ್ವೋಕ್ತ, ಪು.೧೦-೧೧

೨೫. ಶಿವತಾರಕ್ ಎ.ಬಿ., ತುಮುಕೂರು ಜಿಲ್ಲೆಯಲ್ಲಿ ಇತ್ತೀಚೆಗೆ ದೊರೆತ ಕೆಲವು ಪ್ರಾಗೈತಿಹಾಸಿಕ ನೆಲೆಗಳು, ಸೂರ್ಯನಾಥ ಕಾಮತ್ (ಸಂ), ಪು.೧

೨೬. ಶಿವತಾರಕ್ ಕೆ.ಬಿ, ಪೂರ್ವೋಕ್ತ, ಪು. ೧೪

೨೭. ಅದೇ, ಪು.೩

೨೮. ನರಸಿಂಹಮೂರ್ತಿ ಎಂ.ಎಲ್., ಪೂರ್ವೋಕ್ತ, ಪು.೨೦೪

೨೯. ಅದೇ, ಪು.೨೦೪

೩೦. ಶ್ರೀನಿವಾಸಯ್ಯ ಜಿ.ಎಂ., ತುಮಕೂರು ಜಿಲ್ಲೆಯ ಇತಿಹಾಸ, ಜಯಮಂಗಲಿ, ಕವಿತಾಕೃಷ್ಣ (ಸಂ), ಪು.೧೭

೩೧. ಅದೇ, ಪು.೧೭-೧೮

೩೨. ಅದೇ, ಪು.೧೮

೩೩. ಶ್ರೀನಿವಾಸಯ್ಯ ಜಿ.ಎಂ., ಪೂರ್ವೋಕ್ತ, ಪು.೧೮

೩೪. ಅದೇ, ಪು.೧೮

೩೫. ಅದೇ, ಪು.೬೯

೩೬. ಸೂರ್ಯನಾಥ ಕಾಮತ್, ಕರ್ನಾಟಕದ ಸಂಕ್ಷಿಪ್ತ ಇತಿಹಾಸ, ಪು.೮೭

೩೭. ನಂದೀಶ್ವರ ಎನ್. ಶಿರಾ ತಾಲ್ಲೂಕಿನ ಸ್ಮಾರಕಗಳು ಹಾಗೂ ಶಾಸನಗಳು, ಪು.೨೩೫

೩೮. ಶ್ರೀನಿವಾಸಯ್ಯ ಜಿ.ಎಂ., ಪೂರ್ವೋಕ್ತ, ಪು.೨೩೫

೩೯. ನರಸಿಂಹಮೂರ್ತಿ ಎಮ್.ಎಸ್., ನೊಳಂಬರ ಇತಿಹಾಸ, ನೊಳಂಬವೀರಶೈವ ಸಂಘ (ಸಂ), ಪು.೧೮

೪೦. ಶ್ರೀನಿವಾಸಯ್ಯ ಜಿ.ಎಂ., ಪೂರ್ವೋಕ್ತ, ಪು.೧೯

೪೧. ನರಸಿಂಹಮೂರ್ತಿ ಎಂ.ಎಸ್., ಪೂರ್ವೋಕ್ತ, ಪು. ೧೯

೪೨. ಅದೇ, ಪು.೨೩

೪೩. ಅದೇ, ಪು.೨೩.

೪೪. ಶ್ರೀನಿವಾಸಯ್ಯ ಜಿ.ಎಂ., ಪೂರ್ವೋಕ್ತ, ಪು.೨೦

೪೫. ಅದೇ, ಪು.೨೦

೪೬. ಸುಷ್ಮಾ. ಹೆಚ್., ತುಮಕೂರು, ಜಿಲ್ಲೆಯ ಎರಡು ಚೋಳಶಾಸನಗಲ ಸಮೀಕ್ಷೆ, ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಗೋಪಾಲ್ ಆರ್ (ಸಂ), ಪು.೧೧೨

೪೭. ಅದೇ ಪು.೧೧೨

೪೮. ಅದೇ ಪು.೧೧೨

೪೯. ಅದೇ ಪು.೧೧೩

೫೦. ಶ್ರೀನಿವಾಸಯ್ಯ ಜಿ.ಎಂ., ಪೂರ್ವೋಕ್ತ, ಪು.೨೧.

೫೧. ಸುಕ್ಷ್ಮ.ಹೆಚ್., ಪೂರ್ವೋಕ್ತ, ಪು.೨೧

೫೨. ಅದೇ, ಪು.೧೧೪

೫೩. ಶ್ರೀನಿನವಾಸಯ್ಯ, ಜಿ.ಎಂ. ಪೂರ್ವೋಕ್ತ, ಪು.೨೧

೫೪. ಅದೇ, ಪು.೨೧.

೫೫. ನಂದೀಶ್ವರ.ಎನ್. ಪೂರ್ವೋಕ್ತ, ಪು.೨೩೭

೫೬. ಶ್ರೀನಿವಾಸಯ್ಯ, ಜಿ.ಎಂ. ಪೂರ್ವೋಕ್ತ, ಪು.೨೧

೫೭. ಅದೇ, ಪು.೨೧-೨೨.

೫೮. ಅದೇ, ಪು.೨೨

೫೯. ಅದೇ, ಪು.೨೨

೬೦. ಅದೇ, ಪು.೨೨-೨೩

೬೧. ನಂದೀಶ್ವರ ಎನ್. ಪೂರ್ವೋಕ್ತ, ಪು. ೨೫೮

೬೨. ಅದೇ, ಪು.೨೪೭-೨೪೮

೬೩. ಶ್ರೀನಿವಾಸಯ್ಯ ಜಿ.ಎಂ. ಪೂರ್ವೋಕ್ತ, ಪು. ೨೩

೬೪. ಅದೇ, ಪು.೨೩

೬೫. ಅದೇ, ಪು.೨೩

೬೬. ಅದೇ, ಪು. ೨೩

೬೭. ಅದೇ, ಪು.೨೩.

೬೮. ಕಾವಲಮ್ಮ ಆರ್. ಬಿಜ್ಜಾವರ ಮಹಾನಾಡ ಪ್ರಭುಗಳು, ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ವಸು ಎಂ.ವಿ. (ಸಂ), ಪು. ೨೨೫.

೬೯. ಯೋಗೀಶ್ ಡಿ.ಎನ್. ಮಹಾನಾಡ ಪ್ರಭುಗಳ ರಾಜಕೀಯ ಬೆಳವಣಿಗೆ – ವಿಜಯನಗರ ಕಾಲ, 'ಮಹಾನಾಡು ಪ್ರಭುಗಳು' ಕಲಬುರ್ಗಿ ಎಂ.ಎಂ. (ಸಂ), ಪು. ೨೨.

೭೦. ಅದೇ, ಪು. ೨೨.

೭೧. ಕಾವಲಮ್ಮ ಆರ್., ಪೂರ್ವೋಕ್ತ, ಪು.೨೨೫-೨೬.

೭೨. ಎಪಿಗ್ರಾಫಿಯಾ ಕರ್ನಾಟಕ-XII ಮಧುಗಿರಿ, ೨೧, (ಸಿದ್ದಾಪುರ)

೭೩. ಯೋಗೀಶ್ ಡಿ.ಎನ್., ಪೂರ್ವೋಕ್ತ, ಪು. ೨೩.

೭೪. ಕಾವಲಮ್ಮ ಆರ್., ಪೂರ್ವೋಕ್ತ, ಪು. ೨೨೭.

೭೫. ಕಾವಲಮ್ಮ ಆರ್., ಮಧುಗಿರಿಗೆ ಸಂಬಂಧಿಸಿದ ಮೆಕೆಂಜಿಯವರ ಅಪ್ರಕಟಿತ ಕೈಫಿಯತ್ತು, ಇತಿಹಾಸ ದರ್ಶನ, ಸಂಪುಟ-೧೫/೨೦೦೦, ನಾಗರಾಜ್ ಎಂ.ಜಿ., ಕೃಷ್ಣಮೂರ್ತಿ (ಸಂ), ಪು.೧೨೬.

೭೬. ಅದೇ, ಪು. ೧೨೬.

೭೭. ಶ್ರೀನಿವಾಸ ಎಂ.ಡಿ., ಮಧುಗಿರಿ ಇತಿಹಾಸ, ಪು. ೬೧-೬೨.

೭೮. ಕ್ಷೇತ್ರಕಾರ್ಯದಲ್ಲಿ ಮಾಹಿತಿ ನೀಡಿದ ಜಯರಾಮ್

ಅಧ್ಯಾಯ ೩

ದೇವಾಲಯಗಳ ಉಗಮ ಮತ್ತು ವಿಕಾಸ

ಅಧ್ಯಾಯ ೩

ದೇವಾಲಯಗಳ ಉಗಮ ಮತ್ತು ವಿಕಾಸ

ದೇವಾಲಯಗಳ ಅಧ್ಯಯನವು ಚರಿತ್ರೆಯ ರಚನೆಯಲ್ಲಿ ಬಹುಮುಖ್ಯ ಪುರಾತತ್ವೀಯ ಆಕರಗಳಾಗಿ ಕಂಡುಬರುತ್ತವೆ. ಒಂದು ದೇಶದ ಸಾಂಸ್ಕೃತಿಕ ಸಂಪತ್ತು ಎನಿಸಿಕೊಂಡಿರುವ ದೇವಾಲಯಗಳು ಆ ದೇಶದ ಸಂಸ್ಕೃತಿಯನ್ನು ಶ್ರೀಮಂತಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಈ ನಿಟ್ಟಿನಲ್ಲಿ ಭಾರತ ಪ್ರಾಚೀನ ಕಾಲದಿಂದಲೂ ಭವ್ಯ ಪರಂಪರೆಯನ್ನು ಹೊಂದಿದ ದೇಶವಾಗಿದೆ. ಈ ದೇಶದಲ್ಲಿರುವ ಬಹುತೇಕ ನಾಗರಿಕರೂ ಸಹ ದೈವತ್ವದಲ್ಲಿ ನಂಬಿಕೆಯನ್ನುಳ್ಳವರಾಗಿದ್ದಾರೆ. ಆದ್ದರಿಂದ ಭಾರತೀಯರು ವಿವಿಧ ಧರ್ಮಗಳಿಗೆ ಸೇರಿದ ವೈವಿಧ್ಯಮಯವಾದ ದೇವಾಲಯಗಳನ್ನು ನಿರ್ಮಾಣ ಮಾಡಿದರು. ಅಂಥಹ ದೇವಾಲಯಗಳು ಇಂದಿಗೂ ಕಾಣಬಹುದು.

ಭಾರತದಲ್ಲಿ ಓಡಾಡುವ ಯಾವುದೇ ವ್ಯಕ್ತಿಗೆ ಪ್ರತಿ ಹಳ್ಳಿ ಹಳ್ಳಿಯಲ್ಲೂ ನದಿ ದಡದ ಮೇಲೆ, ಊರಿನ ಮಧ್ಯದಲ್ಲಿ, ಊರಿನ ಯಾವುದೇ ಸಾರ್ವಜನಿಕ ಸ್ಥಳದಲ್ಲಿ ಹೀಗೆ ಒಂದಲ್ಲಾ ಒಂದು ಕಡೆ ದೇವಾಲಯಗಳೂ ಕಾಣುತ್ತವೆ.[೧]

ದೇವಾಲಯಗಳು ಮಾನವನ ಧಾರ್ಮಿಕ ಶ್ರದ್ಧೆ, ಭಕ್ತಿ ಮತ್ತು ನಂಬಿಕೆಗಳ ಪ್ರತೀಕಗಳಾಗಿವೆ. ಅಲೆಮಾರಿಯಾಗಿದ್ದ ಮಾನವ ಒಂದು ಕಡೆ ನೆಲೆಯಾಗಿ ನಿಲ್ಲಬೇಕೆಂದೂ, ಒಂದು ಸುರಕ್ಷಿತವಾದ ಸ್ಥಳದಲ್ಲಿ ವಾಸಿಸಬೇಕೆಂದು ಎಂದಿನಿಂದ ಬಯಸಿದನೋ, ಅಂದಿನಿಂದ ತನಗಾಗಿ ಮನೆಯನ್ನು ಕಟ್ಟಿಕೊಳ್ಳಲು ಪ್ರಾರಂಭಿಸಿದ. ಸುತ್ತಗೋಡೆ ಅದರ ಮೇಲೆ ವಿವಿಧ ಆಕಾರದ ಮುಚ್ಚಿಗೆ, ಮುಂಭಾಗದಲ್ಲಿ ಬಾಗಿಲು, ಅದರ ಮೇಲೆ ಗಾಳಿ ಬೆಳಕು ಬರಲು ಕಮಾನು ತೆರವು ಹೀಗೆ

ಅವನ ಮನೆಯು ರೂಪಗೊಂಡಿತು. ಇದು ವಾಸ್ತುಶಿಲ್ಪದ ಪ್ರಾಥಮಿಕ ಹೆಜ್ಜೆ. ಮಾನವನು ಪ್ರಾಕೃತಿಯೊಡನೆ ಬದುಕಬೇಕಾದಾಗ ಪ್ರಕೃತಿಯ ವಿಸ್ಮಯಗಳಾದ ಗಾಳಿ, ಮಳೆ, ಗುಡುಗು, ಸಿಡಿಲು, ಕಾಡ್ಗಿಚ್ಚು ಮೊದಲಾದವು ಅವನಲ್ಲಿ ಭೀತಿ ಹುಟ್ಟಿಸಿದವು ಇವುಗಳಿಂದ ಮಾನವನು ನಿಸರ್ಗದಲ್ಲಿ ಎಲ್ಲಕ್ಕೂ ಮಿಗಿಲಾದ ಅದ್ಭುತವಾದ ಶಕ್ತಿ ಇದೆ ಎಂದು ಅರಿತುಕೊಂಡನು. ತನ್ನ ಕೆಲಸ ಕಾರ್ಯಗಳಿಗೆ ಪೂರಕವಾಗಿ ಬೆಂಬಲ ನೀಡಬಹುದಾದ ಈ ಶಕ್ತಿಗೆ ಒಂದು ಮೂರ್ತಿರೂಪ ಕೊಡಲು ಪ್ರಾರಂಭಿಸಿದನು. ಅದರ ರಕ್ಷಣೆಗೆ ಭೂಮಿಯ ಮೇಲೆ ಕಟ್ಟಡವನ್ನು ಕಟ್ಟಿದನು. ತನಗಾಗಿ ನಿರ್ಮಿಸಿಕೊಂಡ ಮನೆ 'ಗೃಹವಾಸ್ತುಶಿಲ್ಪ' ಎನಿಸಿದರೆ, ತನ್ನ ದೇವರಿಗಾಗಿ ಕಟ್ಟಿದ್ದು ಧಾರ್ಮಿಕ ವಾಸ್ತುಶಿಲ್ಪ ಅಥವಾ 'ದೇವಾಲಯ ವಾಸ್ತುಶಿಲ್ಪ' ಎಂದು ಕರೆಯಲಾಯಿತು.[೨]

ಭೂಮಿಯನ್ನು ಒಂದು ವಸ್ತುವೆಂದು ಪರಿಗಣಿಸಿ ಅದರ ಮೇಲೆ ಕಟ್ಟಲ್ಪಟ್ಟು ಗೃಹ, ಗುಡಿ, ಮುಂತಾದವುಗಳನ್ನು ವಾಸ್ತುವೆಂದು ಕರೆಯಲಾಗಿದೆ.[೩]

ವಾಸ್ತುಶಿಲ್ಪವನ್ನು ಕುರಿತು ಹಲವು ಪ್ರಾಚೀನ ಶಾಸ್ತ್ರ ಗ್ರಂಥಗಳು ಹಾಗೂ ವಿದ್ವಾಂಸರ ಹಲವು ವಿಚಾರಧಾರೆಗಳನ್ನು ಗಮನಿಸಬಹುದು. ಅಂತಹವುಗಳಲ್ಲಿ ಬಹುಮುಖ್ಯವಾಗಿ ಮಾನಸಾರ, ಮಯಮತ, ಸಮರಾಂಗಣ ಸೂತ್ರಧಾರ, ಕಾಶ್ಯಪ ಶಿಲ್ಪ, ಅಗಸ್ತ್ಯ, ಸಕಲಾಧಿಕಾರ, ಅಪರಾಜಿತಪುಚ್ಛಾ, ರೂಪಮಂಡನ, ಅಭಿಲಾಷಿತಾರ್ಥ ಚಿಂತಾಮಣಿ, ತಂತ್ರಸಮುಚ್ಚಯ ಮುಂತಾದವುಗಳು ನಮ್ಮ ಪ್ರಾಚೀನ ಕಾಲದ ದೇವಾಲಯ ವಾಸ್ತುಶಿಲ್ಪವನ್ನು ಕುರಿತು ಮಾಹಿತಿ ನೀಡುವ ಶಾಸ್ತ್ರ ಗ್ರಂಥಗಳು ಎಂದು ಹೇಳಬಹುದು.[೪]

ವಾಸ್ತುಶಿಲ್ಪ ಎಂಬ ಶಬ್ದ ಅಥವಾ ಪದಕ್ಕೆ ವಿಶಾಲವಾದ ಅರ್ಥ, ಹಾಗೂ ವ್ಯಾಪ್ತಿ ಇದ್ದರೂ ಸಾಮಾನ್ಯವಾಗಿ ದೇವಾಲಯಗಳು ಮಾತ್ರ ವಾಸ್ತು ಶಿಲ್ಪಗಳಾಗಿ ಪರಿಗಣಿತವಾಗುತ್ತದೆ. ಸ್ತೂಪ, ಚೈತ್ಯ, ವಿಹಾರ, ಬಸದಿ, ಚರ್ಚು, ಕೆರೆಕಟ್ಟೆ, ಬುರುಜು, ಕೋಟೆ ಹಾಗೂ ಮನೆಗಳಂತಹ ಎಲ್ಲಾ ರಚನೆಗಳು ವಾಸ್ತು ಶಿಲ್ಪಗಳೇ ಆಗಿವೆ. ಆದರೆ ಅಧ್ಯಯನದ ಅನುಕೂಲಕ್ಕಾಗಿ, ವಾಸ್ತುಶಿಲ್ಪವನ್ನು ದೇವಾಲಯಕ್ಕೂ ಹಾಗೂ 'ಶಿಲ್ಪ' ಎಂಬುದನ್ನು ಮೂರ್ತಿಗಳಿಗೆ ಅನ್ವಯವಾಗುವಂತೆ ಅನುಕ್ರಮದಲ್ಲಿ ಬಳಸುತ್ತಾರೆ. ವಾಸ್ತು ಶಿಲ್ಪವನ್ನು ಲೌಕಿಕ, ಧಾರ್ಮಿಕ ಮತ್ತು ರಕ್ಷಣಾ ವಾಸ್ತು ಶಿಲ್ಪಗಳೆಂದು ವರ್ಗೀಕರಿಸುವ ರೂಢಿಯಿದೆ.[೫]

ಹರಪ್ಪ ಮತ್ತು ಮೆಹೆಂಜೋದಾರೋ ನಿವೇಶನಗಳ ಉತ್ಖನನಗಳಲ್ಲಿ ದೊರೆತ ಕೆಲವು ಪಳೆಯುಳಿಕೆಗಳನ್ನು ಕುರಿತು ಸರ್‌ಜಾನ್ ಮಾರ್ಷಲ್ ಅವರು ಮೂರ್ತಿಪೂಜೆ ಅರಾಧನೆಯನ್ನು ಗುರುತಿಸಿದ್ದಾರೆ. ಆದ್ದರಿಂದ ಮೂರ್ತಿ ಪೂಜೆ ಇದ್ದತು ಎಂದರೆ ಅವರ ರಕ್ಷಣೆಗೆ 'ದೇಗುಲ

ವಾಸ್ತು' ಇರಲೇಬೇಕಲ್ಲವೇ, ಇದಕ್ಕೆ ಸ್ಪಷ್ಟ ನಿದರ್ಶನಗಳು ದೊರೆತಿಲ್ಲ. ಆದರೆ ಇಲ್ಲಿನ ನಗರಗಳ ಪಶ್ಚಿಮಾಂತ್ಯದಲ್ಲಿ ರಕ್ಷಣಾರ್ಥವಾಗಿ ಕೋಟೆಯ ಗೋಡೆ, ಸಾರ್ವಜನಿಕ ಬಳಕೆಗಾಗಿ ನಿರ್ಮಿಸಿರುವ ಬೃಹತ್ ಗಾತ್ರದ ಸಭಾಗೃಹಗಳು, ಕಣಜಗಳು, ಸ್ನಾನಗೃಹಗಳು, ದೇವಾಲಯಗಳಾಗಿರಬಹುದಾದ ಕಟ್ಟಡಗಳೂ ಇವುಗಳ ಪ್ರಾಚೀನ ಕಾಲದ ವಾಸ್ತುಶಿಲ್ಪ ನಿರ್ಮಿತಗಳಿಗೆ ಸಾಕ್ಷಿಗಳಾಗಿವೆ.[೬]

ಭಾರತದ ಚರಿತ್ರೆಯಲ್ಲಿ ದೇಗುಲದ ವಾಸ್ತುರೂಪಗಳು ದೊರೆಯುವುದು ಭೌದ್ಧ ಮತ್ತು ಜೈನ ಧರ್ಮಗಳು ಅಸ್ತಿತ್ವಕ್ಕೆ ಬಂದ ನಂತರ ಈ ಧರ್ಮಳಿಗಾಗಿ ಸಂಬಂಧಿಸಿದ ಸ್ತೂಪ ಮತ್ತು ಚೈತ್ಯಗಳು ಆರಂಭದ ಧಾರ್ಮಿಕ ಕಟ್ಟಡ ವಾಸ್ತುವಿಗೆ ಸಾಕ್ಷಿಗಳಾಗಿವೆ. ಸ್ತೂಪವು ಭೌದ್ಧಧರ್ಮದ ಒಂದು ಧಾರ್ಮಿಕ ಕಟ್ಟಡ.[೭] ಇದನ್ನು ಬೃಹತ್ ಶಿಲಾ ಸಂಸ್ಕೃತಿಯ ಸಮಾಧಿ ಕಲ್ಪನೆಯ ಮುಂದುವರೆದ ಹಂತವಾಗಿರುವುದನ್ನು ಗಮನಿಸಬೇಕು. ಸ್ತೂಪ ಪ್ರಾರಂಭವಾದದ್ದು ಸತ್ತವರ ಶವ ಅಥವಾ ಅಸ್ತಿಗಳ ಮೇಲೆ ನಿರ್ಮಿಸಲಾಗುತ್ತಿದ್ದ ಸಮಾಧಿ. ಅಂದರೆ ಸ್ಮಾರಕವಾಗಿ ಭೂಗತಮಾಡಿದ ಕಳೆಬರಹದ ಮೇಲೆ ಕಟ್ಟಿದ ಗೋಲಾಕಾರದ ದಿಬ್ಬ.[೮] ಸಾಂಚಿ, ಕಾರ್ತಿ, ಬಾಜ ಮತ್ತು ಸಾರಾನಾಥಗಳಲ್ಲಿ ಈ ಬಗೆಯ ಸ್ತೂಪಗಳನ್ನು ಕಾಣಬಹುದು. ಅದೇ ರೀತಿ ಚೈತ್ಯಾಲಯಗಳು ಸಹ ಭೌದ್ಧದ ಧಾರ್ಮಿಕ ಕಟ್ಟಡಗಳಾಗಿದ್ದವು. ಕಲ್ಲುಬಂಡೆಗಳನ್ನು ಕೊರೆದು ನಿರ್ಮಿಸಲಾಗುತ್ತಿತ್ತು. ಬುದ್ದನ ಪ್ರತೀಕವಾಗಿರುವ ಸ್ತೂಪವನ್ನು ಸಭಾಮಂಟಪಗಳಲ್ಲಿಟ್ಟು ಪೂಜಿಸಲಾಗುತ್ತಿತ್ತು. ಇಂತಹ ಮಂಟಪವನ್ನು ಚೈತ್ಯಗೃಹ ಅಥವಾ ಚೈತ್ಯಾಲಯ ಎಂದು ಹೆಸರು.[೯] ಅಶೋಕನ ಕಾಲದಲ್ಲಿಯೇ ಸ್ತಂಭಗಳೊಂದಿಗಿನ ಚೈತ್ಯಗೃಹಗಳನ್ನು ನಿರ್ಮಿಸಲಾಗಿದೆ. ಕಲ್ಲುಗಳಲ್ಲಿ ಕೊರೆದಿರುವ ಚೈತ್ಯಗೃಹಗಳು ಬರಾಬರ್, ನಾಗಾರ್ಜುನ ಬೆಟ್ಟಗಳಲ್ಲಿ ಹಾಗೂ ರಾಜಗೀರ್ ಬಳಿ ನಿರ್ಮಾಣಗೊಂಡಿವೆ. ಚೈತ್ಯಾಲಯಗಳಂತೆ ಆ ಕಾಲದಲ್ಲಿ ವಿಹಾರಗಳನ್ನು ಕಾಣಬಹುದು. ಕಲ್ಲಿನಲ್ಲಿ ಕೊರೆದು ಮಾಡುವ ವಿಹಾರಗಳ ರಚನೆಯ ಈ ಸಂದಂರ್ಭವನ್ನು ಶಿಲ್ಪ ವಿನ್ಯಾಸ, ಭಾರತೀಯ ಕಟ್ಟಡ ನಿರ್ಮಾಣಕ್ಕೆ ಹೊಸ ಆಯಾಮವನ್ನು ಒದಗಿಸಿತು ಎಂದು ಹೇಳಬಹುದು. ಕಲ್ಲಿನಲ್ಲಿ ಕೊರೆದು ನಿರ್ಮಿಸಿರುವ ಚೈತ್ಯಗೃಹ, ವಿಹಾರ, ಗುಹಾಂತರ ದೇವಾಲಯಗಳಿಗೆ ಇದೇ ಉಗಮವಾಯಿತು. ಭಾರತೀಯ ಶಿಲ್ಪಕಲೆಗೆ ಇದೊಂದು ಅಪೂರ್ವವಾದ ಕಾಂತಿಯನ್ನು ತಂದುಕೊಟ್ಟಿತು. ಈ ಕಲೆಯ ನಮೂನೆಗಳು ಆಂಧ್ರಪ್ರದೇಶ, ಗುಜರಾತನ ಕಾಥೆವಾಡ ಪಶ್ಚಿಮ ಘಟ್ಟಗಳಲ್ಲಿ ಅಸಂಖ್ಯಾತವಾಗಿ ಇವು ಕಾಣಬಹುದು.[೧೦] ಹೀಗೆ ಸ್ತೂಪ, ಚೈತ್ಯಗಳು ಮತ್ತು ವಿಹಾರಗಳು ಪ್ರಾಚೀನ 'ದೇಗುಲ ವಾಸ್ತು' ರೂಪವನ್ನು ಕುರಿತು ಮಾಹಿತಿ ನೀಡುತ್ತದೆ.

ಗುಪ್ತರ ಕಾಲದಲ್ಲಿ ದೇವಾಲಯುಗಳ ನಿರ್ಮಾಣದಲ್ಲಿ ಹೊಸ ರಚನೆಗಳು ನಡೆಯತೊಡಗಿದವು. ಇಟ್ಟಿಗೆ ಮತ್ತು ಕಲ್ಲನ್ನು ಬಳಸಿ ದೇವಾಲಯವನ್ನು ನಿರ್ಮಾಣ ಮಾಡುವ

ರೂಢಿ ಗುಪ್ತರ ಕಾಲದಲ್ಲಿ ಪ್ರಾರಂಭವಾಯಿತು. ನಾಲ್ಕನೆಯ ಶತಮಾನದ ಪ್ರಾರಂಭದ ಮೊದಲ ಕಾಲುಭಾಗದಲ್ಲಿ ದೇವಾಲಯ ಕಟ್ಟಡ ನಿರ್ಮಾಣ ಪ್ರಾರಂಭವಾಯಿತು. ಕಟ್ಟಡ ರಚನಾ ಶಿಲ್ಪದಲ್ಲಿ ಕಲ್ಲನ್ನು ನಿಖರವಾದ ಉದ್ದ – ಅಗಲಕ್ಕೆ ತಂದು ಅದನ್ನು ನಯಗೊಳಿಸಿ ಕಟ್ಟಡಕ್ಕೆ ಬಳಸುವ ರೂಢಿ ಪ್ರಾರಂಭವಾದದ್ದು ಈ ಕಾಲದಲ್ಲಿಯೇ, ರಚನೆಯಲ್ಲಿ ಮರದ ನಿರ್ಮಾಣಗಳನ್ನು ಅನುಸರಿಸದೆ ಇಟ್ಟಿಗೆ – ಕಲ್ಲುಗಳನ್ನು ಬಳಸಿ ಅವುಗಳ ಜಾಯಾಮಾನಕ್ಕೆ ಬಗ್ಗುವಂತೆ ಕಟ್ಟಡ ರಚನೆಯನ್ನು ಪ್ರಾರಂಭಿಸಲಾಯಿತು. ಆದ್ದರಿಂದ ಗುಪ್ತರ ಕಾಲದ ದೇವಾಲಯಗಳು ವಿವಿಧ ರೀತಿಗಳನ್ನು ರೂಪಗಳನ್ನು ತೋರುತ್ತವೆ. ಇದರ ಫಲವಾಗಿ ದೇವಾಲಯ ನಿರ್ಮಾಣದಲ್ಲಿ ಸೃಜನಾತ್ಮಕ ಪ್ರಯೋಗಶೀಲತೆ ಮೈಗೂಡಿಸಿಕೊಂಡು ಅಭಿವೃದ್ಧಿಯನ್ನು ಗಳಿಸಿತು.[೧೧] ಗುಪ್ತ ಸಾಮ್ರಾಜ್ಯದ ಕಾಲವನ್ನು ಭಾರತೀಯ ಇತಿಹಾಸದ ಸ್ವರ್ಣಯುಗವೆಂದು ಕರೆಯಲಾಗುತ್ತದೆ. ಕಟ್ಟಡ ರಚನೆ, ಮೂರ್ತಿಶಿಲ್ಪ ಮತ್ತು ಚಿತ್ರಗಳಲ್ಲಿ ಸೌಂದರ್ಯ ತತ್ವಗಳನ್ನು ಕಂಡುಕೊಂಡು ಅವನ್ನು ಸೂತ್ರೀಕರಿಸಿದ್ದೂ ಇದೇ ಕಾಲದಲ್ಲಿಯೇ ಎಂಬುದು ವಿಮರ್ಶಕರ ಅಭೀಮತ.[೧೨] ಗುಪ್ತರ ಕಾಲಕ್ಕೂ ಮೊದಲು ಮೌರ್ಯರ ಕಾಲದಲ್ಲಿ ತೀರಾ ಸಾಧಾರಣವಾದ ದೇವಾಲಯವನ್ನು ನಿರ್ಮಿಸಲಾಗುತ್ತಿತ್ತು. ದೇವಾಲಯಗಳ ನಿರ್ಮಾಣದ ಕಲೆ ಗಮನಾರ್ಹವಾದ ರೀತಿಯಲ್ಲಿ ವಿಕಾಸವನ್ನು ಪಡೆದ ಕಾಲ ಗುಪ್ತರಕಾಲ. ದೇವಾಲಯದ ಪ್ರಮುಖ ಅಂಗಗಳೆಲ್ಲವೂ ಬೆಳೆದುದನ್ನು ಕಾಣಬಹುದು. ಗುಪ್ತರ ಕಾಲದ ಮುಖ್ಯ ದೇಗುಲಗಳಲ್ಲಿ ಭೂಮಾರದ ಶಿವ ದೇವಾಲಯ, ನಾಚ್ನಾದ ಪಾರ್ವತಿ ದೇವಾಲಯ, ಜಬ್ಬಲ್‌ಪುರದ ವಿಷ್ಣು, ಕಾಳಿಕಾದೇವಿ ದೇವಾಲಯಗಳು ಬಹುಮುಖ್ಯವಾಗಿವೆ.[೧೩]

"ಗುಪ್ತ ಸಾಮ್ರಾಜ್ಯದ ಪತನದ ನಂತರದ ಶತಮಾನಗಳಲ್ಲಿ ದೇವಾಲಯ ನಿರ್ಮಾಣ ಶೈಲಿಯಲ್ಲಿ ಅಪಾರವಾದ ಪ್ರಗತಿ ಮತ್ತು ಬದಲಾವಣೆಗಳನ್ನು ಮೈಗೂಡಿಸಿಕೊಂಡಿತು. ಭಾರತೀಯ ಶಿಲ್ಪಶಾಸ್ತ್ರಗಳು ದೇವಾಲಯಗಳನ್ನು ನಾಗರ, ವೇಸರ, ಮತ್ತು ದ್ರಾವಿಡಗಳೆಂದು ವಿಭಜಿಸುತ್ತವೆ. ಉತ್ತರ ಭಾರತದ ದೇವಾಲಯಗಳು ಬಹುಪಾಲು ನಾಗರ ಶೈಲಿಗೆ ಸೇರಿವೆ. ಆದರೆ ಈ ರೀತಿಯಾಗಿ ಸುಲಭವಾಗಿ ಮತ್ತು ನಿಖರವಾಗಿ ಭೌಗೋಳಿಕ ಸೀಮೆಗಳನ್ನು ಅನುಸರಿಸಿ ದೇವಾಲಯಗಳ ಬಗೆಗಳನ್ನು ವರ್ಗೀಕರಿಸಲು ಸಾಧ್ಯವಾಗುವುದಿಲ್ಲ. ನಾಗರ ಶೈಲಿಯ ದೇವಾಲಯಗಳು ದಕ್ಷಿಣ ಭಾರತದಲ್ಲೂ ಕಂಡುಬರುತ್ತದೆ. ಆದ್ದರಿಂದ ಭಾರತೀಯ ದೇವಾಲಯ ಪರಂಪರೆಯಲ್ಲಿ ಔತರೇಯ, ದಖ್ಖನಿ ಹಾಗೂ ದಾಕ್ಷಿಣಾತ್ಯ ದ್ರಾವಿಡ ದೇವಾಲಯಗಳೆಂದು ವರ್ಗೀಕರಿಸಿಕೊಳ್ಳಲಾಗಿದೆ."[೧೪]

[illegible]

[illegible]

ವಾಸ್ತುಶಿಲ್ಪದಲ್ಲಿ ಕರ್ನಾಟಕದಲ್ಲಿರುವಷ್ಟು ವೈವಿಧ್ಯ ಬಹುಶಃ ಭರತಖಂಡದ ಇನ್ನಾವ ಭಾಗದಲ್ಲೂ ಇಲ್ಲವೆನ್ನಬಹುದು. ದೇವಾಲಯಗಳ ನಿರ್ಮಾಣದಲ್ಲಿ ಕರ್ನಾಟಕ ತೋರಿಸಿದ ಉದಾತ್ತವಾದ ಅಭಿರುಚಿ ಮತ್ತು ಅದನ್ನು ಬಳಸಿಕೊಂಡು ಬಂದ ಬಗೆ ವಿಶಿಷ್ಟವಾದುದು. ಭರತ ಖಂಡದ ಎಲ್ಲಾ ಭಾಗಗಳ ಉತ್ತಮ ಅಂಶಗಳನ್ನೂ ತನ್ನಲ್ಲಿ ಅಳವಡಿಸಿಕೊಳ್ಳಲು ಕರ್ನಾಟಕ ಪ್ರಯತ್ನ ಪಟ್ಟಿದೆ. ಅವುಗಳ ಸಮನ್ವಯದಿಂದ ತನ್ನದೇ ಆದ ಮಾರ್ಗವನ್ನು ರೂಪಿಸಿಕೊಂಡಿದೆ.[೧೫]

ಕರ್ನಾಟಕವು ಎಲ್ಲಾ ಬಗೆಯ, ವಿಭಿನ್ನ ಶೈಲಿಯ ದೇವಾಲಯಗಳ ತವರೂರಾಗಿ ಮೌರ್ಯರ ಕಾಲದಿಂದ ವಿಜಯನಗರೋತ್ತರ ಕಾಲದವರೆಗೆ ದೇವಾಲಯಗಳು ಪೋಷಕರ ಮತ್ತು ಕಲಾವಿದರ ಸಹಕಾರಗಳೊಂದಿಗೆ ವಿಸ್ಮಯಕಾರಕವಾಗಿ ಬೆಳೆದುನಿಂತಿವೆ. ವಿವಿಧ ಅರಸು ಮನೆತನಗಳು, ವಿವಿಧ ಕಾಲಘಟ್ಟದಲ್ಲಿದ್ದು ಅದಕ್ಕನುಗುಣವಾಗಿ ಮೂಡಿಬಂದಿದೆ.[೧೬]

ಕರ್ನಾಟಕದಲ್ಲಿ ಮೌರ್ಯ ಶಾತವಾಹನರ ಕಾಲದ ಹಲವು ನಿವೇಶನಗಳಲ್ಲಿಯ ಉತ್ಖನನದಿಂದ ಬೆಳಕಿಗೆ ಬಂದಿದ್ದು, ಆ ನೆಲೆಗಳಲ್ಲಿನ ಕಟ್ಟಡ ಅವಶೇಷಗಳು, ಸ್ತೂಪ, ಚೈತ್ಯಗಳು, ಮೌರ್ಯರ ಮನೆಗಳು ಅಥವಾ ಪಾಂಡವರ ಮನೆಗಳು ಎಂದು ಕರೆಯಲಾಗುವ ಬೃಹತ್ ಶಿಲಾಗೋರಿಗಳು ಕರ್ನಾಟಕದಲ್ಲಿ ದೇವಾಲಯಗಳಿಗೆ ಪ್ರೇರೆಪಿಸಿತು. ಬ್ರಹ್ಮಗಿರಿ, ಚಂದ್ರವಳ್ಳಿ, ಬನವಾಸಿ, ಪಟ್ಟದಕಲ್ಲು, ಐಹೊಳೆ ಹಾಗೂ ಸನ್ನತಿಯಲ್ಲಿ ಪ್ರಾಚೀನ ಕಟ್ಟಡ ಅವಶೇಷಗಳು ದೊರೆತಿವೆ. ಇತ್ತೀಚೆಗೆ ಉತ್ಖನಗೊಂಡ ಸನ್ನತಿಯ ಉತ್ಖನದಲ್ಲಿ ಒಂದು ಭವ್ಯವಾದ ಸ್ತೂಪದ ಅವಶೇಷ ದೊರೆತಿದೆ. ಗಾತ್ರದಲ್ಲಿ ಚಿಕ್ಕದಿದ್ದು ಅದರ ಹೊರಮೈ ಉಬ್ಬುಶಿಲ್ಪದ ಶಿಲ್ಪಗಳಿಂದ ಕೂಡಿದೆ. ಉಬ್ಬು ಶಿಲ್ಪದಲ್ಲಿ ಭೋಧಿವೃಕ್ಷ ಮತ್ತು ಪಾದಗಳನ್ನು ಕೆತ್ತಲಾಗಿದೆ. ಅವು ಬುದ್ಧನನ್ನು ಪ್ರತಿನಿಧಿಸುತ್ತದೆ. ಶಾತವಾಹನರ ಮತ್ತು ಅವರ ಅನಂತರದ ಕಾಲದ ಶಾಸನಗಳಲ್ಲಿ ಕೆಲವು ವೈದಿಕ ಸಂಪ್ರದಾಯದ ದೇವಾಲಯಗಳ ಉಲ್ಲೇಖಗಳು ದೊರೆತಿವೆ. ಶಿವಸ್ಕಂದವರ್ಮನ ಮಳವಳ್ಳಿ ಶಾಸನ ಮತ್ತು ಪಟ್ಟಿದೇವರನ್ನು ಕದಂಬರ ತಾಳಗುಂದದ ಸ್ತಂಭಶಾಸನ ಶಾತಕರಣಿಗಳಿಂದ ಪೂಜಿತ ಪ್ರಣವೇಶ್ವರ ದೇವಾಲಯವನ್ನು ಉಲ್ಲೇಖಿಸಿವೆ. ಮೇಲಿನ ಈ ಉಲ್ಲೇಖಗಳು ಕರ್ನಾಟಕದಲ್ಲಿ ಶಾತವಾಹನರ ಕಾಲದ ದೇವಾಲಯಗಳ ವಿಕಾಸದ ಅಂಶಗಳನ್ನು ಕುರಿತು ಹೇಳುತ್ತವೆ.[೧೭] ಶಾತವಾಹನರ ನಂತರದಲ್ಲಿ ಕರ್ನಾಟಕದಲ್ಲಿ ಕದಂಬರ ಕಾಲದಲ್ಲಿ ದೇವಾಲಯಗಳ ಬೆಳವಣಿಗೆಯನ್ನು ಕಾಣಬಹುದು. ಕದಂಬರು ಕ್ರಿ.ಶ.೪ನೆಯ ಶತಮಾನದಿಂದ ಆರನೆಯ ಶತಮಾನದವರೆಗೆ ಆಳ್ವಿಕೆ ನಡೆಸಿದ್ದಾರೆ. ಕರ್ನಾಟಕದಲ್ಲಿ ಕದಂಬರ ಕಾಲಕ್ಕೆ ಶಿಲಾವಾಸ್ತುವಿನ ಪ್ರಮುಖ ಸಾಕ್ಷ್ಯಗಳು ದೊರಕುತ್ತವೆ. ಕದಂಬರ ಕಾಲದ ದೇಗುಲ ವಾಸ್ತುಶಿಲ್ಪವನ್ನು ಎರಡು ಭಾಗಗಳಾಗಿ ನೋಡಬಹುದು.

ಅವುಗಳೆಂದರೆ:

೧. ಕೊರೆದ ಗುಹಾಲಯ

೨. ಕಟ್ಟಿದ ದೇವಾಲಯ ವಾಸ್ತುಶಿಲ್ಪ.[೧೮]

ಕದಂಬರ ಕಾಲದ ಗುಹಾಲಯಗಳೆಂದು ಹೇಳಲ್ಪಡುವ ಗೋವೆಯ ಸಮೀಪದ ಅರವೇಲಮ್, ನೋರ್ವಾ, ಲಂಪಗಾವ್. ಇತ್ಯಾದಿ ಸ್ಥಳಗಳಲ್ಲಿ ದೊರೆಕಿವೆ. ಜಾಂಬುಟ್ಟಿಗೆ (Iaterite) ಬಂಡೆಗಳಲ್ಲಿ ಇವುಗಳನ್ನು ನಿರ್ಮಿಸಿದ್ದು, ಇಲ್ಲಿನ ಮೂರ್ತಿಶಿಲ್ಪಗಳು ಶಾಸನ ಲಿಪಿ ಮುಂತಾದ ಆಧಾರಗಳಿಂದ ಇವು ಕದಂಬ ಶೈಲಿಯಂದು ವಿದ್ವಾಂಸರು ಗುರುತಿಸಿದ್ದಾರೆ.[೧೯] ಇವರ ಕಾಲದ ಕಟ್ಟಿದ ದೇವಾಲಯಗಳಲ್ಲಿ ಹಲಸಿಯ ಜೈನ ಬಸ್ತಿ ಪ್ರಾಚೀನ ಕಾಲದಾಗಿದ್ದು, ಇದು ಕ್ರಿ.ಶ.೫ನೇ ಶತಮಾನದಲ್ಲಿದ್ದ ಮೃಗೇಶರ್ಮನಿಂದ ನಿರ್ಮಾಣಗೊಂಡಿದೆ. ಇದು ಗರ್ಭಗೃಹ, ಸುಖನಾಸಿ ಮತ್ತು ಚಿಕ್ಕಮಂಟಪ ಇವುಗಳಿಂದ ಕೂಡಿದೆ.[೨೦] ಹಲಸಿಯಲ್ಲಿರುವ ಹಟ್ಟಕೇಶ್ವರ, ಕಲ್ಲೇಶ್ವರ, ಸುವರ್ಣೇಶ್ವರ, ನರಸಿಂಹ ಮೊದಲಾದ ದೇವಾಲಯಗಳು ಕದಂಬ ಶೈಲಿಯ ಉದಾಹರಣೆಗಳಾಗಿವೆ. ತಾಳಗುಂದದ್ದ ಪ್ರಣವೇಶ್ವರ ದೇವಾಲಯ ಹಾಗೂ ಬನವಾಸಿಯ ಮಧುಕೇಶ್ವರ ದೇವಾಲಯಗಳು ಇವರ ಕಾಲದ ಬಹು ಮುಖ್ಯ ದೇವಾಲಯಗಳು.[೨೧]

ಉತ್ತರ ಭಾರತದಲ್ಲಿ ಗುಪ್ತರ ಪೋಷಣೆಯಲ್ಲಿ ದೇವಾಲಯಗಳ ನಿರ್ಮಾಣ ನಡೆಯುತ್ತಿರುವ ಕಾಲದಲ್ಲಿಯೇ ದಕ್ಷಿಣದಲ್ಲಿ ಒಂದು ಹೊಸ ಪರಂಪರೆ ಪ್ರಾರಂಭವಾಯಿತು. ಚಾಲುಕ್ಯರ ನೇತೃತ್ವದಲ್ಲಿ ಕರ್ನಾಟಕ ಮುನ್ನಡೆಯ ಕೇಂದ್ರವಾಯಿತು.[೨೨] ಚಾಲುಕ್ಯರಲ್ಲಿ ಮೂರು ಶಾಖೆಗಳುಂಟು. ಬಾದಾಮಿಯ ಚಾಲುಕ್ಯರು, ಕಲ್ಯಾಣ ಚಾಲುಕ್ಯರು, ವೆಂಗಿ ಚಾಲುಕ್ಯರು. ಅಖಂಡ ಕರ್ನಾಟಕದ ಪ್ರಪ್ರಥಮ ಚಕ್ರವರ್ತಿಗಳಾಗಿ ಬಾದಾಮಿಯ ಚಾಲುಕ್ಯರು ಇನ್ನೂರು ವರ್ಷಗಳ ಕಾಲ (ಕ್ರಿ.ಶ ೫೪೩–ಕ್ರಿ.ಶ.೭೫೩) ವೈಭವದಿಂದ ಆಳಿದರು. ಕರ್ನಾಟಕದ ವಾಸ್ತುಶಿಲ್ಪ ಶೈಲಿಯಲ್ಲಿ ಅನೇಕ ಬಗೆಯ ಪ್ರಯೋಗಗಳನ್ನು ನಡೆಸಿದ ಅವಧಿಯೆಂದರೆ ಬಾದಾಮಿ ಚಾಲುಕ್ಯ ಮನೆತನದ ಆಳ್ವಿಕೆಯ ಕಾಲ. ಇವರನ್ನು ಕರ್ನಾಟಕದ ವಿಶಿಷ್ಟ ವಾಸ್ತುಶೈಲಿಯ ಆದ್ಯ ಪ್ರಯೋಗಕರ್ತರೆಂದು ಕರೆಯಲಾಗಿದೆ. ಬಾದಾಮಿ ಚಾಲುಕ್ಯರ ಕಾಲದ ಶಿಲಾದೇಗುಲಗಲೂ ವಿಫುಲವಾಗಿವೆ. ಇವರ ಕಾಲದ ಕಟ್ಟಡ ರಚನೆಗಳು ಪಟ್ಟದಕಲ್ಲು, ಐಹೊಳೆ, ಮಹಾಕೂಟಗಳೇ ಅಲ್ಲದೇ ಪ್ರಸ್ತುತ ಆಂಧ್ರಪ್ರದೇಶದ ಅಲಂಪುರ, ಮಹಾನಂದಿಗಳಲ್ಲೂ ವ್ಯಾಪಿಸಿವೆ. ಕ್ರಿ.ಶ.೬ ರಿಂದ ೮ನೆಯ ಶತಮಾನಗಳಲ್ಲಿ ನಿರ್ಮಾಣಗೊಂಡ ಈ ಸ್ಮಾರಕಗಳು ಭಾರತದ ಉತ್ಕೃಷ್ಟ ದೇವಾಲಯಗಳ ಸಾಲಿಗೆ ಸೇರಿವೆ. ಈ ದೇವಾಲಯಗಳಲ್ಲಿ ಕಂಡುಬರುವ ವಾಸ್ತು ವೈವಿಧ್ಯತೆಗಳು ವಿಸ್ಮಯಕಾರಿಯಾಗಿವೆ.

ಚಾಲುಕ್ಯ ವಾಸ್ತುಕಲೆಯು ಭಾರತೀಯ ಕಲಾ ಇತಿಹಾಸದಲ್ಲಿ ಮಹತ್ವದ ಸ್ಥಾನ ಪಡೆದಿದೆ.[೨೩] ಚಾಲುಕ್ಯರ ಕಾಲದ ದೇವಾಲಯ ವಾಸ್ತುಶಿಲ್ಪವನ್ನು ಎರಡು ಭಾಗಗಳಾಗಿ ವರ್ಗೀಕರಿಸಬಹುದು. ಅವುಗಳೆಂದರೆ,

೧. ಗುಹಾದೇವಾಲಯಗಳು, ೨. ರಾಚನಿಕ ಅಥವಾ ಕಟ್ಟಡ ದೇವಾಲಯಗಳು.

ಚಾಲುಕ್ಯರು ಬಾದಾಮಿ ಮತ್ತು ಐಹೊಳೆಯಲ್ಲಿ ಒಟ್ಟು ಒಂಬತ್ತು ಗುಹಾದೇವಾಲಯಗಳನ್ನು ಕಾಣಬಹದು.[೨೪] ಬಾದಾಮಿಯಲ್ಲಿರುವ ಚಾಲುಕ್ಯ ಗುಹಾಲಯಗಳು ನಾಲ್ಕು ಇವುಗಳನ್ನು ಬಾದಾಮಿಯ ದಕ್ಷಿಣ ದಿಕ್ಕಿನಲ್ಲಿರುವ ಕೆಂಪು ಉಸುಗು ಕಲ್ಲಿನ ಗುಡ್ಡದಲ್ಲಿ ಕೊರೆಯಲಾಗಿದೆ. ಈ ನಾಲ್ಕು ಗುಹೆಗಳಲ್ಲಿ ಮೊದಲನೆಯದು ಶೈವ, ಆನಂತರದ ಎರಡು ವೈಷ್ಣವ, ಕೊನೆಯದು ಜೈನ ಸಂಪ್ರದಾಯಕ್ಕೆ ಸೇರಿದೆ.[೨೫] ಬಾದಾಮಿಯಲ್ಲಿನ ಗುಹಾದೇವಾಲಯಗಳನ್ನು ಸ್ಥಳೀಯ ಮೇಣದ ಬಸದಿಗಳೆಂದು ಕರೆಯುತ್ತಾರೆ. ಆಯತಾಕಾರದ ಮೊಗಶಾಲೆ, ಹಜಾರ ಮತ್ತು ಮಧ್ಯದಲ್ಲಿ ಗರ್ಭಗುಡಿ ಇದ್ದು ಗುಹಾಲಯಗಳ ತಳವಿನ್ಯಾಸ ಇದೇ ರೀತಿ ಬಾದಾಮಿ ಚಾಲುಕ್ಯರ ಕಾಲದ ರಾಚನಿಕ (ಕಟ್ಟಡ) ದೇವಾಲಯಗಳು ಸಹ ಅವರ ಕಾಲದ ಕಲೆ ಮತ್ತು ವಾಸ್ತುಶಿಲ್ಪದ ನಿರ್ಮಿತಿಗಳಾಗಿವೆ. ಅವರ ಕಾಲದಲ್ಲಿ ಐಹೊಳೆ, ಮಹಾಕೂಟ, ಪಟ್ಟದಕ್ಲಲುಗಳಲ್ಲಿ ರಾಚನಿಕ ದೇವಾಲಯಗಳನ್ನು ಕಾಣಬಹುದು. ಚಾಲುಕ್ಯ ಸ್ಥಪಗಳು ವಿಭಿನ್ನ ತಳವಿನ್ಯಾಸಗಳಿರುವ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಬಹುಪಾಲು ದೇವಾಲಯಗಳಿಗೆ ಸರಳವಾದ ತಳವಿನ್ಯಾಸವಿದೆ. ಇವು ಚೌಕಾಕಾರದ ಚಿಕ್ಕ ಗರ್ಭಗೃಹ, ಸಭಾಮಂಟಪ ಮತ್ತು ಮುಖಮಂಟಪಗಳನ್ನು ಹೊಂದಿದ್ದು ಪೂಜಾ ವಿಧಿಗಳಿಗೆ ಪೂರಕವಾಗಿವೆ. ಮಹಾಕೂಟದ ಬಾಣಂತಿಗುಡಿ, ಐಹೊಳೆಯ ಸೂರ್ಯ ದೇವಾಲಯ ಈ ಬಗೆಯ ವಿನ್ಯಾಸದಲ್ಲಿ ರಚಿತವಾಗಿವೆ. ಪ್ರದಕ್ಷಿಣಾ ಪಥವಿಲ್ಲದ ಇವನ್ನು ನಿರಂಧಾರ ಮಂದಿರಗಳೆಂದು ಕರೆಯಲಾಗುತ್ತದೆ.[೨೬]

ಪ್ರದಕ್ಷಿಣಾಪಥವಿರುವ ದೇವಾಲಯಗಳನ್ನು ಸಾಂಧಾರವೆಂದು ಗುರುತಿಸಲಾಗುತ್ತದೆ. ದೇವತಾ ಶಿಲ್ಪವನ್ನು ಸುತ್ತು ಹಾಕಲು ಸಾಧ್ಯವಾಗುವಂತೆ ಗರ್ಭಗೃಹದ ಸುತ್ತ ಪ್ರದಕ್ಷಿಣಾ ಪಥವನ್ನು ನಿರ್ಮಿಸಲಾಗಿರುತ್ತದೆ. ಐಹೊಳೆಯ ಹುಚ್ಚಮಲ್ಲಿಗುಡಿ, ಪಟ್ಟದಕಲ್ಲಿನ ಸಂಗಮೇಶ್ವರ, ಮಹಾಕೂಟದ ಮಲ್ಲಿಕಾರ್ಜುನಗುಡಿಗಳನ್ನು ಹೆಸರಿಸಬಹುದು. ಐಹೊಳೆಯ ಲಾಡಖಾನ ಗುಡಿಯ ತಲವಿನ್ಯಾಸ ಇನ್ನೊಂದು ಮಾದರಿಯಲ್ಲಿದೆ. ಗರ್ಭಗೃಹವು ಸಭಾಮಂಟಪದ ಭಾಗವಾಗಿದ್ದು, ಅವೆರಡರ ಹಿಂದೆ ಗೋಡೆ ಒಂದೇ ಆಗಿದೆ. ಬಾದಾಮಿ ಚಾಲುಕ್ಯರು ಅವರ ಕಾಲದ ದೇವಾಲಯಗಳ ನಿರ್ಮಾಣಕ್ಕಾಗಿ ಸ್ಥಳೀಯವಾಗಿ ದೊರೆಯುವ ನಯವಾದ ನಸುಗೆಂಪು ಅಥವಾ ತಿಳಿ ಹಳದಿ

ಬಣ್ಣದ ಮರಳು ಕಲ್ಲನ್ನೇ ಹೆಚ್ಚಾಗಿ ಬಳಸಿದ್ದಾರೆ.[೨೭] ಹೀಗೆ ಬಾದಾಮಿ ಚಾಲುಕ್ಯರ ಕಾಲದ ದೇವಾಲಯಗಳ ನಿರ್ಮಿತಿಗಳ ಹಲವು ವಾಸ್ತುಶೈಲಿ ವಿಷಯಗಳನ್ನು ತಿಳಿಯಬಹುದು.

ಬಾದಾಮಿ ಚಾಳುಕ್ಯರಿಂದ ಪ್ರಾರಂಭವಾದ ಚಾಲುಕ್ಯ ವಾಸ್ತುಶೈಲಿಯ ನಿರ್ಮಾಣ ಚಟುವಟಿಕೆಯು ಅವರ ಉತ್ತರಾಧಿಕಾರಗಳಾದ ಕಲ್ಯಾಣ ಚಾಲುಕ್ಯ (೧೦–೧೨ನೇಯ ಶತಮಾನ) ಆಡಳಿತ ಕಾಲದಲ್ಲೂ ಮುಂದುವರೆಯಿತು. ಇದು ಬಾದಾಮಿ ಚಾಳುಕ್ಯರ ವಾಸ್ತು ಸಂಪ್ರದಾಯದ ವಿಕಾಸವೇ ಆದರೂ ಅದು ಸಂಪೂರ್ಣವಾಗಿ ವಿಕಾಸ ಹೊಂದುವ ವೇಳೆಗೆ ಅನೇಕ ಪ್ರಮುಖ ಬದಲಾವಣೆಗಳಿಗೊಳಗಾಗಿ ತನ್ನ ತನವನ್ನೇ ಸಾಧಿಸಿಕೊಂಡಿತು. ಕಲ್ಯಾಣ ಚಾಲುಕ್ಯರು ಕಪ್ಪುಮಿಶ್ರಿತ ನೀಲಿಛಾಯೆಯ ಕಲ್ಲನ್ನು ದೇವಾಲಯಗಳ ಕಟ್ಟಡಗಳ ನಿರ್ಮಾಣಕ್ಕೆ ಬಳಸಿರುವುದನ್ನು ಕಾಣಬಹುದು.[೨೮]

ಕರ್ನಾಟಕ ದೇವಾಲಯಗಳ ನಿರ್ಮಾಣದ ಇತಿಹಾಸದಲ್ಲಿ ಕಲ್ಯಾಣ ಚಾಲುಕ್ಯರ ಕಾಲ ಅಪೂರ್ವವಾದುದು. ವಿಶಿಷ್ಟ ಶೈಲಿಯ ದೇವಾಲಯಗಳನ್ನು ಇವರು ಆರಂಭಿಸಿದರು. ಮುಂದೆ ಹೊಯ್ಸಳರು ಈ ಶೈಲಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಿ ಮುಂದುವರೆಸಿದರು. "ವಿಸ್ತಾರವಾದ ಪ್ರದೇಶವನ್ನಾಳಿದ ಕಲ್ಯಾಣದ ಚಾಲುಕ್ಯರ ಕಾಲದಲ್ಲಿ ವಿಪುಲ ಸಂಖ್ಯೆ ದೇವಾಲಯಗಳು ನಿರ್ಮಿತವಾದವು. ಕಲ್ಯಾಣ ಚಾಲುಕ್ಯರ ದೇವಾಲಯಗಳನ್ನು ಔರಂಗಾಬಾದದ ಕೊಡದಿಂದ ತುಮಕೂರು ಜಿಲ್ಲೆಯ ಅರಳುಗುಪ್ಪೆಯವರೆಗೆ, ಕೊಲ್ಲಾಪುರದಿಂದ ಮಹಬೂನನಗರ ಜಿಲ್ಲೆಯ ಪಾನಗಲ್ಲುವರೆಗೆ ಹಬ್ಬಿರುವುದನ್ನು ಕಾಣಬಹುದು. ಆದರೂ ಇವರ ವಾಸ್ತು ಶೈಲಿಯನ್ನು ನಿರೂಪಿಸುವ ಬಹುಸಂಖ್ಯೆ ದೇವಾಲಯಗಳೂ ಬಳ್ಳಾರಿ, ಧಾರವಾಡ, ಮತ್ತು ಶಿವಮೊಗ್ಗ ಜಿಲ್ಲೆಗಳಲ್ಲಿವೆ. ಇವುಗಳನ್ನು ಹೆಚ್ಚಾಗಿ ತುಂಗಭದ್ರಾ ನದಿಯ ಎರಡು ದಂಡೆಯ ಸುತ್ತಮುತ್ತ ಕಟ್ಟಲಾಗಿದೆ."[೨೯] ಕಲ್ಯಾಣ ಚಾಲುಕ್ಯರ ಹೆಚ್ಚಿನ ದೇವಾಲಯಗಳು ನಿರಂಧಾರ ಅಂದರೆ ಒಳ ಪ್ರದಕ್ಷಿಣಾ ಪಥವಿಲ್ಲದ ಮಾದರಿಯದಾಗಿವೆ. ಇವುಗಳಲ್ಲಿ ಏಕಕೂಟ ದೇವಾಲಯಗಳೇ ಅಧಿಕ. ಕಲ್ಯಾಣ ಚಾಲಯಕ್ಯರ ದೇವಾಲಯಗಳ ಅದಿಷ್ಠಾನದ ಎತ್ತರವು ದೇವಾಲಯದಿಂದ ದೇವಾಲಯಕ್ಕೆ ಬೇರೆಯಾಗಿರುತ್ತದೆ. ಅದು ಸಾಮಾನ್ಯವಾಗಿ ಮೂರರಿಂದ ಐದು ಅಡಿಗಳ ಎತ್ತರವುಳ್ಳದಾಗಿರುತ್ತದೆ. ಅದಿಷ್ಠಾನದಲ್ಲಿ ಉಪಾಯ, ಜಗತಿ, ಕಂಪ, ಕಂಠ ಮತ್ತು ಪಟ್ಟಿಕೆಗಳು ಇರುತ್ತದೆ. ಕೆಲವು ಸಂದರ್ಭಗಳಲ್ಲಿ ಮಕರದ ತಲೆ, ಕೀರ್ತಿಮುಖ, ಮನುಷ್ಯ ಮತ್ತು ದೇವತಾಪುರಷರ ಚಿಕ್ಕ ಚಿಕ್ಕ ಶಿಲ್ಪಗಳನ್ನು ದೇವಾಲಯಗಳಲ್ಲಿ ಕೆತ್ತಿರುವುದು ಕಂಡು ಬರುತ್ತದೆ.[೩೦]

ಕಲ್ಯಾಣ ಚಾಲುಕ್ಯರ ದೇವಾಲಯಗಳಲ್ಲಿ ಕಂಡುಬರುವ ಜಾಲಾಂದ್ರಗಳು ವೈಶಿಷ್ಟ ಪೂರ್ಣವಾಗಿರುತ್ತವೆ. ಈ ದೇವಾಲಯಗಳಲ್ಲಿ ಜಾಲಾಂದ್ರಗಳನ್ನು ಸಾಮಾನ್ಯವಾಗಿ ದ್ವಾರಗಳ

[illegible]

[illegible]

ಎರಡೂ ಬದಿಗೆ ಅಳವಡಿಸಿರುತ್ತಾರೆ. ಪ್ರದೇಶದ್ವಾರ, ಸುಕನಾಸಿದ್ವಾರ ಮತ್ತು ಗರ್ಭಗೃಹದ್ವಾರಗಳ ಇಕ್ಕೆಲಗಳಲ್ಲಿ ಇಂತಹ ಜಾಲಂಧ್ರಗಳನ್ನು ಕಾಣಬಹುದು.[೩೧] ಉಣಕಲ್ಲಿನ ಚಂದ್ರಮೌಳೇಶ್ವರ ಮತ್ತು ಬಳ್ಳಿಗಾವಿಯ ತ್ರಿಪುರಾಂತಕೇಶ್ವರ ದೇವಾಲಯದ ಅಲಂಕಾರಿಕ ಜಾಲಾಂದ್ರಗಳು ಆಕರ್ಷಕವಾಗಿವೆ. ಇವರ ಕಾಲದ ದೇವಾಲಯಗಳ ದ್ವಾರಗಳಲ್ಲಿ ಹೆಚ್ಚು ಅಲಂಕೃತವಾಗಿರುವ ದ್ವಾರ ಶಾಖೆಗಳಿರುತ್ತವೆ. ಐದು ಅಥವಾ ಅದಕ್ಕೂ ಹೆಚ್ಚು ದ್ವಾರ ಶಾಖೆಗಳಿರುತ್ತವೆ. ಕಲ್ಯಾಣ ಚಾಲುಕ್ಯರ ದೇವಾಲಯಗಳ ಇನ್ನೊಂದು ಗಮನಾರ್ಹ ಲಕ್ಷಣವೆಂದರೆ ಕಂಬಗಳ ವಿನ್ಯಾಸ ಮತ್ತು ಅವುಗಳನ್ನು ಕೆತ್ತುವಿಕೆ ಸಾಮಾನ್ಯವಾಗಿ ಎರಡು ಪ್ರಕಾರದ ಕಂಬಗಳು ಇಲ್ಲಿ ಕಂಡುಬರುತ್ತವೆ. ಮೊದಲನೆಯ ವಿಧದ ಕಂಬ ಕಾಂಡಭಾಗದಲ್ಲಿ ಚಚ್ಚೌಕವಾಗಿದ್ದು, ಅಷ್ಟಸೈಲು ಮತ್ತು ಹದಿನಾರು ಭಾಗಗಳುಳ್ಳದಾಗಿರುತ್ತದೆ. ಎರಡನೇ ಪ್ರಕಾರದ ಕಂಬಗಂಟೆಯಾಕಾರದಾಗಿರುತ್ತದೆ. ಕಂಬಗಳನ್ನು ಒಂದು ಪೋಟಿದಂತಲೂ ಚಿಕ್ಕದಾದ ಚಚ್ಚೌಕ ವೇಠಗಳ ಮೇಲೆ ನಿಲ್ಲಿಸಲಾಗಿರುವುದನ್ನು ಇಲ್ಲಿ ಸಾಮಾನ್ಯವಾಗಿ ಕಾಣುತ್ತವೆ.[೩೨] ಈ ಕಾಲದ ದೇಗುಲಗಳು ದ್ರಾವಿಡ ಮತ್ತು ನಾಗರ ಶೈಲಿಗಳ ಸಮ್ಮಿಲನವಾಗಿ ಜೊತೆಗೆ ವೇಸರ ಶೈಲಿಯಲ್ಲಿ ನಿರ್ಮಾಣವಾಗಿವೆ. ಹಸಿರು ಮಿಶ್ರಿತ ಶಿಲೆ ದೊರೆಯದಿರುವುದು ಕಾರಣವಾಗಿದೆ. ಕಲ್ಯಾಣ ಚಾಲುಕ್ಯರ ಕಾಲದ ಪ್ರಮುಖ ದೇವಾಲಯಗಳೆಂದರೆ ಇಟಗಿಯ ಮಹದೇವ ದೇವಾಲಯ, ಲಕ್ಕುಂಡಿಯ ಕಾಶಿ ವಿಶ್ವನಾಥ, ಕುಕನೂರಿನ ನವಲಿಂಗೇಶ್ವರ ಕಲ್ಲೇಶ್ವರ ಗದುಗಿನ ತ್ರಿಕೂಟೇಶ್ವರ, ಸರಸ್ವತಿ ಮತ್ತು ಸೋಮೇಶ್ವರ ದೇವಾಲಯಗಳು ಮುಖ್ಯವಾಗಿವೆ.

ಕಲ್ಯಾಣ ಚಾಲುಕ್ಯರ ಸಾಮಂತರಾಗಿದ್ದ ಹೊಯ್ಸಳರು ೧೨ನೇ ಶತಮಾನದ ಪೂರ್ವಾರ್ಧದಲ್ಲಿ ಸ್ವತಂತ್ರರಾದ ನಂತರ, ಚಾಲುಕ್ಯರ ಸಾಂಸ್ಕೃತಿಕ ಸಂಸ್ಥೆಗಳಿಗೆ ಉತ್ತರಾಧಿಕಾರಿಗಳಾಗಿ ಆ ಸಾಂಸ್ಕೃತಿಕ ಪರಂಪರೆಯನ್ನು ಸ್ವೀಕರಿಸಿದರು. ಆದ್ದರಿಂದಾಗಿ ಹೊಯ್ಸಳ ಸ್ಥಪತಿಗಳು ಚಾಲುಕ್ಯ ವಾಸ್ತು ಶೈಲಿಯನ್ನೇ ಮುಂದುವರಿಸಿದರಾದರೂ ಅದರಲ್ಲಿ ಅನೇಕ ಹೊಸ ಬಗೆಯ ಪ್ರಯೋಗಗಳನ್ನು ನಡೆಸಿ ಹೊಸ ಅಂಶಗಳನ್ನು ಅಳವಡಿಸಿದರು. ಇವರ ಕಾಲದಲ್ಲಿ ರೂಪಗೊಂಡ ಕಲೆ, ವಾಸ್ತುಶಿಲ್ಪ ವಿಶ್ವಪ್ರಸಿದ್ಧಿ ಪಡೆದಿದೆ. "ಹೊಯ್ಸಳ ಕಾಲದಲ್ಲಿ ನಿರ್ಮಾಣವಾಗಿರುವ ದೇವಾಲಯಗಳನ್ನು 'ಸೋಪ್‌ಸ್ಟೋನ್' ಎಂದು ಕರೆಯಲ್ಪಡುವ ಮೆದುವಾದ ಕಲ್ಲಿನಲ್ಲಿ ರೂಪಿಸಿದ್ದಾರೆ. ಇದರಲ್ಲಿ ಕೆತ್ತನೆಗೆ ಬಹುವಾದ ಅವಕಾಶವಿರುತ್ತದೆ. ಈ ಕಲ್ಲಿನ ಗುಣವೆಂದರೆ ಭೂಮಿಯಿಂದ ಅಗೆದು ತೆಗೆದಾಗ ತುಂಬಾ ಮೆದುವಾಗಿರುತ್ತದೆ. ನಂತರ ಗಾಳಿಯಾಡುತ್ತಿದ್ದಂತೆಲ್ಲಾ ಗಡುಸಾಗುತ್ತದೆ. ಈ ಕಲ್ಲಿನಲ್ಲಿ ಕೊರೆಯುವುದು ಸುಲಭ. ತುಂಬಾ ಸೂಕ್ಷ್ಮವಾದ ಕೆತ್ತನೆಗಳನ್ನು ನೋಡಬಹುದು.[೩೩] ಹೊಯ್ಸಳ ಶೈಲಿಯ ಕಟ್ಟಡ ನಿರ್ಮಾಣದಲ್ಲಿ ವಾಸ್ತು ಶಿಲ್ಪಿಯ ಕೈಚಳಕಕ್ಕಿಂತಲೂ ರೂವಾರಿಯ ಅನುಪಮ ಕಲಾವಂತಿಕೆ ಎದ್ದು ಕಾಣುತ್ತದೆ. ಎಂಬುದು ಕಲಾವಿಮರ್ಶಕರ ಅಭಿಪ್ರಾಯ.

ಪರ್ಸಿಬ್ರೌನರ ಮಾತುಗಳಲ್ಲಿ ಹೇಳಬೇಕೆಂದರೆ "ಹೊಯ್ಸಳ ದೇವಾಲಯಗಳು ವಾಸ್ತು ನಿರ್ಮಾಣಗಳೆನ್ನುವುದಕ್ಕಿಂತ ಪ್ರಯೋಗಾತ್ಮಕ ಕಲಾಮಂದಿರಗಳಾಗಿವೆ. ದೇವಾಲಯದ ಹೊರಗೋಡೆಗಳ ಮೇಲಿನ ವಿಗ್ರಹಗಳು ಒಂದೊಂದು ತಮ್ಮದೇ ಆದ ಪ್ರತ್ಯೇಕ ಸನ್ನಿವೇಶವನ್ನು ಪ್ರತಿನಿಧಿಸುತ್ತವೆ. ಅವರ ಕೆಲಸಗಾರರು ನಿರ್ಮಿಸುವ ದೇವತಾ ಮೂರ್ತಿಗಳು ಕಲ್ಲಿನಲ್ಲಿ ದೊಡ್ಡ ಆಕಾರದಲ್ಲಿ ಇಲ್ಲಿ ಪುನರಾವರ್ತನೆಗೊಂಡಂತೆ ಭಾಸವಾಗುತ್ತದೆ.[೩೪] ಹೊಯ್ಸಳ ಕಾಲದ ದೇವಾಲಯಗಳು ಕರ್ನಾಟಕದ ಅನೇಕ ಭಾಗಗಳಲ್ಲಿ ಕಂಡುಬಂದರೂ ಅವು ಹೆಚ್ಚಾಗಿ ಹಾಸನ, ಚಿಕ್ಕಮಗಳೂರು, ತುಮಕೂರು, ಚಿತ್ರದುರ್ಗ, ಶಿವಮೊಗ್ಗ ಜಿಲ್ಲೆಗಳಲ್ಲಿ ಕೇಂದ್ರಿಕೃತವಾಗಿವೆ.[೩೫]

ಹೊಯ್ಸಳರ ಕಾಲದ ದೇವಾಲಯಗಳಲ್ಲಿ ದೇವಾಲಯದ ಮೂರು ಭಾಗಗಳು ಇವೆ.

೧. ಗರ್ಭಗೃಹ ಮತ್ತು ವಿಮಾನ

೨. ಶುಕನಾಸಿ (ಅಂತರಾಳ) ಮತ್ತು ನವರಂಗ (ಮಂಟಪ)

೩. ಅನೇಕ ಬಾರಿ ಮುಖಮಂಟಪವು ಮುಂಭಾಗದಲ್ಲಿರುತ್ತದೆ.[೩೬] ತಳ ವಿನ್ಯಾಸವನ್ನನುಸರಿಸಿ ಹೊಯ್ಸಳ ದೇವಾಲಯಗಳನ್ನು ಏಕಕೂಟ, ದ್ವಿಕೂಟ, ತ್ರಿಕೂಟ, ಚತುಷ್ಕೂಟ ಮತ್ತು ಪಂಚಕೂಟಗಳಾಗಿ ವಿಂಗಡಿಸಬಹುದು. ಒಂದೇ ಗರ್ಭಗೃಹವಿರುವ ದೇವಾಲಯಗಳಿಗೆ ಏಕಕೂಟ ದೇವಾಲಯಗಳೆಂದು ಕರೆಯಲಾಗಿದ್ದು, ಬೇಲೂರಿನ ಚನ್ನಕೇಶವ, ಹಾರ್ನಳ್ಳಿಯ ಸೋಮೇಶ್ವರ ಮೊದಲಾದ ದೇವಾಲಯಗಳನ್ನು ಉದಾಹರಿಸಬಹುದು.[೩೭]

ಹಳೇಬೀಡಿನ ಹೊಯ್ಸಳೇಶ್ವರ ಅನೆಕೊಂಡದ ಈಶ್ವರ, ಬೆಳ್ಳೂರಿನ ಕಣ್ಣೇಶ್ವರ ದೇವಾಲಯಗಳು ಪ್ರಸಿದ್ದ ದ್ವಿಕೂಟ ದೇವಾಲಯಗಳು.[೩೮] ಅದೇ ರೀತಿ ಹೊಯ್ಸಳ ಕಾಲ ತ್ರಿಕೂಟ ದೇವಾಲಯಗಳ ರಚನೆಯ ಪರ್ವಕಾಲವೆಂದೇ ಹೇಳಬಹುದು. ಕಂಬದಹಳ್ಳಿ, ಭದ್ರವತಿ, ಉಂಡಿಗನಹಾಳ್, ಸೆಟ್ಟಿಕೆರೆ, ಬೆಳ್ಳೂರು, ಅಘಾಲಯ, ಬಂದಳಿಕೆ, ಮೊದಲಾದ ಸ್ಥಳಗಳಲ್ಲಿ ತ್ರಿಕೂಟ ದೇವಾಲಯಗಳಿವೆ.[೩೯] ಹೊಯ್ಸಳ ದೇವಾಲಯಗಳ ವಿಶಿಷ್ಟ ಲಕ್ಷಣಗಳಲ್ಲಿ ಜಗತಿ ಒಂದು. ಹೊಯ್ಸಳ ದೇವಾಲಯಗಳು ಎತ್ತರವಾದ ಜಗತಿಯ ಮೇಲೆ ನಿರ್ಮಾಣಗೊಂಡಿವೆ. ಕರ್ನಾಟಕದ ವಾಸ್ತುಶಿಲ್ಪದಲ್ಲಿ ಈ ಜಗತಿಯ ಸಂಪ್ರದಾಯ ಹೊಯ್ಸಳ ಕಾಲದಲ್ಲಿ ಅಭಿವೃದ್ಧಿಗೊಂಡಿತು. ಹೊಯ್ಸಳ ದೇವಾಲಯಗಳಲ್ಲಿ ಈ ಜಗತಿ ಸಾಮಾನ್ಯವಾಗಿ ಮೂರರಿಂದ ಐದು ಅಡಿಗಳ ಎತ್ತರವಿರುತ್ತದೆ. ಜಗತಿಯು ಆಕಾರದಲ್ಲಿ ನಕ್ಷತ್ರಾಕಾರದಲ್ಲಿರುತ್ತದೆ. ಬೇಲೂರಿನ ಚನ್ನಕೇಶವ ದೇವಾಲಯದ ಜಗತಿ ಸುಮಾರು ಐದು ಅಡಿ ಎತ್ತರವಾದದ್ದು ಇದರಲ್ಲಿ ಮೂವತ್ತೆರಡು ಕೋನಗಳಿವೆ.[೪೦] ಬಹುಎತ್ತರವಾಗಿರುವ ಹೊಯ್ಸಳ ದೇವಾಲಯಗಳ ಅಧಿಷ್ಠಾನಗಳು ಅತ್ಯಂತ ಸುಂದರವಾದ ಅಲಂಕಾರವನ್ನು ಹೊಂದಿರುವ

ಅಡ್ಡಪಟ್ಟಿಗಳನ್ನು ಪಡೆದುಕೊಂಡಿರುತ್ತವೆ. ಈ ಅಡ್ಡ ಪಟ್ಟಿಗಳಲ್ಲಿ ಆನೆಯಸಾಲು, ಅಶ್ವಗಳ ಸಾಲು, ಎಲೆಬಳ್ಳಿಗಳ ಸಾಲು, ರಾಮಾಯಣ ಮಹಾಭಾರತಗಳ ಕಥೆಗಳನ್ನು ಒಳಗೊಂಡ ಸಾಲು, ಹಂಸಗಳ ಸಾಲು ಹೀಗೆ ವಿವಿಧ ಚಿತ್ರಪಟ್ಟಿಕೆಗಳನ್ನು ಅವುಗಳಲ್ಲಿ ಕಾಣಬಹುದು.[೪೧]

ಹೊಯ್ಸಳ ದೇವಾಲಯಗಳ ಮುಖ ಮಂಟಪಗಳಲ್ಲಿರುವ ಕಕ್ಷಾಸನಗಳು ಗಮನಾರ್ಹವಾಗಿದ್ದು ಇವುಗಳ ಹಿಂಭಾಗಗಳು ವಿವಿಧ ಬಗೆಯ ಶಿಲ್ಪಗಳಿಂದ ಅಲಂಕೃತವಾಗಿರುತ್ತವೆ. ಅಮೃತಾಪುರದ ಅಮೃತೇಶ್ವರ ಹಾಗೂ ಕೇಶವ ದೇವಾಲಯದಲ್ಲಿ ಇವುಗಳನ್ನು ನೋಡಬಹುದು.[೪೨] ಹೊಯ್ಸಳ ಶೈಲಿಯ ಅತ್ಯಂತ ಶ್ರೀಮಂತ ಶಿಲ್ಪದಿಂದ ಕೂಡಿದ ಪ್ರಾತಿನಿಧಿಕ ದೇವಾಲಯಗಳಲ್ಲಿ ಹಳೇಬೀಡಿನ ಹೊಯ್ಸಳೇಶ್ವರ, ಬೇಲೂರಿನ ಚನ್ನಕೇಶವ ಮತ್ತು ಸೋಮನಾಥಪುರದ ಕೇಶವ ದೇವಾಲಯವನ್ನು ಹೆಸರಿಸಬಹುದು. ಹೊಯ್ಸಳೇಶ್ವರ ದೇವಾಲಯವು ಈ ಶೈಲಿಯ ದೇವಾಲಯಗಳಲ್ಲಿ ಅತಿ ದೊಡ್ಡದು. ೭೦೦ ಅಡಿಗಳಿಗೂ ಹೆಚ್ಚು ಉದ್ದ ಗೋಡೆಯ ಪಟ್ಟಿಕೆಗಳಲ್ಲಿರುವ ಆನೆಗಳ ಸಂಖ್ಯೆಯೇ ೨೦೦೦ಕ್ಕೂ ಅಧಿಕ ಸರ್ವಾಲಂಕಾರ ಭೂಷಿತ ಅನೆಗಳ ಭಂಗಿಯು ವೈವಿಧ್ಯಮಯ. ಈ ದೇವಾಲಯದ ಶಿಲ್ಪಕಲೆ ಈ ಶೈಲಿಯ ದೇಗುಲಗಳಲ್ಲಿ ಇತರ ಕಡೆಗಳಲ್ಲೆಲ್ಲೂ ಇಷ್ಟು ಭವ್ಯವಾಗಿಲ್ಲ. ಹೊಯ್ಸಳ ಶೈಲಿಯ ಮತ್ತೊಂದು ವಿಶಿಷ್ಟ ಅಂಶವೆಂದರೆ ಮದನಿಕೆ ಅಥವಾ ಶಿಲಾಬಾಲಕಿಯರು. ನವರಂಗದ ಸುಂದರ ಕಂಬಗಳ ಬೋದಿಗೆಯ ಮೇಲೆ ಓರೆಯಾಗಿ ನಿಲ್ಲಿಸಲಾಗುರುವ ಶಿಲಾ ಬಾಲಕಿಯರ ಬೆಡಗಿನ ಶಿಲ್ಪಗಳನ್ನು ಅಲಂಕಾರಕ್ಕಾಗಿಯೇ ಜೋಡಿಸಲಾಗಿದೆ. ಹೀಗೆ ಹೊಯ್ಸಳರ ಕಾಲದ ದೇವಾಲಯಗಳು ಕರ್ನಾಟಕದ ಹಲವು ಭಾಗಗಳಲ್ಲಿ ನಿರ್ಮಾಣಗೊಂಡಿದ್ದು ಅವರ ಕಾಲದ ಸಾಂಸ್ಕೃತಿಕ ವೈಭವವನ್ನು ಬಿಂಬಿಸುತ್ತವೆ.

ಇಡೀ ದಕ್ಷಿಣ ಭಾರತಕ್ಕೆ ಧಾರ್ಮಿಕ ರಕ್ಷಣೆಯನ್ನು ನೀಡಿದ ಮಧ್ಯಕಾಲೀನ ಕರ್ನಾಟಕದ ಒಂದು ಸಾಮ್ರಾಜ್ಯ ವಿಜಯನಗರ ಎಲ್ಲಾ ಕಲೆಗಳಂತೆ ವಾಸ್ತು ಶಿಲ್ಪ, ಶಿಲ್ಪಗಳೂ ಈ ಸಾಮ್ರಾಜ್ಯದಡಿಯಲ್ಲಿ ಪೋಷಣೆಯನ್ನು ಪಡೆದವು. ದಕ್ಷಿಣಭಾರತದ ಉತ್ತರ ಭಾಗದಲ್ಲಿ ಚಾಲುಕ್ಯರ, ಕಾಕತೀಯರ ಮತ್ತು ಹೊಯ್ಸಳರ ಪರಂಪರೆಯನ್ನು ಮುಂದುವರೆಸಿದರು.[೪೩] ಇವರ ಕಾಲದ ದೇವಾಲಯ ವಾಸ್ತು ಶೈಲಿಯನ್ನು ವಿಜಯ ನಗರ ವಾಸ್ತುಶೈಲಿ ಎಂದೇ ಪ್ರಸಿದ್ಧಿ ಪಡಿದಿದೆ. ಈ ಕಾಲದ ದೇವಾಲಯಗಳು ಇಡೀ ದಕ್ಷಿಣ ಭಾರತದಲ್ಲೆಲ್ಲಾ ಹರಿಡಿಕೊಂಡಿವೆ. ಹೊಸದಾಗಿ ದೇವಾಲಯಗಳನ್ನು ಕಟ್ಟಿಸಿದಂತೆಯೇ ಹಳೆಯ ದೇವಾಲಯಗಳನ್ನು ಜೀರ್ಣೋದ್ಧಾರ ಗೊಳಿಸುವುದಕ್ಕೂ ಮತ್ತು ಅವುಗಳನ್ನು ವಿಸ್ತರಿಸುವುದಕ್ಕೂ ಈ ಸಾಮ್ರಾಜ್ಯ ಹೆಚ್ಚು ಗಮನವನ್ನು ಕೊಟ್ಟಿತ್ತು. ದ್ರಾವಿಡ ಮತ್ತು ಹೊಯ್ಸಳ ಶೈಲಿಗಳ ಸುಂದರ ಸಂಯೋಜನೆಯನ್ನು ರೂಢಿಸಿ, ರೂಪಿಸಿಕೊಂಡ ವಿಜಯನಗರ ಶಿಲ್ಪಗಳು ವಿಜಯನಗರ ಶೈಲಿಯೆಂದೂ ಪ್ರಸಿದ್ಧವೂ, ನವೀನವೂ,

[illegible]

[illegible]

[illegible]

ಖಚಿತವೂ ಆದ ಶೈಲಿಯ ಪ್ರವರ್ತಕರಾದರು. ಅನೇಕ ಧಾರ್ಮಿಕ ವಿಧಿಗಳನ್ನು ದೇವಾಲಯದಲ್ಲಿಯೇ ನೆರವೇರಿಸಬೇಕಾದುದರಿಂದ ದೇವಾಲಯಗಳ ತಳವಿನ್ಯಾಸ ಹೆಚ್ಚು ವಿಸ್ತಾರವಾಗತೊಡಗಿದವು. ಇವರ ಕಾಲದ ದೇವಾಲಯಗಳಲ್ಲಿ ಸಾಮಾನ್ಯವಾಗಿ ಗರ್ಭಗೃಹ, ಪ್ರದಕ್ಷಿಣಾಪಥ, ಶುಕನಾಸಿ, ಅರ್ಧಮಂಟಪ, ನವರಂಗ ಮತ್ತು ಮುಖಮಂಟಪಗಳಿರುತ್ತವೆ. ನವರಂಗಕ್ಕೆ ಮೂರು ಪ್ರದೇಶ ದ್ವಾರಗಳಿದ್ದು ಪಕ್ಕದಲ್ಲಿರುವ ಪ್ರದೇಶ ದ್ವಾರಗಳು ನವರಂಗವನ್ನು ಚಿಕ್ಕದಾದ ಮಂಟಪಗಳಿಂದ ಕೂಡಿಸಿರುತ್ತವೆ. ದೇವಾಲಯದ ಸುತ್ತಲೂ ನಿರ್ದಿಷ್ಟ ಪಡಿಸಿದ ದಿಕ್ಕಿನಲ್ಲಿ ಪರಿವಾರ ದೇವತೆಗಳಿಗಾಗಿ ಚಿಕ್ಕಗುಡಿಗಳಿರುತ್ತವೆ. ವಿಶಾಲವಾದ ಪ್ರಕಾರದ ಸುತ್ತಲೂ ಎತ್ತರವಾದ ಗೋಡೆಯಿದ್ದು ಪ್ರಾಕಾರವನ್ನು ಎರಡು ಅಥವಾ ಮೂರು ಕಡೆಗಳಿಂದ ಪ್ರವೇಶಿಸಲು ಪ್ರವೇಶ ಮಂಟಪಗಳು ಕಂಡುಬರುತ್ತವೆ.[೯೪] ಈ ಪ್ರವೇಶ ಮಂಟಪಗಳ ಮೇಲೆ ಎತ್ತರವಾದ ಗೋಪುರಗಳನ್ನು ಕಟ್ಟಿರುತ್ತಾರೆ. ಇದು ದೇವಾಲಯದ ವಾಸ್ತುಶಿಲ್ಪಕ್ಕೆ ವಿಜಯನಗರದ ಶಿಲ್ಪಿಗಳು ನೀಡಿದ ಬಹುದೊಡ್ಡ ಕೊಡುಗೆ, ಇದನ್ನೇ ರಾಜಗೋಪುರ ಎಂದೂ ಸಹ ಕರೆಯಲಾಗುತ್ತದೆ.[೯೫] ಕೆಲವು ಬಾರಿ ಇದರ ಎತ್ತರವೂ ೧೧ ಅಂತಸ್ತು ಎತ್ತರವಾಗಿರುವುದುಂಟು. ಕಾಂಚೀಪುರದ ಏಕಾಂಬರನಾಥ ದೇವಾಲಯದ ಗೋಪುರವು ೧೧ ಅಂತಸ್ತು ಎತ್ತರವಾಗಿದೆ.[೯೬]

ಈ ಕಾಲದ ಶಿಲ್ಪಿಗಳ ಇನ್ನೊಂದು ಕೊಡುಗೆಯೆಂದರೆ ಹಲವು ಮಂಟಪಗಳಿರುತ್ತವೆ. ದೇವಾಲಯವನ್ನು ವಿಸ್ತರಿಸಿ ವಿನ್ಯಾಸಮಾಡಿದ್ದು. ವಿಜಯನಗರ ಕಾಲದಲ್ಲಿ ಗ್ರಾನೈಟ್ ಶಿಲೆಯನ್ನು ದೇವಾಲಯಗಳ ನಿರ್ಮಾಣಕ್ಕೆ ಬಳಸಿದರು. ಇವರ ಕಾಲದಲ್ಲಿ ಸ್ಥಳೀಯವಾಗಿ ಗ್ರಾನೈಟ್ ಶಿಲೆಗಳ ಅಪಾರ ಪ್ರಮಾಣದಲ್ಲಿ ದೊರೆಯುತ್ತಿದ್ದು ಅವುಗಳನ್ನು ಹೆಚ್ಚು ಬಳಸಿರುವುದನ್ನು ಕಾಣಬಹುದು.

ಇದರಿಂದಾಗಿ ಹೊಯ್ಸಳ ಕಾಲದ ಸೂಕ್ಷ್ಮಕೆತ್ತನೆ ಮರೆಯಾಗಿ ಈ ಶಿಲೆಯಲ್ಲಿ ದೇವಾಲಯಗಳು ಹೆಚ್ಚು ವಿಸ್ತಾರವೂ ಹಾಗೂ ದೇವಾಲಯದ ಕಂಬಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಉಬ್ಬು ಶಿಲ್ಪಗಳು ಕಂಡು ಬಂದವು. ವಿಜಯನಗರದ ದೇವಾಲಯಗಳು ಎತ್ತರವಾದ ಅಧಿಷ್ಠಾನವನ್ನು ಹೊಂದಿರುತ್ತವೆ. ಹಜಾರಾರಾಮ ಮತ್ತು ವಿಠ್ಠಲ ದೇವಾಲಯಗಳಲ್ಲಿಯು ಅಧಿಷ್ಠಾನ ವಿವಿಧ ಬಗೆಯ ಭಾಗಗಳನ್ನು ಹೊಂದಿದ್ದು ಕೈಬಳೆಯಾಕಾರದ ಭಾಗ ಎದ್ದು ಕಾಣುತ್ತದೆ.[೯೭] ವಿಜಯನಗರ ಕಾಲದ ಪ್ರದಕ್ಷಿಣಾಪಥ ಗರ್ಭಗೃಹದ ನೆಲೆಗಟ್ಟಿಗಿಂತ ಕೆಳಮಟ್ಟದಲ್ಲಿದ್ದು ಸೋಪಾನವೊಂದರ ಮೂಲಕ ಕೆಳಗಿಳಿಯುವ ವ್ಯವಸ್ಥೆ ಇರುತ್ತವೆ.[೯೮] ವಿಜಯನಗರ ದೇವಾಲಯಗಳ ಗರ್ಭಗೃಹ ಸಾಮಾನ್ಯವಾಗಿ ಚೌಕಾಕಾರವಾಗಿರುತ್ತದೆ. ಆದರೆ ನಿದ್ರಿಸುತ್ತಿರುವ ಅಥವಾ ಒರಗಿರುವ ಭಂಗಿಯಲ್ಲಿರುವ

ದೇವತೆಗಾಗಿ ದೇವಾಲಯವನ್ನು ಕಟ್ಟಿಸಿದಾಗ ಮಾತ್ರ ಗರ್ಭಗೃಹ ಸಮಾಚತುಷ್ಕುಣಾಕಾರದಲ್ಲಿರುತ್ತದೆ.[೪೯] ಹಂಪಿ ಪರಿಸರದಲ್ಲಿರುವ ಅನಂತಶಯನಗುಡಿ ಇದಕ್ಕೆ ಉತ್ತಮ ಉದಾಹರಣೆ, ವಿಜಯನಗರ ಕಾಲದ ಕಂಬಗಳು ತುಂಬಾ ಕಲಾತ್ಮಕವಾಗಿ ಕಂಡುಬರುತ್ತವೆ. ಇವರ ಕಾಲದ ಕಂಬಗಳಲ್ಲಿನ ಪುಷ್ಪಬೋದಿಗೆಯು ಹೆಚ್ಚು ಬಾಗಿದ್ದು ಅಲಂಕೃತವಾಗಿರುತ್ತವೆ. ಇವರ ಸಂಗೀತ ಕಂಬಗಳು ಮತ್ತೊಂದು ಪ್ರಕಾರದ ಕಂಬಗಳಾಗಿವೆ. ಅಷ್ಟೇ ಅಲ್ಲದೇ ಅಶ್ವಸ್ಥಂಭ, ಯೂಳಸ್ಥಂಭ ವಿವಿಧ ಮಾದರಿ ಸ್ತಂಭಗಳು ಇವರ ಕಾಲದಲ್ಲಿ ಬೆಳೆದು ಬಂದವು ವಿಜಯನಗರ ಕಾಲದ ಪ್ರಮುಖ ದೇವಾಲಯಗಳೆಂದರೆ ವಿರೂಪಾಕ್ಷ ದೇವಾಲಯ, ಹಜಾರರಾಮಸ್ವಾಮಿ ದೇವಾಲಯ, ಅನಂತಶಯನ ದೇವಾಲಯ, ವಿಜಯವಿಠ್ಠಲಸ್ವಾಮಿ ದೇವಾಲಯ ಇನ್ನೂ ಮುಂತಾದ ದೇವಾಲಯಗಳನ್ನು ಹೆಸರಿಸಬಹುದು.

ವಿಜಯನಗರ ಪತನದ ನಂತರ ಕರ್ನಾಟಕದ ವಾಸ್ತು ಶೈಲಿಯಲ್ಲಿ ಏಕತೆ ಉಳಿದುಬರಲಿಲ್ಲ ಉತ್ತರ ಭಾಗದಲ್ಲಿ ಬಹುಮನಿ ಮತ್ತು ಆದಿಲ್‌ಷಾಹಿಗಳ ಪ್ರಭಾವದಿಂದ ಹಿಂದೂ ಮುಸ್ಲಿಂ ಶೈಲಿಯು ಬಳಕೆಗೆ ಬಂದಿತು ಉಳಿದ ಭಾಗಗಳಲ್ಲಿ ಪಾಳೆಯಗಾರರ ಆಳ್ವಿಕೆಯ ಅತಂತ್ರತೆ, ಅಧಿಕಾರದ ಹಸ್ತಾಂತರಗಳಿಂದ ದೇಗುಲ ವಾಸ್ತುಶೈಲಿಯ ಸರಳಗೊಂಡಿರುವುದನ್ನು ಕಾಣಬಹುದು. ಹೀಗೆ ಭಾರತವನ್ನು ಒಳಗೊಂಡಂತೆ ಅದರಲ್ಲೂ ಕರ್ನಾಟಕದ ದೇವಾಲಯ ವಾಸ್ತುಶಿಲ್ಪ ಶೈಲಿಯ ಬೆಳವಣಿಗೆಯನ್ನು ಸಂಕ್ಷಿಪ್ತವಾಗಿ ಗುರುತಿಸಬಹುದಾಗಿದೆ.

ಅಡಿಟಿಪ್ಪಣಿಗಳು

೧. ಅಪರ್ಣ ಕೂ.ಸ., ದೇವಾಲಯ ವಾಸ್ತುಶಿಲ್ಪ ಪರಿಚಯ, ಪು.೧

೨. ಅದೇ, ಪು೧

೩. ಗೋಪಾಲ್ ಬಾ.ರಾ, ಕರ್ನಾಟಕದ ಕಲೆಗಳು (ವಾಸ್ತು), ಸಂಪುಟ-೪, ಪು.೧

೪. ಅದೇ, ಪು. ೧-೨

೫. ರಮೇಶ ನಾಯಕ, 'ವಾಸ್ತು ಮತ್ತು ಮೂರ್ತಿಶಿಲ್ಪ' ಕುರುಗೋಡು ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ-೧, ಬಾಲಸುಬ್ರಮಣ್ಯ, (ಸಂ), ಪು. ೮೮.

೬. ಜ್ಞಾನಾನಂದ ಜಿ. ಶಿಲ್ಪಾದರ್ಶ, ಸಂಪುಟ-೨, ಪು.೭

೭. ಸುರೇಶ ಕೆ.ಎಂ. ಮತ್ತು ಇತರರು, ಕರ್ನಾಟಕದ ದೇವಾಲಯ ಕೋಶ : ಕೊಪ್ಪಳ ಜಿಲ್ಲೆ, ಪು.೯.

೮. ಜ್ಞಾನಾನಂದ ಜಿ. ಶಿಲ್ಪಾದರ್ಶಿ, ಸಂಪುಟ-೨, ಪು. ೧೬

೯. ಅದೇ, ಪು. ೨೩.

೧೦. ಅದೇ, ಪು. ೩೯

048607

೧೧. ಅದೇ, ಪು. ೮೮-೮೯

೧೨. ಅದೇ, ಪು. ೮೯

೧೩. ಸುರೇಶ ಕೆ.ಎಂ. ಮತ್ತು ಇತರರು. ಪೂರ್ವೋಕ್ತ, ಪು ೧೫

೧೪. ಜ್ಞಾನಾನಂದ ಜಿ., ಪೂರ್ವೋಕ್ತ, ಪು. ೯೮

೧೫. ತಿಪ್ಪೇರುದ್ರಾಸ್ವಾಮಿ ಹೆಚ್,. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು. ೫೩೪

೧೬. ಅದೇ, ಪುಟ, ೫೫೪.

೧೭. ರಾಜಶೇಖರ ಎಸ್, ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಪು. ೬-೮

೧೮. ರಘುನಾಥಭಟ್. ಎಚ್. ಆರ್., 'ಆದಿಕದಂಬರ ವಾಸ್ತುಶಿಲ್ಪಕಲೆ', ಶಿಲ್ಪಕಲಾ ಪ್ರಪಂಚ, ತಿಪ್ಪೇಸ್ವಾಮಿ ಪಿ.ಆರ್. (ಸಂ) ಪು. ೧೪೭-೧೪೮.

೧೯. ತಿಪ್ಪೇಸ್ವಾಮಿ, ಪಿ.ಆರ್. (ಸಂ) ಪು. ೧೪೭-೧೪೮

೨೦. ಅದೇ, ಪು. ೫೩೪.

೨೧. ರಾಜಶೇಖರ್ ಎಸ್., ಪೂರ್ವೋಕ್ತ, ಪು. ೧೨-೧೩

೨೨. ಸುರೇಶ್ ಕೆ.ಎಂ. ಮತ್ತು ಇತರರು, ಪೂರ್ವೋಕ್ತ, ಪು. ೧೭

೨೩. ಶಿಲಾಕಾಂತ ಪತ್ತಾರ, ಬಾದಾಮಿ, ಪು. ೧೩

೨೪. ಅದೇ, ಪು. ೨೭

೨೫. ರಾಜಶೇಖರ್ ಎಸ್., ಪೂರ್ವೋಕ್ತ, ಪು. ೩೦

೨೬. ಶಿಲಾಕಾಂತ ಪತ್ತಾರ., ಪೂರ್ವೋಕ್ತ, ಪು ೧೫

೨೭. ಅದೇ, ಪು. ೩

೨೮. ರಾಜಶೇಖರ್ ಎಸ್., ಪೂರ್ವೋಕ್ತ, ಪು-೯೩

೨೯. ಅದೇ, ಪು. ೯೧

೩೦. ಅದೇ, ಪು. ೯೯

೩೧. ಅದೇ, ಪು. ೧೦೩

೩೨. ಅದೇ, ಪು. ೧೧೧-೧೧೨

೩೩. ಜ್ಞಾನಾನಂದ ಜಿ. ಪೂರ್ವೋಕ್ತ, ಪು. ೧೬೫

೩೪. ಕರ್ನಾಟಕದ ಸಾಂಸ್ಕೃತಿಕ ಇತಿಹಾಸ ಪರಂಪರೆ, ಪು. ೩೯-೪೦

೩೫. ರಾಜಶೇಖರ್ ಎಸ್., ಪೂರ್ವೋಕ್ತ, ಪು. ೧೨೫-೧೨೯.

೩೬. ಜ್ಞಾನಾನಂದ ಜಿ., ಪೂರ್ವೋಕ್ತ, ಪು. ೧೬೫

೩೭. ರಾಜಶೇಖರ್ ಎಸ್. ಪೂರ್ವೋಕ್ತ, ಪು. ೧೩೨.

೩೮. ಅದೇ, ಪು. ೧೩೩

೩೯. ಅದೇ, ಪು. ೧೩೪

೪೦. ಅದೇ, ಪು. ೧೪೦

೪೧. ಜ್ಞಾನಾನಂದ ಜಿ. ಪೂರ್ವೋಕ್ತ. ಪು. ೧೬೬.

೪೨. ರಾಜಶೇಖರ್ ಎಸ್., ಪೂರ್ವೋಕ್ತ, ಪು. ೧೫೧–೧೫೨

೪೩. ಅದೇ, ಪು. ೧೯೭

೪೪. ರಾಜಶೇಖರ್ ಎಸ್. ಪೂರ್ವೋಕ್ತ, ಪು. ೧೭೪.

೪೫. ಜ್ಞಾನಾನಂದ ಜಿ., ಪೂರ್ವೋಕ್ತ, ಪು. ೧೯೮

೪೬. ಅದೇ ಪು. ೧೯೮.

೪೭. ರಾಜಶೇಖರ್. ಎಸ್., ಪೂರ್ವೋಕ್ತ, ಪು. ೧೭೭.

೪೮. ಅದೇ, ಪು. ೧೭೬.

೪೯. ಅದೇ, ಪು. ೧೭೬.

ಅಧ್ಯಾಯ – ೪

ಮಧುಗಿರಿ ಪರಿಸರದ ದೇವಾಲಯಗಳು

ಅಧ್ಯಾಯ – ೪

ಮಧುಗಿರಿ ಪರಿಸರದ ದೇವಾಲಯಗಳು

ದೇವಾಲಯಗಳು ಚರಿತ್ರೆಯ ರಚನೆಗೆ ಸಹಾಯಕವಾಗಬಲ್ಲ ಬಹುಮುಖ್ಯ ಪುರಾತತ್ವೀಯ ಆಕರಗಳು. ಇವುಗಳ ಅಧ್ಯಯನದಿಂದ ಆಯಾ ಪರಿಸರದ ಮಾನವನ ಚರಿತ್ರೆ ಹಾಗೂ ಕಾಲದ ವಿಭಿನ್ನ ಸಂಸ್ಕೃತಿಯ ಪರಿಚಯ ನಮಗೆ ಆಗುತ್ತದೆ. ಜೊತೆಗೆ ಆಯಾ ದೇವಲಯಗಳ ಕಲೆ, ವಾಸ್ತುಶಿಲ್ಪ, ಮೂರ್ತಿಶಿಲ್ಪ ಅವುಗಳ ರಚನೆಯ ವಿಶಿಷ್ಟತೆ ಅಂದಿನ ವಾಸ್ತುಶಿಲ್ಪಗಳ ಕುಶಲತೆ, ಅವರ ಕಲಾಭಿರುಚಿ ಅದಕ್ಕೆ ನೀಡಿದ ಪ್ರಾಧಾನ್ಯತೆ ಮುಂತಾದ ಸಂಗತಿಗಳನ್ನು ದೇವಾಲಯಗಳ ಅಧ್ಯಯನದಿಂದ ತಿಳಿಯಬಹುದಾಗಿದೆ.

ಮಧುಗಿರಿ ಪರಿಸರವನ್ನು ಒಳಗೊಂಡಂತೆ ತುಮಕೂರು ಜಿಲ್ಲೆ ಅನೇಕ ಅರಸರ ಅಧೀನಕ್ಕೆ ಒಳಪಟ್ಟಿರುವ ಪ್ರದೇಶವಾಗಿದ್ದು, ಮಧುಗಿರಿ ಪರಿಸರದಲ್ಲಿ ಅನೇಕ ಅರಸರ ಹಾಗೂ ಪಾಳೆಯಗಾರರ ಕಾಲದ ಶಾಸನಗಳು. ದೇವಾಲಯಗಳು ಹಾಗೂ ಇತರೆ ಪ್ರಾಚ್ಯ ಅವಶೇಷಗಳನ್ನು ಕಾಣಬಹುದು. ಅವರ ಕಾಲದಲ್ಲಿ ಈ ಪರಿಸರದಲ್ಲಿ ಗ್ರಾನೈಟ್ ಶಿಲೆಯಿಂದಲೇ ದೇವಾಲಯಗಳನ್ನು ನಿರ್ಮಿಸಿದ್ದಾರೆ. ಕೆಲವು ದೇವಾಲಯಗಳನ್ನು ಜೀರ್ಣೋದ್ದಾರಗೊಳಿಸಿದ್ದಾರೆ. ಮಧುಗಿರಿ ಪರಿಸರದ ಬಹುಭಾಗಗಳಲ್ಲಿ ವಿಜಯನಗರೋತ್ತರ ಶೈಲಿಯ ಹಲವು ದೇವಾಲಯಗಳನ್ನು ಕಾಣಬಹುದು. ಮಧುಗಿರಿ ಪರಿಸರದಲ್ಲಿ ಕ್ಷೇತ್ರಕಾರ್ಯದಲ್ಲಿ ಕಂಡು ಬಂದ ಪ್ರಾಚೀನ ದೇವಾಲಯಗಳನ್ನು ಧಾರ್ಮಿಕ ದೃಷ್ಟಿಕೋನದಿಂದ ಶೈವದೇವಾಲಯಗಳು, ವೈಷ್ಣವ ದೇವಾಲಯಗಳು, ಶಾಕ್ತದೇವಾಲಯಗಳು ಹಾಗೂ ಇತರೆ ಪಂಥದ ದೇವಾಲಯಗಳು ಎಂದು ವರ್ಗೀಕರಿಸಿಕೊಂಡು ಈ ಕೆಳಗಿನಂತೆ ದೇವಾಲಯಗಳಿಗೆ ಸಂಬಂಧಿಸಿದಂತೆ ಹಲವು ವಿಷಯಗಳನ್ನು ವಿವರಿಸಲು ಪ್ರಯತ್ನಿಸಲಾಗಿದೆ.

[illegible]

[illegible]

[illegible]

[illegible]

೪.೧. ಶೈವ ದೇವಾಲಯಗಳು

ಸಂಖ್ಯೆ : ೧

ಹೆಸರು : ವೀರಭದ್ರೇಶ್ವರ ದೇವಾಲಯ

ಸ್ಥಳ : ಕೋಟೆಯ ಪಕ್ಕದಲ್ಲಿ

ಗ್ರಾಮ : ಸಿದ್ಧಾಪುರ

ಕಾಲಮಾನ : ಸು.ಕ್ರಿ.ಶ.೧೫–೧೬ನೇ ಶತಮಾನ

ವೀರಭದ್ರೇಶ್ವರ ದೇವಾಲಯವು ಮಧುಗಿರಿಯಿಂದ ಶಿರಾಕ್ಕೆ ಹೋಗುವ ಅಡ್ಡ ಮಾರ್ಗದಲ್ಲಿ ೧ ಕಿ.ಮೀಟರ್ ದೂರದಲ್ಲಿ ಸಿದ್ಧಾಪುರ ಗ್ರಾಮದಲ್ಲಿ ಈ ದೇವಾಲಯವಿದೆ. ಇಲ್ಲಿನ ವೀರಭದ್ರೇಶ್ವರ ದೇವಾಲಯವು ಪ್ರಾಮುಖ್ಯತೆಯನ್ನು ಪಡೆದ ದೇವಾಲಯವಾಗಿದೆ. ಉತ್ತರಾಭಿಮುಖವಾಗಿರುವ ದೇವಾಲಯವು ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಮತ್ತು ನವರಂಗವನ್ನು ಹೊಂದಿದೆ. ಈ ದೇವಾಲಯದಲ್ಲಿ ಅಂತರಾಳಕ್ಕೆ ಹೊಂದಿಕೊಂಡತೆ ಮತ್ತೊಂದು ಗರ್ಭಗೃಹ ಕಾಣಬಹುದು. ಈ ಗರ್ಭಗೃಹದಲ್ಲಿ ಭದ್ರಕಾಳಮ್ಮ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಚೌಕಾಕಾರದ ಗರ್ಭಗೃಹದ ಮಧ್ಯದಲ್ಲಿ ಪೀಠದ ಮೇಲೆ ವೀರಭದ್ರ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಸಾಧಾರಣವಾದ ಬಾಗಿಲುವಾಡವನ್ನು ಹೊಂದಿದೆ. ನವರಂಗದಲ್ಲಿ ನಾಲ್ಕು ಪೂರ್ಣ ಕಂಬಗಳನ್ನು ಹೊಂದಿದ್ದು, ಕಂಬದಲ್ಲಿ ಚೌಕಾಕಾರದ ಪಾದ, ಪೀಠ, ವೃತ್ತ, ಬಹುಮುಖ ದಿಂಡು, ಬೋಧಿಗೆಗಳನ್ನು ಒಳಗೊಂಡಿವೆ. ಬಾಗಿಲುವಾಡದಲ್ಲಿ ಶೈವ ದ್ವಾರಪಾಲಕರು ತ್ರಿಶೂಲ ಮತ್ತು ಢಮರುಗಳನ್ನು ಹೊಂದಿದ್ದಾರೆ. ನವರಂಗದ ಮೇಲ್ಚಾವಣೆಯಲ್ಲಿ ಭುವನೇಶ್ವರದಿಂದ ಅಲಂಕೃತಗೊಂಡ ಉಬ್ಬಿದ ಪದ್ಮದಿಂದ ಕೂಡಿದೆ. ಸುತ್ತಲೂ ನಾಲ್ಕು ಪದ್ಮಗಳನ್ನು ಕಾಣುತ್ತೇವೆ. ದೇವಾಲಯ ಪ್ರವೇಶದ್ವಾರದಲ್ಲಿ ನಾಲ್ಕು ಕಂಬಗಳ ಮೇಲೆ ವ್ಯಾಳಿಗಳ ಕೆತ್ತನೆಯಿದೆ. ಇಡೀ ದೇವಾಲಯವು ಅಧಿಷ್ಠಾನದ ಮೇಲೆ ನಿರ್ಮಾಣವಾಗಿದ್ದು ಅಧಿಷ್ಠಾನದಲ್ಲಿ ವಿವಿಧ ಪಟ್ಟಿಕೆಗಳನ್ನು ಕಾಣಬಹುದು. ದೇವಾಲಯದ ಶಿಖರವು ದ್ರಾವಿಡ ಶೈಲಿಯಲ್ಲಿದೆ. ಈ ದೇವಾಲಯವು ಗ್ರಾನೈಟ್ ಶಿಲೆಯಿಂದ ನಿರ್ಮಿಸಿದ್ದಾರೆ.

'ಸಿದ್ಧಾಪುರ ಗ್ರಾಮದ (E.C.XII ಮಧುಗಿರಿ–೨೧) ಶಾಸನದಲ್ಲಿ ವಿಜಯನಗರ ರಾಜಮನೆತನವಾದ ಅರವೀಡು ರಾಜಮನೆತನದ ವೆಂಕಟಾಪತಿ ಮಹಾರಾಯರ ಆಳ್ವಿಕೆಯನ್ನು ಪ್ರಸ್ತಾಪಿಸುತ್ತ, ಮಹಾನಾಡ ಪ್ರಭುಬಿಜಾವರದ ಚಿಕ್ಕಪ್ಪಗೌಡನ ಮಗನ ಕಾಲದಲ್ಲಿ ಕಟ್ಟಿದ ವೀರಭದ್ರ ದೇವಾಲಯ' ಎಂದು ಪ್ರಸ್ತಾಪವಿದೆ.

ಸಂಖ್ಯೆ : ೨

ಹೆಸರು : ಬಸವೇಶ್ವರ ದೇವಾಲಯ

ಸ್ಥಳ : ಗ್ರಾಮದ ಮಧ್ಯೆ

ಗ್ರಾಮ : ಸಿದ್ಧಾಪುರ

ಕಾಲಮಾನ : ಸು. ಕ್ರಿ.ಶ. ೧೫-೧೬ನೇ ಶತಮಾನ

ಮಧುಗಿರಿಯಿಂದ ಎರಡು ಕಿಲೋಮೀಟರ್ ದೂರದಲ್ಲಿರುವ ಸಿದ್ಧಾಪುರ ಗ್ರಾಮದಲ್ಲಿ ಬಸವೇಶ್ವರ ದೇವಾಲಯವಿದೆ. ಇಲ್ಲಿನ ಪ್ರಾಚೀನ ದೇವಾಲಯವು ಬಸವೇಶ್ವರ ದೇವಾಲಯವಾಗಿದೆ. ದೇವಾಲಯವು ಪೂರ್ವಾಭಿಮುಖವಾಗಿದೆ. ದೇವಾಲಯದ ತಳವಿನ್ಯಾಸದಲ್ಲಿ ಗರ್ಭಗೃಹ, ತೇರೆದ ಮಂಟಪವಿದೆ. ಚೌಕಾಕಾರದ ಗರ್ಭಗೃಹದ ಮಧ್ಯದಲ್ಲಿ ಪೀಠದ ಮೇಲೆ ಸು.೪ ಅಡಿ ಎತ್ತರದ ಬಸವಣ್ಣ ಮೂರ್ತಿಶಿಲ್ಪ ಇರುವುದು. ತೆರೆದ ಮಂಟಪದಲ್ಲಿ ಸಾಧಾರಣವಾದ ಕಂಬಗಳು ಎರಡು ಕಾಣಬಹುದು. ಈ ದೇವಾಲಯ ಮುಂದೆ ಶಾಸನವಿದೆ. ೧೫೧೫ರಲ್ಲಿ ನಿರ್ಮಾಣದ ಕಾಲಮಾನ ತಿಳಿಸಲಾಗಿದೆ.[೨]

ಸಂಖ್ಯೆ : ೩

ಹೆಸರು : ಗಣಪತಿ ದೇವಾಲಯ

ಸ್ಥಳ : ಗ್ರಾಮದ ಮಧ್ಯದಲ್ಲಿದೆ.

ಗ್ರಾಮ : ಸಿದ್ಧಾಪುರ

ಕಾಲಮಾನ : ಸು ೧೫-೧೬ನೇ ಶತಮಾನ

ಗಣಪತಿ ದೇವಾಲಯವು ಮಧುಗಿರಯಿಂದ ಶಿರಾಕ್ಕೆ ಹೋಗುವ ಅಡ್ಡ ಮಾರ್ಗದಲ್ಲಿ ೧ ಕೀ.ಮೀ. ದೂರದಲ್ಲಿ ಈ ದೇವಾಲಯ. ಸಿದ್ಧಾಪುರ ಗ್ರಾಮದ ಮಧ್ಯದಲ್ಲಿದೆ. ಉತ್ತಾರಾಭಿಮುಖವಾಗಿರುವ ದೇವಾಲಯವು ತಳವಿನ್ಯಾಸದಲ್ಲಿ ಗರ್ಭಗೃಹ ಮತ್ತು ಮಂಟಪವನ್ನು ಮಾತ್ರ ಹೊಂದಿದೆ. ಚೌಕಾಕಾರದ ಗರ್ಭಗೃಹದ ಮಧ್ಯದಲ್ಲಿ ಪೀಠದ ಮೇಲೆ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ೨ ಅಡಿ ಎತ್ತರವಿದೆ. ದ್ವಾರಬಾಗಿಲಲ್ಲಿ ಶೈವದ್ವಾರಪಾಲಕರು ತ್ರಿಶೂಲ ಮತ್ತು ಢಮರುಗಳನ್ನು ಹೊಂದಿದ್ದಾರೆ. ಈ ದೇವಾಲಯ ಬಗ್ಗೆ ಶಾಸನದಲ್ಲಿರುವಂತೆ ವಿಜಯನಗರ ರಾಜಮನೆತನವಾದ ಅರವೀಡು ವಂಶದ ವೆಂಕಟಪತಿ ಮಹಾರಾಯರ ಆಳ್ವಿಕೆಯಲ್ಲಿ ಪ್ರಸ್ತಾಪಿಸುತ್ತ ಮಹಾನಾಡ ಪ್ರಭು ಬಿಜಾವರ ಚಿಕ್ಕಪ್ಪಗೌಡ ಮಗನ ಕಾಲದಲ್ಲಿ ಗಣೇಶ ದೇವಾಲಯ ಕಟ್ಟಿಸಿದ ಎಂದು ಪ್ರಸ್ತಾಪವಿದೆ.

ಸಂಖ್ಯೆ : ೪

ಹೆಸರು : ಚೋಳೇಶ್ವರ ದೇವಾಲಯ

ಸ್ಥಳ : ಸಿದ್ಧಾಪುರದಿಂದ ಕೆರೆಯಪಕ್ಕದಲ್ಲಿದೆ.

ಗ್ರಾಮ : ಸಿದ್ಧಾಪುರ

ಕಾಲಮಾನ : ಸು. ಕ್ರಿ.ಶ.೧೬ನೇ ಶತಮಾನ

ಮಧುಗಿರಿಯಿಂದ ೫ ಕಿ.ಮೀಟರ್ ದೂರದಲ್ಲಿವ ಚೋಳೇಶ್ವರ ದೇವಾಲಯವು ಪ್ರಮುಖವಾಗಿದೆ. ಈ ದೇವಾಲಯವು ಪೂರ್ವಭಿಮುಖವಾಗಿದೆ. ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ, ತೆರೆದ ಮುಖಮಂಟಪವನ್ನು ಹೊಂದಿದೆ. ಗ್ರಾನೈಟ್ ಶಿಲೆಯಿಂದ ಈ ದೇವಾಲಯ ನಿರ್ಮಿಸಿದ್ದಾರೆ. ಚೌಕಾಕಾರದ ಗರ್ಭಗೃಹದ ಮಧ್ಯ ಮೂರು ಶಿವಲಿಂಗಗಳನ್ನು ಪ್ರತಿಷ್ಠಾಪಿಸಲಾಗಿದೆ. ಸಾಧಾರಣವಾದ ಬಾಗಿಲುವಾಡವನ್ನು ಹೊಂದಿದೆ. ನವರಂಗದಲ್ಲಿ ನಾಲ್ಕು ಕಂಬಗಳನ್ನು ಕಾಣಬಹುದು. ಕಂಬಗಳು ಪೀಠ, ಕಾಂಡದ ಚೌಕಾಕಾರದ ಭಾಗ, ಸದಾ ಬೋಧಿಗೆಗಳು ಇವೆ.

ಮುಖಮಂಟಪದಲ್ಲಿ ೪ ಪೂರ್ಣ ಕಂಬಗಳು, ೧೨ ಅರೆಗಂಬಗಳನ್ನು ಕಾಣುತ್ತೇವೆ. ದೇವಾಲಯದ ಮುಂದೆ ಸು. ೧೦ ಅಡಿ ಎತ್ತರದ ದೀಪಸ್ತಂಭವಿದೆ. ದ್ರಾವಿಡ ಶೈಲಿಯ ಶಿಖರವು ಸುಸ್ಥಿತಿಯಲ್ಲಿದೆ. ಶಿಖರದಲ್ಲಿ ವಿವಿಧ ರೀತಿಯ, ಶಿಲ್ಪಗಳನ್ನು ಕಾಣಬಹುದು ಈ ದೇವಾಲಯದ ಸುತ್ತಲೂ ಪ್ರಕಾರ ಗೋಡೆಯನ್ನು ಹೊಂದಿದೆ. ವಿಜಯನಗರ ವಾಸ್ತುಶೈಲಿಯನ್ನು ಈ ದೇವಾಲಯದಲ್ಲಿ ಕಾಣಬಹುದು.

ಸಂಖ್ಯೆ : ೫

ಹೆಸರು : ನಂಜುಡೇಶ್ವರ ದೇವಾಲಯ

ಸ್ಥಳ : ರಸ್ತೆಯ ಪಕ್ಕದಲ್ಲಿ

ಗ್ರಾಮ : ಸಿದ್ಧಾಪುರ ಗೇಟ್

ಕಾಲಮಾನ : ಸು. ೧೬-೧೭ನೇ ಶತಮಾನ

ಮಧುಗಿರಿಯಿಂದ ಶಿರಾಕ್ಕೆ ಹೋಗುವ ಮಾರ್ಗದಲ್ಲಿ ನಂಜುಡೇಶ್ವರ ದೇವಾಲಯವಿದೆ. ಮಧುಗಿರಿಯಿಂದ ೨ ಕಿಮೀಟರ್ ದೂರದಲ್ಲಿದೆ. ಈ ದೇವಾಲಯವು ಉತ್ತರಾಭಿಮುಖವಾಗಿದೆ. ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಮತ್ತು ತೆರೆದ ಮುಖ ಮಂಟಪವನ್ನು ಹೊಂದಿದೆ. ಚೌಕಾಕಾರದ ಗರ್ಭಗೃಹದ ಪೀಠದ ಮೇಲೆ ೪ ಅಡಿ ಎತ್ತರದ ಸುಂದರ ಕಪ್ಪು ಶಿಲೆಯಲ್ಲಿ ಕೆತ್ತಿಸಲಾಗಿದೆ. ತೆರದ ಮಂಟಪದಲ್ಲಿ ೨ ಅಡಿ ಎತ್ತರದ ನಂದಿಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಸುತ್ತಲೂ ಪ್ರಕಾರ ಗೋಡೆಯನ್ನು ಹೊಂದಿದೆ.

ಈ ದೇವಾಲಯದಲ್ಲಿ ಶಿವನ ಆರಾಧಕಳಾಗಿದ್ದ ಶಿವಶರಣೆ ಗುರುನಂಜಮ್ಮನ ಗದ್ದುಗೆ ಇದೆ. ಈ ದೇವಾಲಯದ ಪಕ್ಕದಲ್ಲಿಯೇ ಇದೆ. ಈ ದೇವಾಲಯ ಕಲ್ಲಿನ ಕಟ್ಟಡವಾಗಿದೆ. ಮಹಾನಾಡ ಪ್ರಭುಗಳ ಕಾಲದಲ್ಲಿ ಕಟ್ಟಿದ ದೇವಾಲಯವಾಗಿದೆ.

ಸಂಖ್ಯೆ	: ೬
ಹೆಸರು	: ಮಲ್ಲೇಶ್ವರಸ್ವಾಮಿ ದೇವಾಲಯ
ಸ್ಥಳ	: ಪಟ್ಟಣದ ಮಧ್ಯದಲ್ಲಿದೆ.
ಗ್ರಾಮ	: ಮಧುಗಿರಿ ಪಟ್ಟಣ
ಕಾಲಮಾನ	: ಸು. ೧೬ನೇ ಶತಮಾನ

ಮಲ್ಲೇಶ್ವರ ದೇವಾಲಯವು ಮಧುಗಿರಿ ನಗರ (ಪಟ್ಟಣ)ದ ಮಧ್ಯದಲ್ಲಿದ್ದು, ಪೂರ್ವಾಭಿಮುಖವಾಗಿದೆ. ತಳ ವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ನವರಂಗ ಮತ್ತು ಮುಖಮಂಟಪಗಳನ್ನು ಒಳಗೊಂಡಿದೆ. ಚೌಕಾಕಾರವಾದ ಗರ್ಭಗೃಹದ ಮಧ್ಯದ ಪೀಠದ ಮೇಲೆ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಬಾಗಿಲುವಾಡದಲ್ಲಿ ಶಿವಲಿಂಗ ಶಿಲ್ಪವಿದೆ. ಶಿವಲಿಂಗಕ್ಕೆ ಗಜ(ಆನೆಗಳು)ಗಳು ಹಾರ ಹಾಕುತ್ತಿರುವ ಶಿಲ್ಪವಿದೆ. ಗರ್ಭಗೃಹದ ಬಾಗಿಲುವಾಡವು ಪಂಚಶಾಖೆಗಳಿಂದ ಅಲಂಕೃತಗೊಂಡಿದೆ. ಪದ್ಮಶಾಖೆ, ವಜ್ರಶಾಖೆ, ಲತಾಸುರಳಿ, ಬಳ್ಳಿಗಳು, ಅರ್ಧಕಂಬಗಳಿಂದ ಕೂಡಿದೆ. ಪಾದದಲ್ಲಿ ಶೈವದ್ವಾರ ಪಾಲಕರು ಇದ್ದು, ತ್ರಿಶೂಲ ಮತ್ತು ಡಮರುಗಳನ್ನು ಹೊಂದಿದ್ದಾರೆ. ತೆರೆದ ಅಂತರಾಳವಿದ್ದು ಅದರಲ್ಲಿ ಯಾವುದೇ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿಲ್ಲ. ನವರಂಗದಲ್ಲಿ ೪ ಪೂರ್ಣ ಕಂಬಗಳಿದ್ದು, ಕೆಂಪು ಮಿಶ್ರಿತ ಗ್ರಾನೈಟ್ ಶಿಲೆಯಲ್ಲಿವೆ. ನವರಂಗದ ಕಂಬಗಳಲ್ಲಿ ಚೌಕಾಕಾರದ ಪೀಠ, ಪಾದ, ಬಹುಮುಖದಿಂಡು, ಕಲಶ, ಫಲಕ, ಪುಷ್ಪ ಬೋಧಿಗೆಗಳು ಈ ಕಂಬಗಳಲ್ಲಿ ಒಳಗೊಂಡಿದೆ. ಉಬ್ಬು ಶಿಲ್ಪಗಳಾದ ಗಣೇಶ, ದುರ್ಗಿ, ಗಿಣಿಗಲು, ಋಷಿಮುನಿಗಳು, ಸ್ತ್ರೀ ಶಿಲ್ಪಗಳು ನವರಂಗದ ೪ ಕಂಬಗಳಲ್ಲೂ ವಿವಿಧ ಕೆತ್ತನೆಗಳಿಂದ ಕೂಡಿದ ಉಬ್ಬು ಶಿಲ್ಪಗಳನ್ನು ಕಾಣುತ್ತೇವೆ.

ನವರಂಗದಲ್ಲಿ ಮೂರು ಅಡಿ ಎತ್ತರವಿರುವ ನಂದಿಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ನವರಂಗದಲ್ಲಿ ಉತ್ತರ ಬಾಗಿಲು, ದಕ್ಷಿಣದ ಬಾಗಿಲುಗಳು ಇವೆ. ಪೂರ್ವಕ್ಕೆ ಪ್ರವೇಶದ್ವಾರವಿದೆ.

ಮುಖಮಂಟಪದಲ್ಲಿ ಆರು ಪೂರ್ಣಕಂಬಗಳನ್ನು ಕಾಣಬಹುದು. ಈ ಕಂಬಗಳು, ಸಾಧರಣವಾಗಿವೆ. ಮುಖಮಂಟಪದಲ್ಲಿ ದೇವಕೋಷ್ಟಕಗಳು ಇವೆ. ಈ ಕೋಷ್ಟಕಗಳಲ್ಲಿ ಗಣೇಶ ಮೂರ್ತಿ, ಸುಬ್ರಮಣ್ಯಂ ಮೂರ್ತಿಶಿಲ್ಪ, ಈಶ್ವರ ಮೂರ್ತಿಶಿಲ್ಪಗಳು ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ದ್ವಾರಬಾಗಿಲಲ್ಲಿ ಶೈವದ್ವಾರಪಾಲಕರು ತ್ರಿಶೂಲ ಮತ್ತು ಢಮರುಗಳನ್ನು ಹೊಂದಿದ್ದಾರೆ.

ದೇವಾಲಯದ ಮುಂದೆ ತೇರದ ಮಂಟಪವನ್ನು ಕಾಣಬಹುದು ೨೮ ಕಂಬಗಳನ್ನು ಕಾಣಬಹುದು. ಈ ದೇವಾಲಯದಲ್ಲಿ ಕಂಬಗಳು ಸಾಧರಣವಾಗಿ, ಪೀಠ, ಪಾದ, ಬಹುಮುಖ, ದಿಂಡು, ಚೌಕ ಮತ್ತು ಸರಳ ಬೋಧಿಗೆಗಳಿವೆ. ಈ ದೇವಾಲಯದ ಮುಂದೆ ೯ ಕಂಬಗಳನ್ನು ಹೊಂದಿದೆ. ಸಿಂಹಾಪಾದ, ವ್ಯಾಳಿಯನ್ನು ಕಾಣಬಹುದು. ದೇವಾಲಯದ ತೆರೆದ ಮಂಟಪದಲ್ಲಿ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಬಹಳ ಸುಂದರವಾಗಿದೆ. ಕಪ್ಪುಶಿಲೆಯಲ್ಲಿ ಕೆತ್ತಲಾಗಿದೆ. ಈ ನಂದಿ ೪೦ ಸೆಂ.ಮೀಟರ್ ಎತ್ತರವಾಗಿದೆ, ಉದ್ದ ೫೦ ಸೆಂ.ಮೀಟರ್ ಇದೆ. ಈ ದೇವಾಲಯವು ಗ್ರಾನೈಟ್ ಶಿಲೆಯಿಂದ ನಿರ್ಮಾಣಗೊಂಡಿದೆ. ದೇವಾಲಯ ಪ್ರದೇಶ ದ್ವಾರಬಾಗಿಲು ಬಹಳ ಎತ್ತರವಾಗಿದೆ. ದ್ವಾರ ಬಾಗಿಲು ಮೇಲೆ ಎತ್ತರವಾದ ಗೋಪುರವನ್ನು ಕಾಣಬಹುದು. ಗೋಪುರ ಜೀರ್ಣೋದ್ಧಾರ ಮಾಡಲಾಗಿದೆ. ಈ ದೇವಾಲಯದ ಪ್ರವೇಶ ದ್ವಾರಬಾಗಿಲು ಹಂಪಿಯ ವಿರೂಪಾಕ್ಷೇಶ್ವರ ದೇವಾಲಯದ ದ್ವಾರಬಾಗಿಲನ್ನು ಹೋಲುತ್ತದೆ. ಈ ದೇವಾಲಯದ ಮುಂದೆ ೨೦ ಅಡಿ ಎತ್ತರದ ದ್ವೀಪಸ್ತಂಭವನ್ನು ನಿಲ್ಲಿಸಲಾಗಿದೆ. ಈ ದ್ವೀಪಸ್ತಂಭದಲ್ಲಿ ನಂದಿ, ಗಣೇಶ, ಉಬ್ಬು ಶಿಲ್ಪಗಳು ಕಾಣಬಹುದು. ಈ ದೇವಾಲಯವು ವಿಜಯನಗರ ವಾಸ್ತು ಶೈಲಿನ ದೇವಾಲಯದಂತೆ ಇದೆ.

ಸಂಖ್ಯೆ	:	೭
ಹೆಸರು	:	ಬಸವಣ್ಣ ದೇವಾಲಯ
ಸ್ಥಳ	:	ನಗರದ ಮಧ್ಯೆ (ಅರಳೇಪೇಟೆ)
ಗ್ರಾಮ	:	ಮಧುಗಿರಿ ನಗರ
ಕಾಲಮಾನ	:	ಸು. ೧೭-೧೮ ನೇ ಶತಮಾನ

ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ಗರ್ಭಗೃಹ, ಅಂತರಾಳ, ತೆರೆದ ಮುಖಮಂಟಪವನ್ನು ಹೊಂದಿದೆ. ಚೌಕಾಕಾರದ ಗರ್ಭಗೃಹದ ಮಧ್ಯದಲ್ಲಿ ಪೀಠದ ಮೇಲೆ ನಂದಿ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಮುಖಮಂಟಪದಲ್ಲಿ ಮತ್ತೊಂದು ನಂದಿ ಶಿಲ್ಪವಿದೆ. ಬೇರೆ ಕಡೆಯಿಂದ ತಂದು ಈ ದೇವಾಲಯದಲ್ಲಿ ಇಡಲಾಗಿದೆ. ೪೩ ಸೆಂಟಿಮೀಟರ್ ಉದ್ದ, ೨೮ ಸೆಂಟಿಮೀಟರ್ ಎತ್ತರವಾಗಿದೆ. ಈ ದೇವಾಲಯದ ಮುಖಮಂಟಪದಲ್ಲಿ ಆರು ಸ್ವತಂತ್ರ್ಯ ಕಂಬಗಳನ್ನು ಹೊಂದಿದೆ. ಕಂಬಗಳು ಪೀಠ, ಪಾದ, ದಿಂಡು, ಚೌಕ ಸಾದಾಬೋದಿಗೆಗಳಿಂದ ಕೂಡಿದೆ. ಮುಖಮಂಟಪದ ಭಿತ್ತಿಯಲ್ಲಿ ೧೪ ಅರೆಗಂಭಗಳನ್ನು ಹೊಂದಿದೆ. ಇಡೀ ದೇವಾಲಯವು ಅಧಿಷ್ಠಾನದ ಮೇಲೆ ನಿರ್ಮಿತವಾಗಿದೆ. ಪಾಳೆಯಗಾರರ ಕಾಲದಲ್ಲಿ ಕಟ್ಟಿದ ದೇವಾಲಯವಾಗಿದೆ.

[illegible]

ಸಂಖ್ಯೆ : ೮

ಹೆಸರು : ಅಮ್ಮವೇಮಲೇಶ್ವರ ದೇವಾಲಯ

ಸ್ಥಳ : ತೋಟದ ಪಕ್ಕದಲ್ಲಿದೆ

ಗ್ರಾಮ : ಬಸವನಹಳ್ಳಿಯ ಪಕ್ಕದಲ್ಲಿದೆ.

ಕಾಲಮಾನ : ಸು. ೧೬ನೇ ಶತಮಾನ

ಅಮ್ಮವೇಮಲೇಶ್ವರ ದೇವಾಲಯ ಮಧುಗಿರಿಯಿಂದ ೩ಕಿ.ಮೀಟರ್ ದೂರದಲ್ಲಿದೆ. ಸಿದ್ಧಾಪುರದಿಂದ ೨ ಕಿ.ಮೀಟರ್ ದೂರದಲ್ಲಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿರುವ ದೇವಾಲಯವು ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ ಮತ್ತು ನವರಂಗ ಹೊಂದಿದೆ. ಚೌಕಾಕಾರದ ಗರ್ಭಗೃಹದಲ್ಲಿ ಶಿವಲಿಂಗವು ಪೀಠದ ಮೇಲೆ ೪೩ ಸೆಂಟಿಮೀಟರ್ ಉದ್ದ ಮತ್ತು ೫೩ ಸೆಂಟಿಮೀಟರ್ ಅಗಲವಿದೆ. ಕಪ್ಪು ಶಿಲೆಯಲ್ಲಿ ಕೆತ್ತಲಾಗಿದೆ. ಶಿವಲಿಂಗವನ್ನು ಅಂತರಾಳದಲ್ಲಿ ಗಣೇಶ, ಭದ್ರಕಾಳಿ ಮೂರ್ತಿಶಿಲ್ಪಗಳು ಕಾಣಬಹುದು. ಅಂತರಾಳದಲ್ಲಿ ಸಪ್ತಮಾತೃಕೆಯವರು ಒಂದೇ ಕಲ್ಲಿನಲ್ಲಿ ಇರುವುದು ಕಾಣಬಹುದು.

ನವರಂಗದಲ್ಲಿ ಸ್ವತಂತ್ರವಾದ ನಾಲ್ಕು ಕಂಬಗಳನ್ನು ಹೊಂದಿದ್ದು, ಪೀಠ ಚೌಕಾಕಾರದ ಪಾದ, ಬಹುಮುಖದಿಂಡು, ಕಲಶ, ಘಟ, ಮಂಡಿ, ಫಲಕ, ಬೋಧಿಗೆಗಳನ್ನು ಒಳಗೊಂಡಿದೆ. ಈ ಕಂಬಗಳು ಕಪ್ಪು ಶಿಲೆಯಿಂದ ಕೂಡಿದೆ. ದೇವಾಲಯದ ಎದುರುಜಡೆ ಅಮ್ಮವೇ ಶಿಲ್ಪವನ್ನು ಕಾಣಬಹುದು ದೇವಾಲಯದ ಎದುರುಗಡೆ ನಂದಿಶಿಲ್ಪವಿದೆ, ೨೩ ಸೆಂಟಿಮೀಟರ್ ಉದ್ದ ಮತ್ತು ೧೨ ಸೆಂಟಿಮೀಟರ್ ಎತ್ತರ ಇದೆ. ದೇವಾಲಯದ ಎದುರುಗಡೆ ದೀಪಸ್ತಂಭವನ್ನು ನಿಲ್ಲಿಸಲಗಿದೆ. ಸುತ್ತಲೂ ಪ್ರಕಾರ ಗೋಡೆಯನ್ನು ಹೊಂದಿದೆ. ಶಿಖರವು ದ್ರಾವಿಡ ಶೈಲಿಯಲ್ಲಿದೆ. ಈ ದೇವಾಲಯವು ಮಹಾನಾಡ ಪ್ರಭು ಕಾಲದಲ್ಲಿ ಕಟ್ಟಿದ ದೇವಾಲಯವಾಗಿದೆ ಎಂದು ತಿಳಿಯಬಹುದು. ಅವರ ಕಾಲದ ವಾಸ್ತು ಶೈಲಿಯನ್ನು ಹೊಂದಿದೆ.

ಸಂಖ್ಯೆ : ೯

ಹೆಸರು : ಹರಿಹರೇಶ್ವರ ದೇವಾಲಯ

ಸ್ಥಳ : ಬೆಟ್ಟದ ಪಕ್ಕದಲ್ಲಿದೆ

ಗ್ರಾಮ : ಹರಿಹರರೊಪ್ಪ

ಕಾಲಮಾನ : ಸು. ೧೬ನೇ ಶತಮಾನ

ಈ ದೇವಾಲಯವು ಹರಿಹರರೊಪ್ಪದ ಬೆಟ್ಟದ ಪಕ್ಕದಲ್ಲಿ ಇದೆ. ಉತ್ತರಾಭಿಮುಖವಾಗಿದ್ದು, ತಳವಿನ್ಯಾಸದಲ್ಲಿ ಗರ್ಭಗೃಹ, ತೆರೆದ ಅಂತರಾಳ, ರಂಗಮಂಟಪ, ನವರಂಗಗಳನ್ನು ಒಳಗೊಂಡಿದೆ.

ಚೌಕಾಕಾರದ ಗರ್ಭಗೃಹದಲ್ಲಿ ಪೀಠದ ಮೇಲೆ ಹರಿಹರೇಶ್ವರ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ರಂಗಮಂಟಪದಲ್ಲಿ ೪ ಪೂರ್ಣ ಕಂಬಗಳಿದ್ದು, ಕಂಬಗಳಲ್ಲಿ ಪಾದ, ಪೀಠ, ಅಷ್ಟ ಮುಖದಿಂಡು, ಚೌಕದಿಂಡು, ಬೋಧಿಗೆಗಳನ್ನು ಒಳಗೊಂಡಿದೆ. ಬಿತ್ತಿಯಲ್ಲಿ ೧೨ ಅರೆಗಂಭಗಳನ್ನು ಹೊಂದಿದೆ. ರಂಗಮಂಟಪದಲ್ಲಿ ಬಾಗಿಲುವಾಡವು ಸಾಧಾರಣವಾದ ನಾಲ್ಕು ಪಟ್ಟಿಕೆಗಳು ಒಳಗೊಂಡಿದೆ. ನವರಂಗದಲ್ಲಿ ೪ ಕಂಬಗಳಿದ್ದು, ಕಂಭಗಳಲ್ಲಿ ಪೀಠ, ಚೌಕ, ಬೋಧಿಗಳಿಂದ ಕೂಡಿದೆ. ನವರಂಗದ ಮಧ್ಯ ನಂದಿಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಸು.೫ ಅಡಿ ಎತ್ತರವಾಗಿದೆ. ಕಪ್ಪು ಶಿಲೆಯಲ್ಲಿ ಕೆತ್ತಲಾಗಿದೆ. ನವರಂಗದಲ್ಲಿ ೪ ಸ್ವತಂತ್ರ ಕಂಬಗಳಿದ್ದು, ಸಾಧಾರಣಾವಾಗಿ ಕಂಬಗಳು ಇವೆ ನವರಂಗದ ಕಂಬಗಳ ರಚನೆಯು ಪೀಠ, ಕಾಂಡದ ಚೌಕಾಕಾರವಾದ ಭಾಗ, ಸಾದಾ ಬೋಧಿಗೆಗಳು ಇವೆ. ಮುಖ ಮಂಟಪವನ್ನು ಹೊಂದಿದೆ ಬಾಗಿಲು ಪಕ್ಕದಲ್ಲಿ ಶೈವ ದ್ವಾರಪಾಲಕರು ಇದ್ದು, ತ್ರಿಶೂಲ ಮತ್ತು ಡಮರುಗಳನ್ನು ಹೊಂದಿದ್ದಾರೆ. ಮುಖ ಮಂಟಪದ ಭಿತ್ತಿಯಲ್ಲಿ ೧೪ ಅರೆಗಂಭಗಳನ್ನು ಹೊಂದೆ. ದೇವಾಲಯದ ಸುತ್ತಲು ವಿಶಾಲವಾಧ ಪ್ರಗಣವಿದೆ. ಸುತ್ತಲು ಪಾಕರ ಗೋಡೆಯನ್ನು ಹೊಂದಿದೆ. ದೇವಾಲಯದ ಶಿಖರವು ಕದಂಬ ನಗರ ಶೈಲಿಯಿಂದ ಕೂಡಿದ್ದು, ಮೇಲೆ ಕಳಸವನ್ನು ಹೊಂದಿದೆ. ದೇವಾಲಯವು ಉಪಾನ, ಜಗತಿ, ಕುಮುದ, ಪದ್ಮಗಳಿಂದ ಕೂಡಿದೆ. ದೇವಾಲಯದ ಗೋಪುರವು ದ್ರಾವಿಡ ಶೈಲಿಯನ್ನು ಹೊಂದಿದ್ದು, ಕಾಲಶಿಖರವನ್ನು ಹೊಂದಿದೆ. ಗೋಪುರವು ಪಂಚ ಕಳಸಗಳಿಂದ ಕೂಡಿದೆ. ಇಡೀ ದೇವಾಲಯವು ಅರ್ದಿಷ್ಟಾನದ ಮೇಲೆ ನಿರ್ಮಿಸಲಾಗಿದೆ. ಪ್ರಾಚೀನವಾದ ದೇವಾಲಯವಾಗಿದ್ದು, ಪ್ರಾಮುಖ್ಯತೆಯನ್ನು ಪಡೆದ ದೇವಾಲಯವಾಗಿದೆ. ಈ ಹರಿಹರೇಶ್ವರ ದೇವಾಲಯವು ಹೊಯ್ಸಳ ವಾಸ್ತುಶೈಲಿಯನ್ನು ಹೊಂದಿದ್ದು ಗರ್ಭಗಹದಲ್ಲಿ ಮೂರ್ತಿಶಿಲ್ಪ ಸೂಕ್ಷ್ಮ ಕೆತ್ತನೆಯಿಂದ ಇದೆ ಎಂದು ಹೇಳಬಹುದು.

ಸಂಖ್ಯೆ	:	೧೦
ಹೆಸರು	:	ಕಾಶಿವಿಶ್ವನಾಥ ದೇವಾಲಯ
ಸ್ಥಳ	:	ಗ್ರಾಮದ ಪಕ್ಕ
ಗ್ರಾಮ	:	ಬಿಜ್ಜಾವರ
ಕಾಲಮಾನ	:	ಸು. ೧೬ನೇ ಶತಮಾನ

ಮಧುಗಿರಿಯಿಂದ ೩ಕಿ.ಮೀಟರ್ ದೂರದಲ್ಲಿ ಬಿಜ್ಜಾವರ ಗ್ರಾಮದಲ್ಲಿ ಕಾಶಿವಿಶ್ವನಾಥ ದೇವಾಲಯವಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ತಳವಿನ್ಯಾಸದಲ್ಲಿ ಚೌಕಾಕಾರದ ಗರ್ಭಗೃಹ, ತೆರೆದ ಅಂತರಾಳ ಮತ್ತು ಮುಖಮಂಟಪವನ್ನು ಒಳಗೊಂಡಿದೆ. ಗರ್ಭಗೃಹದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದ್ದು, ಅಂತರಾಳದಲ್ಲಿ ಗಣೇಶ ಮತ್ತು ಪಾರ್ವತಿ ದೇವಿಯ

ಮೂರ್ತಿಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ. ಲಲಾಟದಲ್ಲಿ ಗಣೇಶ ಮೂರ್ತಿಯಿದ್ದು, ದ್ವಾರ ಶಾಖೆಗಳು ಸರಳವಾಗಿವೆ. ಅಂತರಾಳದಲ್ಲಿ ಸು. ೨ಅಡಿ ಎತ್ತರದ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ಬಾಗಿಲು ಪಕ್ಕದಲ್ಲಿ ಶೈವದ್ವಾರಪಾಲಕರಿದ್ದು ತ್ರಿಶೂಲ, ಡಮರುಗಳನ್ನು ಹೊಂದಿದ್ದಾರೆ. ಮುಖಮಂಟಪದಲ್ಲಿ ಎರಡು ಸ್ವತಂತ್ರ ಕಂಬಗಳಿದ್ದು, ಕಂಭಗಳ ಮೇಲೆ ವಿವಿಧ ಅಲಂಕಾರಗಳುಳ್ಳ ಉಬ್ಬು ಶಿಲ್ಪಗಳನ್ನು ಖಂಡರಿಸಲಾಗಿದೆ ಹಾಗೂ ಎರಡು ಅರೆಗಂಬಗಳನ್ನು ಸಹ ನೋಡಬಹುದು. ದೇವಾಲಯದ ಎದುರಿಗೆ ಪೀಠದ ಮೇಲೆ ನಂದಿಯನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಮುಂದೆ ಕಲ್ಯಾಣಿಯನ್ನು ನಿರ್ಮಿಸಿದ್ದಾರೆ. ದೇವಾಲಯವು ಕಂಭದ ಮಾದರಿಯ ಶಿಖರವನ್ನು ಹೊಂದಿದ್ದು ಮಧ್ಯದಲ್ಲಿ ಕಳಶವನ್ನು ಹೊಂದಿದೆ. ಪ್ರಸ್ತುತ ದೇವಾಲಯವು ಗಣಪತಿ ದೇವಾಲಯವಾಗಿದ್ದು, ನಂತರದಲ್ಲಿ ಶಿವಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ. ಸಂಪೂರ್ಣ ದೇವಾಲಯವು ಅಧಿಷ್ಠಾನದ ಮೇಲೆ ನಿರ್ಮಿತವಾಗಿದೆ. ಬಿಜ್ಜಾವರ ಮಹಾನಾಡಪ್ರಭು ಚಿಕ್ಕಪ್ಪ ಗೌಡರು ಆಳ್ವಿಕೆ ನಡೆಸಿದ ಪ್ರದೇಶವಾಗಿದೆ.

ಸಂಖ್ಯೆ : ೧೧

ಹೆಸರು : ವೀರಭದ್ರಸ್ವಾಮಿ ದೇವಾಲಯ

ಸ್ಥಳ : ಗ್ರಾಮದ ಪಕ್ಕದಲ್ಲಿದೆ

ಗ್ರಾಮ : ಬಿಜ್ಜಾವರ

ಕಾಲಮಾನ : ಸು. ೧೬-೧೭ನೇ ಶತಮಾನ

ಮಧುಗಿರಿಯಿಂದ ೩ಕಿ.ಮೀಟರ್ ದೂರದಲ್ಲಿ ಬಿಜ್ಜಾವರ ಗ್ರಾಮದಲ್ಲಿ ವೀರಭದ್ರಸ್ವಾಮಿ ದೇವಾಲಯವಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಮುಖಮಂಟಪವನ್ನು ಹೊಂದಿದೆ. ಚೌಕಾಕಾರದ ಗರ್ಭಗೃಹದಲ್ಲಿ ಪೀಠದ ಮೇಲೆ ವೀರಭದ್ರ ಮೂರ್ತಿಯನ್ನು ಪ್ರತಿಷ್ಟಪಿಸಲಾಗಿದೆ. ಅಂತರಾಳದಲ್ಲಿ ೪ ಕಂಭಗಳಿದ್ದು, ಆ ಕಂಭಗಳು ಪೀಠ, ಚೌಕ, ಬಹುಮುಖ ದಿಂಡು, ಬೋಧಿಗೆಗಳನ್ನು ಒಳಗೊಂಡಿದೆ. ಮುಖಮಂಟಪದಲ್ಲಿ ಬಾಗಿಲುವಾಡವು ಸಾಧಾರಣ ಶಾಖೆಗಳಿಂದ ಕೂಡಿದೆ. ಎರಡು ಸ್ವಾತಂತ್ರ ಕಂಭಗಳಿದ್ದು, ಈ ಕಂಭಗಳು ಸಾಧಾರಣವಾಗಿವೆ. ಹಾಗೂ ಭಿತ್ತಿಯಲ್ಲಿ ೧೦ ಅರೆಗಂಬಗಳನ್ನು ಹೊಂದಿದೆ. ಈ ದೇವಾಲಯವು ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದೆ. ಸುತ್ತಲು ಪ್ರಾಕಾರ ಗೋಡೆಯನ್ನು ಹೊಂದಿದೆ. ಗೋಪುರವು ಶಿಥಿಲವಾಗಿರುವುದನ್ನು ನೋಡಬಹುದು.ಈ ದೇವಾಲಯ ಮಹಾನಾಡ ಪ್ರಭುಗಳ ಕಾಲದ ವಾಸ್ತುಶೈಲಿಯನ್ನು ಹೊಂದಿದ್ದು, ಕ್ರಿ.ಶ. ೧೬-೧೭ನೇ ಶತಮಾನಗಳ ಕಾಲದ ವಾಸ್ತುಶಿಲ್ಪ ವೈವಿಧ್ಯಮಯವೂ ಸರಳ ಅಂಶಗಳನ್ನು ಹೊಂದಿದೆ.

೪.೨ ವೈಷ್ಣವ ದೇವಾಲಯಗಳು

ಸಂಖ್ಯೆ : ೧

ಹೆಸರು : ವೆಂಕಟರಮಣಸ್ವಾಮಿ ದೇವಾಲಯ

ಸ್ಥಳ : ಪಟ್ಟಣದ ಮಧ್ಯೆ

ಗ್ರಾಮ : ಮಧುಗಿರಿ ಪಟ್ಟಣ

ಕಾಲಮಾನ : ಕ್ರಿ.ಶ. ಸುಮಾರು ೧೬-೧೭ನೇ ಶತಮಾನ

ಮಧುಗಿರಿ ಪಟ್ಟಣದ ಮಧ್ಯೆ ವೆಂಕಟರಮಣಸ್ವಾಮಿ ದೇವಾಲಯವಿದೆ. ಪೂರ್ವಾಭಿಮುಖವಾಗಿದ್ದು, ತಳವಿನ್ಯಾಸದಲ್ಲಿ ಗರ್ಭಗೃಹ, ತೆರೆದ ಅಂತರಾಳ, ನವರಂಗ ಮುಖಮಂಟಪವನ್ನು ಒಳಗೊಂಡಿದೆ. ಚೌಕಾಕಾರದ ಗರ್ಭಗೃಹದಲ್ಲಿ ವೆಂಕಟರಮಣ ಮೂರ್ತಿಯನ್ನು ಮಧ್ಯದಲ್ಲಿ ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ಪ್ರಮುಖ್ಯತೆಯನ್ನು ಪಡೆದ ದೇವಾಲಯವಾಗಿದೆ. ಗರ್ಭಗೃಹದ ಮೂರ್ತಿಯು ಸು. ೬ ಅಡಿ ಎತ್ತರವಿದೆ. ವಿಗ್ರಹ ಮೂರ್ತಿಯನ್ನು ಕಪ್ಪು ಶಿಲೆಯಲ್ಲಿ ಕೆತ್ತಲಾಗಿದೆ. ಅಂತರಾಳದಲ್ಲಿ ಲಲಾಟದಲ್ಲಿ ಕಮಲವಿದ್ದು, ಪೂರ್ಣ ಕುಂಭಗಳನ್ನು ಕಾಣಬಹುದು.

ನವರಂಗದಲ್ಲಿ ೪ ಸ್ವಾತಂತ್ರ ಕಂಬಗಳು ಹೊಂದಿದ್ದು ಕಂಬಗಳಲ್ಲಿ ಪೀಠ, ಪಾದ, ಅಷ್ಟಮುಖದಿಂಡು, ಚೌಕ, ದಿಂಡು, ಬೋಧಿಗೆಗಳು ಸದಾ ಹೊಂದಿವೆ. ಭಿತ್ತಿಯಲ್ಲಿ ೧೨ ಅರೆಗಂಬಗಳನ್ನು ಹೊಂದಿದೆ. ನವರಂಗದಲ್ಲಿ ಉತ್ತರ ಮತ್ತು ದಕ್ಷಿಣದ ಕಡೆ ದ್ವಾರಬಾಗಿಲುಗಳನ್ನು ಹೊಂದಿದೆ. ನವರಂಗದ ದ್ವಾರದಲ್ಲಿ ಲಲಾಟದಲ್ಲಿ ಗಜಲಕ್ಷ್ಮಿ ಶಿಲ್ಪವಿದ್ದು, ದ್ವಾರವು ಪಂಚ ಶಾಖೆಗಳಿಂದ ಕೂಡಿದೆ. ವೈಷ್ಣವ ದ್ವಾರಪಾಲಕರು ಅಂತರಾಳದ ಬಾಗಿಲುವಾಡದ ಕೆಳಭಾಗದಲ್ಲಿದ್ದಾರೆ. ಚಕ್ರ, ಶಂಕ ಹೊಂದಿದ್ದಾರೆ.

ಮುಖಮಂಟಪದಲ್ಲಿ ಬಾಗಿಲುವಾಡದಲ್ಲಿ ವೆಂಕಟರಮಣ ಉಬ್ಬು ಶಿಲ್ಪವಿದೆ. ಬಾಗಿಲುವಾಡವು ಪಂಚಶಾಖೆಯಿಂದ ಕೂಡಿದೆ. ಪದ್ಮಶಾಖೆ, ವಜ್ರಶಾಖೆ, ಲತಾಸುರಳಿಗಳು, ಚಿಕ್ಕ ಚಿಕ್ಕ ಶಿಲ್ಪಗಳನ್ನು ಹೊಂದಿದೆ. ಮುಖಮಂಟಪದಲ್ಲಿ ವೀರಗರುಡಸ್ವಾಮಿ ಮೂರ್ತಿ ಶಿಲ್ಪ ಮತ್ತು ವೀರಾಂಜನೇಯಸ್ವಾಮಿ ಮೂರ್ತಿ ಶಿಲ್ಪಗಳನ್ನು ಪ್ರತಿಷ್ಠಾಪಿಸಲಾಗಿದೆ. ಈ ಮುಖಮಂಟಪದಲ್ಲಿ ೨೪ ಪೂರ್ಣ ಕಂಬಗಳಿದ್ದು, ಕಂಬಗಳಲ್ಲಿ ವಿವಿಧ ಶಿಲ್ಪಗಳನ್ನು ಖಂಡರಿಸಲಾಗಿದೆ. ಈ ದೇವಾಲಯವು ಪ್ರಕಾರ ಗೋಡೆ ಹೊಂದಿದೆ. ಮಹಾದ್ವಾರದ ಮೇಲೆ ದ್ರಾವಿಡ ಶೈಲಿಯ ಗೋಪುರವನ್ನು ಹೊಂದಿದ್ದು ಸಂಪೂರ್ಣ ದೇವಾಲಯವನ್ನು ಅಧಿಷ್ಠಾನದ ಮೇಲೆ ನಿಂತಿದೆ. ದೇವಾಲಯದ ಎದುರುಗಡೆ ದೀಪಸ್ತಂಭವನ್ನು ಕಾಣಬಹುದು. ಸು.೨೦ ಅಡಿ ಎತ್ತರವಾಗಿದೆ. ದೇವಾಲಯವನ್ನು ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದೆ.

ಸಂಖ್ಯೆ : ೨

ಹೆಸರು : ವೇಣುಗೋಪಾಲಸ್ವಾಮಿ ದೇವಾಲಯ

ಸ್ಥಳ : ಮಧುಗಿರಿಯಿಂದ ಶಿರಾ ಮಾರ್ಗದ ಮಧ್ಯೆ

ಕಾಲಮಾನ : ಕ್ರಿ.ಶ.ಸುಮಾರು ೧೫-೧೬ನೇ ಶತಮಾನ

ಮಧುಗಿರಿಯಿಂದ ಶಿರಾಕ್ಕೆ ಹೋಗುವ ದಾರಿಯಲ್ಲಿ ೪ ಕಿ.ಮೀಟರ್ ದೂರದಲ್ಲಿ ವೇಣುಗೋಪಾಲಸ್ವಾಮಿ ದೇವಾಲಯವಿದೆ. ಈ ದೇವಾಲಯ ಪೂರ್ವಾಭಿಮುಖವಾಗಿದ್ದು, ತಳವಿನ್ಯಾಸದಲ್ಲಿ ಗರ್ಭಗೃಹ, ತೆರೆದ ಅಂತರಾಳ, ನವರಂಗ, ಮುಖಮಂಟಪವನ್ನು ಹೊಂದಿದೆ. ಚೌಕಾಕಾರದ ಗರ್ಭಗೃಹದಲ್ಲಿ ಪೀಠದ ಮೇಲೆ ವೇಣುಗೋಪಾಲ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ತೆರೆದ ಅಂತರಾಳವನ್ನು ಹೊಂದಿದ್ದು, ನವರಂಗದಲ್ಲಿ ಕಂಬಗಳು ಚೌಕಾಕಾರದ ಪೀಠ, ಚೌಕದ ಪಾದ, ಅಷ್ಟಮುಖ ದಿಂಡು, ಸದಾ ಬೋಧಿಗೆಗಳನ್ನು ಒಳಗೊಂಡಿದೆ, ಕಂಬಗಳ ಮೇಲೆ ಕಮಲ, ಗಣೇಶ, ಆಂಜನೇಯ ಮುಂತಾದ ಅನೇಕ ಉಬ್ಬು ಶಿಲ್ಪಗಳು ಕಾಣಬಹುದು. ಪ್ರವೇಶ ದ್ವಾರದ ಲಾಲಾಟ ಬಿಂಬದಲ್ಲಿ ಗಜಲಕ್ಷ್ಮೀ ಶಿಲ್ಪವಿದ್ದು, ದ್ವಾರ ಬಾಗಿಲು ಸರಳ ಶಾಖೆಗಳಿಂದ ಕೂಡಿದೆ. ದ್ವಾರದಲ್ಲಿ ವೈಷ್ಣವ ದ್ವಾರಪಾಲಕರಿದ್ದು, ಶಂಖ, ಚಕ್ರ, ಗದ್ದೆಯನ್ನು ಹೊಂದಿದ್ದಾರೆ. ಮುಖಮಂಟಪದಲ್ಲಿ ೪ ಪೂರ್ಣ ಕಂಬಗಳು, ೮ ಅರೆಗಂಬಗಳನ್ನು ಹೊಂದಿದೆ. ಮುಖಮಂಟಪದಲ್ಲಿ ಮತ್ಸ್ಯ ಮತ್ತು ನಾಗಗಳ ಕೆತ್ತನೆಯಿಂದ ಇದೆ. ಮೇಲೆ ದೇವ ಕೊಷ್ಟಕಗಳಿದ್ದು, ವಿವಿಧ ದೇವ, ದೇವತೆಯ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಮುಂದೆ ಎರಡು ದೀಪಸ್ತಂಭಗಳು ಇವೆ. ದೇವಾಲಯದ ಆವರಣದಲ್ಲಿ ಸುಂದರವಾದ ಕಲ್ಯಾಣಿ ಇದ್ದು, ಇದನ್ನು ಜಿರ್ಲೆ ಮಲ್ಲಮ್ಮ ನಿರ್ಮಿಸಿದ್ದಾಳೆ. ಕಲ್ಯಾಣಿಯ ಕಂಬದಲ್ಲಿ ಜಿರಲೇಮಲ್ಲಮ್ಮನ ಉಬ್ಬು ಶಿಲ್ಪವನ್ನು ಕಾಣಬಹುದು. ಇಡೀ ದೇವಾಲಯವು ಅಧಿಷ್ಟಾನ ಮೇಲೆ ನಿರ್ಮಿಸಲಾಗಿದೆ. ಈ ದೇವಾಲಯವನ್ನು ಜೀಣೋದ್ದಾರ ಮಾಡಲಾಗಿದೆ. ಸು.೧೫-೧೬ನೇ ಶತಮಾನದ ದೇವಾಲಯವಾಗಿದೆ.

ಗುಂಡ್ಲಹಳ್ಳಿ ಗ್ರಾಮದಲ್ಲಿ ವೇಣುಗೋಪಾಲಸ್ವಾಮಿ ದೇವಾಲಯದ ಅರ್ಚಕರ ಮನೆಯಲ್ಲಿ ತಾಮ್ರಪಟ ಶಾಸನವಿದೆ. ಈ ಶಾಸನದಲ್ಲಿ ಪ್ರಾಸ್ತಾಪಿಸುವಂತೆ ೧೫೧೫ನೇ ಇಸವಿಯಲ್ಲಿ ಕಟ್ಟಿದ ದೇವಾಲಯವಾಗಿದ್ದು, ಜಿರ್ಲೆ ಮಲ್ಲಮ್ಮ ಎಂಬುವರು ಕಟ್ಟಿಸಿದ ದೇವಾಲಯವಾಗಿದೆ.

ಸಂಖ್ಯೆ : ೩

ಹೆಸರು : ಕಂಬದರಂಗ ದೇವಾಲಯ

ಸ್ಥಳ : ಮಧುಗಿರಿಯಿಂದ ಶಿರಾಕ್ಕೆ ಹೋಗುವ ಮಾರ್ಗದ ಮಧ್ಯೆ

ಕಾಲಮಾನ : ಕ್ರಿ.ಶ.ಸುಮಾರು ೧೫-೧೬ನೇ ಶತಮಾನ

ದೇವಾಲಯವು ಮಧುಗಿರಿಯಿಂದ ಶಿರಾಕ್ಕೆ ಹೋಗುವ ಮಾರ್ಗದ ಮಧ್ಯೆ ೪ ಕಿ.ಮೀಟರ್ ದೂರದಲ್ಲಿದೆ. ಈ ದೇವಾಲಯವು ಪೂರ್ವಾಭಿಮುಖವಾಗಿದ್ದು, ತಳವಿನ್ಯಾಸದಲ್ಲಿ ಗರ್ಭಗೃಹ, ಅಂತರಾಳ, ಮುಖಮಂಟಪವನ್ನು ಒಳಗೊಂಡಿದೆ. ಚೌಕಾಕಾರದ ಗರ್ಭಗೃಹದಲ್ಲಿ ಆರು ಅಡಿ ಎತ್ತರದ ಎರಡು ಕಂಬಗಳನ್ನು ಪ್ರತಿಷ್ಠಾಪಿಸಲಾಗಿದೆ. ಈ ಕಂಬಗಳು ಕಪ್ಪು ಶಿಲೆಯಲ್ಲಿ ಕೆತ್ತಲಾಗಿದೆ. ತೆರೆದ ಅಂತರಾಳ ಹೊಂದಿದೆ. ಅಂತರಾಳವು ನಾಲ್ಕು ಭಿತ್ತಿ ಕಂಬಗಳು ಹೊಂದಿದೆ. ಮುಖಮಂಟಪದ ಬಾಗಿಲುವಾಡದಲ್ಲಿ ಗಜಲಕ್ಷ್ಮೀ ಉಬ್ಬು ಶಿಲ್ಪವನ್ನು ಹೊಂದಿದೆ. ಬಾಗಿಲುವಾಡವು ಸರಳ ಶಾಖೆಗಳಿಂದ ಕೂಡಿದೆ. ವೈಷ್ಣವ ದ್ವಾರಪಾಲಕರು ಶಂಖ, ಚಕ್ರ, ಗದೆಗಳನ್ನು ಹಿಡಿದಿದ್ದಾರೆ. ಎರಡು ಪೂರ್ಣ ಕಂಬಗಳಿದ್ದು, ಕಂಬಗಳಲ್ಲಿ ಚೌಕಾಕಾರದ ಪೀಠ ಬಹುಮುಖದಿಂಡು, ಚೌಕ, ದಿಂಡು, ಬೋಧಿಗೆಗಳನ್ನು ಒಳಗೊಂಡಿದೆ. ಕಂಬಗಳಲ್ಲಿ ಶಿವಲಿಂಗ, ಕೃಷ್ಣ, ಗಣೇಶ, ನಾಗ ವಿವಿಧ ಉಬ್ಬು ಶಿಲ್ಪಗಳು ಹೊಂದಿವೆ. ದೇವಾಲಯವನ್ನು ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದೆ.

ಈ ದೇವಾಲಯವು ಜೀರ್ಣೋದ್ಧಾರ ಮಾಡಲಾಗಿದೆ. ಈ ದೇವಾಲಯಕ್ಕೆ ಸಂಬಂಧಿಸಿದಂತೆ "ಗುಂಡ್ಲಹಳ್ಳಿ ಗ್ರಾಮದಲ್ಲಿ ಪೂಜಾರಿ ರಾಮಕೃಷ್ಣಪ್ಪನಲ್ಲಿ ತಾಮ್ರಶಾಸನವಿದೆ. ಈ ತಾಮ್ರಶಾಸನದಲ್ಲಿ ಪ್ರಸ್ತಾಪಿಸುವಂತೆ ಜಿರ್ಲೆಮಲ್ಲಮ್ಮ ಎಂಬುವರು ಕಟ್ಟಿಸಿದ ದೇವಾಲಯವಾಗಿದೆ. ೧೫-೧೬ನೇ ಇಸವಿಯಲ್ಲಿ ನಿರ್ಮಿಸಲಾಗಿದೆ. ಎಂದು ತಿಳಿದುಬರುತ್ತದೆ."

ಸಂಖ್ಯೆ : ೪

ಹೆಸರು : ರಂಗನಾಥಸ್ವಾಮಿ ದೇವಾಲಯ

ಸ್ಥಳ : ಗ್ರಾಮದ ಪಕ್ಕದಲ್ಲಿದೆ.

ಗ್ರಾಮ : ತುಂಗೋಟ್ಟಿ

ಕಾಲಮಾನ : ಕ್ರಿ.ಶ.ಸುಮಾರು ೧೫-೧೬ನೇ ಶತಮಾನ

ಮಧುಗಿರಿಯಿಂದ ಶಿರಾಕ್ಕೆ ಹೋಗುವ ಅಡ್ಡ ಮಾರ್ಗದಲ್ಲಿ ೩ ಕಿ.ಮೀಟರ್ ದೂರದಲ್ಲಿ ತುಂಗೋಟ್ಟಿ ಗ್ರಾಮದಲ್ಲಿ ಈ ದೇವಾಲಯವಿದೆ. ಉತ್ತರಾಭಿಮುಖವಾಗಿದೆ. ಈ ದೇವಾಲಯವು ಗ್ರಾನೈಟ್ ಶಿಲೆಯಿಂದ ನಿರ್ಮಾಣವಾಗಿದೆ. ತಳವಿನ್ಯಾಸದಲ್ಲಿ ಚೌಕಾಕಾರದ ಗರ್ಭಗೃಹ, ತೆರೆದ ಅಂತರಾಳ, ನವರಂಗ ಮತ್ತು ಮುಖಮಂಟಪವನ್ನು ಒಳಗೊಂಡಿದೆ. ಚೌಕಾಕಾರದ ಗರ್ಭಗೃಹದಲ್ಲಿ

[illegible]

೪ ಅಡಿ ಎತ್ತರದ ರಂಗನಾಥಸ್ವಾಮಿ ಮೂರ್ತಿಯನ್ನು ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ತೆರೆದ ಅಂತರಾಳವನ್ನು ಹೊಂದಿದೆ. ನವರಂಗದಲ್ಲಿ ನಾಲ್ಕು ಸ್ವಾತಂತ್ರವಾದ ಕಂಬಗಳಿದ್ದು, ಅವುಗಳು ಚೌಕಾಕಾರದ ಪೀಠ, ಪಾದ ಅಷ್ಟಮುಖದಿಂಡು, ಘಟ ಅಬ್ಯಾಕಸ ಸದಾ ಬೋಧಿಗೆಗಳು ಇವೆ. ನವರಂಗದಲ್ಲಿ ಭುವನೇಶ್ವರಿಯನ್ನು ಕಾಣುತ್ತೇವೆ. ಭುವನೇಶ್ವರಿಯಲ್ಲಿ ಪದ್ಮದ ಅಲಂಕರಣೆಯನ್ನು ಖಂಡರಿಸಲಾಗಿದೆ. ಕಂಬಗಳ ಪೀಠದ ಮೇಲೆ ವಿವಿಧ ಉಬ್ಬು ಶಿಲ್ಪಗಳನ್ನು ಕಾಣಬಹುದು. ಮುಖಮಂಟಪದಲ್ಲಿ ೧೬ ಸ್ವಾತಂತ್ರ ಕಂಬಗಳನ್ನು ಹೊಂದಿದ್ದು, ಅವುಗಳು ಚೌಕಾರದ ಪೀಠ, ಅಷ್ಟಮುಖದಿಂಡು, ಚೌಕಾ, ಬೋಧಿಗೆಗಳನ್ನು ಒಳಗೊಂಡಿದೆ. ಮುಖಮಂಟಪದ ಬಾಗಿಲು ಪಕ್ಕದಲ್ಲಿ ೮ ಅಡಿ ಎತ್ತರದ ವೈಷ್ಣವ ಮೂರ್ತಿಶಿಲ್ಪಗಳು ಇದ್ದು, ಚಕ್ರ, ಶಂಕ, ಗದೆಯನ್ನು ಹೊಂದಿದ್ದಾರೆ. ದೇವಾಲಯದ ಶಿಖರವು ದ್ರಾವಿಡ ಶೈಲಿಯಲ್ಲಿದ್ದು ಹಲವಾರು ಸಣ್ಣ ಶಾಲಾ ಶಿಖರಗಳನ್ನು ಹೊಂದಿದೆ. ದೇವಾಲಯವು ಉಪಾನ, ಜಗತಿ, ಕುಮುದಗಳ ಮೇಲೆ ನಿರ್ಮಾಣವಾಗಿದೆ. ದೇವಾಲಯದ ಸುತ್ತಲೂ ಪಾಕರ ಗೋಡೆಯನ್ನು ಹೊಂದಿದ್ದು, ಪಾಕಾರ ಗೋಡೆಯಲ್ಲಿ (ಭಿತ್ತಿಯಲ್ಲಿ) ನೀತಿ ಕತೆ ಹೇಳುವ ಉಬ್ಬು ಕೆತ್ತನೆಯ ಶಿಲ್ಪಗಳನ್ನು ಖಂಡರಿಸಲಾಗಿದೆ. ಪ್ರವೇಶದ್ವಾರದ ಮೇಲೆ ಎತ್ತರವಾದ ದ್ರಾವಿಡ ಶೈಲಿಯ ಗೋಪುರ ಕಾಣಬಹುದು. ಗೋಪುರದಲ್ಲಿ ಶಾಲಾ ಶಿಖರವನ್ನು ಹೊಂದಿದೆ. ಸಂಪೂರ್ಣವಾಗಿ ದೇವಾಲಯವು ಅಧಿಷ್ಠಾನದ ಮೇಲೆ ನಿರ್ಮಾಣವಾಗಿದೆ.

ಈ ದೇವಾಲಯವು ಶಾಸನೋಕ್ತವಾಗಿದ್ದು, ಎಡಗಡೆ ಮೂರನೇಯ ಕಂಬದಲ್ಲಿ ೧೪೭೪ನೇಯ ವರ್ಷದಲ್ಲಿ ಮುಮ್ಮಡಿ ಚಿಕ್ಕಪ್ಪಗೌಡರಿಗೆ ಪೂರ್ಣವಾಗಲೆಂದು ಬಿಜ್ಜವರದ ಕೆಂಚಯನಾಯಕರು ದೇವಾಲಯಕ್ಕೆ ದಾನ ಮಾಡಿದ ವಿವರಗಳನ್ನು ಒಳಗೊಂಡಿದೆ.[೫]

ಸಂಖ್ಯೆ	: ೫
ಹೆಸರು	: ವೀರಾಂಜಿನೇಯ ದೇವಾಲಯ
ಸ್ಥಳ	: ಗ್ರಾಮದ ಪಕ್ಕದಲ್ಲಿದೆ.
ಗ್ರಾಮ	: ಬಿಜವರ
ಕಾಲಮಾನ	: ೧೪-೧೫ನೇ ಶತಮಾನ

ಈ ದೇವಾಲಯವು ಮಧುಗಿರಿಯಿಂದ ೩ ಕಿ.ಮೀಟರ್ ದೂರದಲ್ಲಿದೆ. ಬಿಜವಾರ ಗ್ರಾಮದಲ್ಲಿ ಇದೆ. ದೇವಾಲಯವು ದಕ್ಷಿಣಾಭಿಮುಖವಾಗಿದ್ದು ತಳವಿನ್ಯಾಸದಲ್ಲಿ ಗರ್ಭಗೃಹ, ನವರಂಗ ಮುಖಮಂಟಪವನ್ನು ಹೊಂದಿದೆ. ಚೌಕಾಕಾರದ ಗರ್ಭಗೃಹದಲ್ಲಿ ವೀರಾಂಜನೇಯ ಮೂರ್ತಿಯ ಪ್ರತಿಷ್ಠಾಪಿಸಲಾಗಿದೆ. ಈ ಮೂರ್ತಿ ೧೧ ಅಡಿ ಎತ್ತರ, ೯ ಅಡಿ ಅಗಲವಿದೆ.

ನವರಂಗದಲ್ಲಿ ಸ್ವಾತಂತ್ರವಾದ ನಾಲ್ಕು ಪೂರ್ಣ ಕಂಬಗಳು ಹೊಂದಿದ್ದು, ಕಂಬಗಳಲ್ಲಿ

[illegible]

[illegible]	[illegible]
[illegible]	[illegible]
[illegible]	[illegible]
[illegible]	[illegible]
[illegible]	[illegible]

[illegible]

ಭಿತ್ತಿಯ ೧೨ ಅರೆಗಂಬಗಳನ್ನು ಹೊಂದಿದೆ. ಹಾಗೂ ಮುಖಮಂಟದಲ್ಲಿ ಎರಡು ಕಂಬಗಳನ್ನು ಹೊಂದಿದೆ. ಬಾಗಿಲುವಾಡವು ಸರಳ ಶಾಖೆಗಳಿಂದ ಕೂಡಿದೆ. ವೈಷ್ಣವ ದ್ವಾರಪಾಲಕರು ಶಂಕ, ಚಕ್ರ, ಗದೆಗಳನ್ನು ಹಿಡಿದಿದ್ದಾರೆ. ದ್ರಾವಿಡ ಶೈಲಿಯ ಗೋಪುರವನ್ನು ಹೊಂದಿದೆ. ದೇವಾಲಯದ ಮುಂದೆ ೨೦ ಅಡಿ ಎತ್ತರದ ದೀಪಸ್ತಂಭವನ್ನು ಕಾಣಬಹುದು. ದೇವಾಲಯದ ಸುತ್ತಲು ಪ್ರಕಾರ ಗೋಡೆಯನ್ನು ನಿರ್ಮಿಸಲಾಗಿದೆ. ಹಾಗೂ ಜೀರ್ಣೋದ್ಧಾರ ಮಾಡಲಾಗಿದೆ. ಈ ದೇವರಿಗೆ ವಜ್ರಾಂಗಿ ಕವಚ ದಾಣೆಯನ್ನು ವಿಜಯನಗರದ ಅರಸರು ನೀಡಿದ್ದಾರೆ. ವಜ್ರಾಂಗಿ ಕವಚದ ಮೇಲೆ ೧೪೩೨ ರಿಂದ ೧೪೪೬ರವರೆಗೆ ಇರುವ ಲಿಪಿ ಕಂಡುಬರುತ್ತದೆ.[೬]

ಸಂಖ್ಯೆ : ೬

ಹೆಸರು : ಮಾರುತಿ (ಆಂಜನೇಯ) ದೇವಾಲಯ

ಸ್ಥಳ : ಗ್ರಾಮದ ಮಧ್ಯೆ

ಗ್ರಾಮ : ಸಿದ್ಧಾಪುರ

ಈ ದೇವಾಲಯವು ಮಧುಗಿರಿಯಿಂದ ಶಿರಾಕ್ಕೆ ಹೋಗುವ ಅಡ್ಡ ಮಾರ್ಗದಲ್ಲಿ ೧ ಕಿ.ಮೀಟರ್ ದೂರದಲ್ಲಿ ಸಿದ್ಧಾಪುರ ಗ್ರಾಮದಲ್ಲಿ ಮಾರುತಿ (ಆಂಜನೇಯ) ದೇವಾಲಯವಿದೆ. ಉತ್ತರಾಭಿಮುಖವಾಗಿದ್ದು, ತಳವಿನ್ಯಾಸದಲ್ಲಿ ಚೌಕಾಕಾರದ ಗರ್ಭಗೃಹ ತೆರೆದ ಮುಖಮಂಟಪವಿದೆ. ಗರ್ಭಗೃಹದಲ್ಲಿ ೧೦ ಅಡಿ ಎತ್ತರವಿರುವ ಆಂಜನೇಯ ಮೂರ್ತಿಶಿಲ್ಪವಿದೆ. ಮುಖಮಂಟಪದಲ್ಲಿ ಎರಡು ಸ್ವಾತಂತ್ರ್ಯ ಕಂಬಗಳಿದ್ದು, ಕಂಬಗಳು ಸಾಧಾರಣವಾಗಿವೆ. ಈ ದೇವಾಲಯವು ಕಲ್ಲಿನ ಕಟ್ಟಡದಲ್ಲಿ ನಿರ್ಮಾಣವಾಗಿದೆ. ದೇವಾಲಯದ ಮುಂದೆ ೧೫ ಅಡಿ ಎತ್ತರದ ದೀಪಸ್ತಂಭವಿದೆ. ಈ ದೇವಾಲಯವನ್ನು ಕ್ರಿ.ಶ.ಸು. ೧೬-೧೭ನೇ ಶತಮಾನದಾಗಿದೆ.

೪.೩. ಶಾಕ್ತ ದೇವಾಲಯಗಳು

ಸಂಖ್ಯೆ : ೧

ಹೆಸರು : ದಂಡಿಮಾರಮ್ಮ ದೇವಾಲಯ

ಸ್ಥಳ : ಗ್ರಾಮದ ಪಕ್ಕದಲ್ಲಿದೆ.

ಗ್ರಾಮ : ಮಧುಗಿರಿ ಪಟ್ಟಣ

ಕಾಲಮಾನ : ೧೬ನೇ ಶತಮಾನ

ದೇವಾಲಯವು ಮಧುಗಿರಿಯಿಂದ ತುಮಕೂರಿಗೆ ಹೋಗುವ ಮಾರ್ಗದಲ್ಲಿ ಇದೆ. ದೇವಾಲಯವು ಪೂರ್ವಾಭಿಮುಖವಾಗಿದೆ. ಚೌಕಾಕಾರದ ಗರ್ಭಗೃಹ, ತೆರೆದ ಅಂತರಾಳ, ನವರಂಗವನ್ನು ಹೊಂದಿದೆ. ಗರ್ಭಗೃಹದಲ್ಲಿ ಸು.೪ ಅಡಿ ಎತ್ತರ ದಂಡಿಮಾರಮ್ಮನ ಮೂರ್ತಿಯನ್ನು

ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಲಲಾಟದಲ್ಲಿ ಅರಳಿದ ಕಮಲವಿದ್ದು ದ್ವಾರವು ಸರಳ ಶಾಖೆಗಳಿಂದ ಕೂಡಿದೆ.

ನವರಂಗದಲ್ಲಿ ೪ ಪೂರ್ಣಕಂಬಗಳಿದ್ದು, ಕಂಬಗಳಲ್ಲಿ ಚೌಕಾಕಾರದ ಪೀಠ, ಪಾದ, ಬಹುಮುಖದಿಂಡು, ಚೌಕಾ, ಬೋಧಿಗೆಗಳನ್ನು ಹೊಂದಿದೆ. ಭಿತ್ತಿಯಲ್ಲಿ ೧೦ ಅರೆಗಂಬಗಳನ್ನು ಹೊಂದಿವೆ. ದೇವಾಲಯವು ಸಂಪೂರ್ಣವಾಗಿ ಅಧಿಷ್ಠಾನದ ಮೇಲೆ ನಿರ್ಮಿಸಲಾಗಿದೆ. ಶಿಖರವನ್ನು ಹೊಂದಿದ್ದು, ಶಿಖರದಲ್ಲಿ ವಿವಿಧ ರೀತಿಯ ಶಿಲ್ಪಗಳು ಹೊಂದಿದೆ. ಈ ದೇವಾಲಯವನ್ನು ಜೀರ್ಣೋದ್ಧಾರ ಮಾಡಲಾಗಿದೆ. ೧೬ನೇ ಶತಮಾನದಲ್ಲಿ ಹಿರೇಚಿಕ್ಕಪ್ಪಗೌಡರು ಬಿಜ್ಜವರವನ್ನು ಆಳುತ್ತಿದ್ದರು. ಬಿಜ್ಜ ಮಹಾದೇವಿಯ ನೆನಪಿಗಾಗಿ ದಂಡಿಮಾರಮ್ಮನ ದೇವಾಲಯವನ್ನು ನಿರ್ಮಾಣ ಮಾಡಲಾಗಿದೆ ಎಂಬುವುದು ತಿಳಿಯಬಹುದು. ವರ್ಷಕ್ಕೊಮ್ಮೆ ಜಾತ್ರೆ ನಡೆಯುತ್ತದೆ.[೬]

ಸಂಖ್ಯೆ	:	೨
ಹೆಸರು	:	ಪದ್ಮವತಿಅಮ್ಮ ದೇವಾಲಯ
ಸ್ಥಳ	:	ವೆಂಕಟರಮಣ ದೇವಾಲಯದ ಬಲಗಡೆ
ಗ್ರಾಮ	:	ಮಧುಗಿರಿ ಪಟ್ಟಣ

ದೇವಾಲಯವು ವೆಂಕಟರಮಣ ದೇವಾಲಯದ ಆವರಣದಲ್ಲಿ ನಿರ್ಮಿಸಲಾಗಿದೆ. ಪದ್ಮವತಿ ದೇವಾಲಯವು ಪೂರ್ವಾಭಿಮುಖವಾಗಿದೆ. ಚೌಕಾಕಾರದ ಗರ್ಭಗೃಹ, ತೆರೆದ ಅಂತರಾಳ, ಮುಖ ಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಪದ್ಮವತಿ ಅಮ್ಮನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ಲಲಾಟದಲ್ಲಿ ಗಜಲಕ್ಷ್ಮೀ ಶಿಲ್ಪವಿದೆ. ದ್ವಾರದ ಶಾಖೆಗಳು ಸರಳವಾಗಿವೆ. ಮುಖಮಂಟಪದಲ್ಲಿ ಆರು ಸ್ವತಂತ್ರ್ಯ ಪೂರ್ಣಕಂಬಗಳಿದ್ದು, ಅವುಗಳಲ್ಲಿ ಚೌಕಾಕಾರದ ಪೀಠ, ಪಾದ, ಬಹುಮುಖದಿಂಡು, ಫಲಕ, ಪುಷ್ಪ ಬೋಧಿಗೆಗಳು ಕಂಬಗಳಲ್ಲಿ ಒಳಗೊಂಡಿವೆ. ದ್ವಾರಬಾಗಿಲಿನಲ್ಲಿ ಶಕ್ತದ್ವಾರಪಾಲಕಿಯರು ಇದ್ದು, ಕಮಲಗಳನ್ನು ಹೊಂದಿದ್ದಾರೆ.

ಮುಖಮಂಟಪದಲ್ಲಿ ೧೬ ಕಂಬಗಳನ್ನು ಹೊಂದಿದೆ. ದ್ರಾವಿಡ ಶೈಲಿನ ಶಿಖರವಿದ್ದು, ಶಿಖರದಲ್ಲಿ ವಿವಿಧ ಕೊಷ್ಟಕಗಳಿದ್ದು ಅದರಲ್ಲಿ ವಿವಿಧ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ಶಿಖರದ ತುದಿಯಲ್ಲಿ ಕಳಸವನ್ನು ಪ್ರತಿಷ್ಠಾಪಿಸಲಾಗಿದೆ. ಇಡೀ ದೇವಾಲಯವು ಅಧಿಷ್ಠಾನ ಮೇಲೆ ನಿರ್ಮಿಸಲಾಗಿದೆ. ದೇವಾಲಯವು ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದೆ.

ಸಂಖ್ಯೆ	:	೩
ಹೆಸರು	:	ಅಲುವೇಲು ಮಂಗಮ್ಮ ದೇವಾಲಯ

ಸ್ಥಳ : ವೆಂಕಟರಮಣ ದೇವಾಲಯದ ಎಡಗಡೆ

ಗ್ರಾಮ : ಮಧುಗಿರಿ ಪಟ್ಟಣ

ಪ್ರಸ್ತುತ ದೇವಾಲಯವು ವೆಂಕಟರಮಣ ದೇವಾಲಯದ ಎಡಗಡೆ ಇದ್ದು, ದೇವಾಲಯವು ಪೂರ್ವಾಭಿಮುಖವಾಗಿದೆ. ಚೌಕಾಕಾರದ ಗರ್ಭಗೃಹ, ಅಂತರಾಳ, ತೆರೆದ ಮುಖಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಸು.೪ ಅಡಿ ಎತ್ತರದ ಅಲುಮೇಲು ಮಂಗಮ್ಮನ ಮೂರ್ತಿಯನ್ನು ಪ್ರತಿಷ್ಠಾಪಿಸಲಾಗಿದೆ. ದೇವಾಲಯದ ಲಲಾಟದಲ್ಲಿ ಕಮಲದ ಕೆತ್ತನೆಯಿಂದ ಹೊಂದಿದೆ. ದ್ವಾರಬಾಗಿಲುನಲ್ಲಿ ಅಂತರಾಳದಲ್ಲಿ ಶಕ್ತ ದ್ವಾರಪಾಲಕಿಯರು ಕಮಲಗಳನ್ನು ಹೊಂದಿರುವವರು. ಮುಖಮಂಟಪದಲ್ಲಿ ೧೬ ಕಂಬಗಳಿದ್ದು, ಪೀಠ, ಪಾದ, ಅಷ್ಟಮುಖದಿಂಡು, ಚೌಕ ಬೋಧಿಗೆಗಳನ್ನು ಹೊಂದಿದೆ. ದ್ರಾವಿಡ ಶೈಲಿಯ ಶಿಖರವನ್ನು ಹೊಂದಿದ್ದೆ, ಇಡೀ ದೇವಾಲಯವು ಅಧಿಷ್ಠಾನದ ಮೇಲೆ ನಿರ್ಮಾಣವಾಗಿದೆ. ದೇವಾಲಯವು ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದೆ.

ಸಂಖ್ಯೆ : ೪

ಹೆಸರು : ಪಾರ್ವತಿ ಅಮ್ಮನ ದೇವಾಲಯ

ಸ್ಥಳ : ಮಲೇಶ್ವರ ದೇವಾಲಯದ ಆವರಣದಲ್ಲಿ

ಗ್ರಾಮ : ಮಧುಗಿರಿ ಪಟ್ಟಣ

ಪ್ರಸ್ತುತ ದೇವಾಲಯವು ಮಲೇಶ್ವರಸ್ವಾಮಿ ದೇವಾಲಯದ ಆವರಣದಲ್ಲಿದೆ. ಈ ದೇವಾಲಯವು ಪೂರ್ವಭಿಮುಖವಾಗಿದ್ದು, ತಳವಿನ್ಯಾಸದಲ್ಲಿ ಚೌಕಾಕಾರದ ಗರ್ಭಗೃಹ, ಅಂತರಾಳ, ತೆರೆದ ಮುಖಮಂಟಪವನ್ನು ಹೊಂದಿದೆ. ಗರ್ಭಗೃಹದಲ್ಲಿ ಸು.೫ ಅಡಿ ಎತ್ತರ ಪಾರ್ವತಿ ಅಮ್ಮನ ಮೂರ್ತಿ ಶಿಲ್ಪವನ್ನು ಪ್ರತಿಷ್ಠಾಪಿಸಲಾಗಿದೆ. ಬಾಗಿಲುವಾಡದ ಲಾಲಾಟ ಬಿಂಬದಲ್ಲಿ ಗಣೇಶ ಉಬ್ಬು ಶಿಲ್ಪವಿದೆ. ಅಂತರಾಳದ ಬಾಗಿಲುವಾಡವು ತ್ರಿಶಾಖೆಗಳನ್ನು ಹೊಂದಿದೆ. ಅವುಗಳಲ್ಲಿ ಲತಾಸುರಳಿ ಶಾಖೆ, ವಜ್ರಶಾಖೆ, ಪುಷ್ಪಶಾಖೆಗಳನ್ನು ಕಾಣಬಹುದು. ಶಾಕ್ತ ದ್ವಾರಪಾಲಕಿಯರು ಕಮಲಗಳನ್ನು ಹೊಂದಿದ್ದಾರೆ. ಮುಖಮಂಟಪದಲ್ಲಿ ೧೪ ಕಂಬಗಳನ್ನು ಹೊಂದಿದೆ. ಕಂಬಗಳಲ್ಲಿ ಚೌಕಾಕಾರದ ಪೀಠ, ಪಾದ, ಅಷ್ಟಮುಖದಿಂಡು, ಫಲಕ, ಪುಷ್ಪ, ಬೋಧಿಗೆಗಳನ್ನು ಕಾಣಬಹುದು, ಈ ದೇವಾಲಯವು ಗ್ರಾನೈಟ್ ರೀತಿಯಿಂದ ನಿರ್ಮಿಸಲಾಗಿದೆ.

೪.೪ ಇತರೆ ಪಂಥದ ದೇವಾಲಯಗಳು

ಸಂಖ್ಯೆ : ೧

ಹೆಸರು : ಮಲ್ಲಿನಾಥ ದಿಗಂಭರ ಜೈನ ಬಸದಿ

ಸ್ಥಳ : ಕೋಟೆಯ ಪಕ್ಕದಲ್ಲಿ

ಗ್ರಾಮ : ಮಧುಗಿರಿ ಪಟ್ಟಣ

ಕಾಲಮಾನ : ೧೫-೦೬ನೇ ಶತಮಾನ

ಮಲ್ಲಿನಾಥ ದಿಗಂಭರ ಜೈನ ಬಸದಿಯು ಮಧುಗಿರಿ ಪಟ್ಟಣದಲ್ಲಿ ಕೋಟೆಯ ಪಕ್ಕದಲ್ಲಿ ಪೂರ್ವಾಭಿಮುಖವಾಗಿದ್ದು, ತಳವಿನ್ಯಾಸದಲ್ಲಿ ಗರ್ಭಗೃಹ, ತೆರೆದ ಅಂತರಾಳ, ನವರಂಗ ಮತ್ತು ಮುಖಮಂಟಪವನ್ನು ಹೊಂದಿದೆ. ಚೌಕಾಕಾರದ ಗರ್ಭಗೃಹದಲ್ಲಿ ಮೂರುವರೆ ಅಡಿ ಎತ್ತರವಾಗಿರುವ ಕಂಚಿನ ಮಲ್ಲಿನಾಥ ಪ್ರತಿಮೆಯನ್ನು ಪೀಠದ ಮೇಲೆ ಪ್ರತಿಷ್ಠಾಪಿಸಲಾಗಿದೆ. ತೆರೆದ ಅಂತರಾಳವಿದೆ. ನವರಂಗದಲ್ಲಿ ನಾಲ್ಕು ಸ್ವಾತಂತ್ರ ಕಂಬಗಳು ಇವೆ. ಈ ಕಂಬಗಳಲ್ಲಿ ಚೌಕಾಕಾರದ ಪೀಠ, ಪಾದ, ಅಷ್ಟಮುಖದಿಂಡು, ಘಟ, ಮಂಡಿ, ಫಲಕ, ಬೋಧಿಗೆಗಳನ್ನು ಹೊಂದಿದೆ. ಭಿತ್ತಿಯಲ್ಲಿ ೧೨ ಅರೆಗಂಬಗಳನ್ನು ಕಾಣಬಹುದು.

ನವರಂಗದ ನಾಲ್ಕು ಕಂಬಗಳಲ್ಲಿ ಪೂರ್ಣಕಂಬ, ಜೀನ ಶಿಲ್ಪಗಳು, ನಾಗಶಿಲ್ಪ, ಕಮಲದ ಹೂಗಳು, ಜೈನ ತೀರ್ಥ, ಆನೆಯ ಮೇಲೆ ಕುಳುತಿರುವ ವ್ಯಕ್ತಿ, ವಿವಿಧ ಉಬ್ಬು ಶಿಲ್ಪಗಳು ಕಾಣಬಹುದು. ನವರಂಗ ಬಾಗಿಲಲ್ಲಿ ದ್ವಾರಪಾಲಕರು ಉಬ್ಬು ಶಿಲ್ಪಗಳು ಖಂಡರಿಸಲಾಗಿದೆ. ಮುಖಮಂಟಪದ ಬಾಗಿಲುವಾಡದಲ್ಲಿ ಜೈನಮೂರ್ತಿಗೆ ಆನೆಗಳು ಆರ್ಶಿವಾಧಿಸುತ್ತಿರುವ ಕೆತ್ತನೆಯಿದೆ. ದ್ವಾರ ಬಾಗಿಲು ಶಾಖೆಯಲ್ಲಿ ವಿವಿಧ ಅಲಂಕರಣೆ ಕೆತ್ತನೆಯಿದೆ. ದ್ವಾರ ಬಾಗಿಲಿನಲ್ಲಿ ದ್ವಾರ ಪಾಲಕರಿದ್ದು, ತಲೆಯ ಮೇಲೆ ಕೀರ್ತಿ ಮುಖಸಿಂಹ, ಎದೆ, ಮುಖ ಮಂಟಪದಲ್ಲಿ ನಾಲ್ಕು ಸ್ವಾತಂತ್ರ ಕಂಬಗಳಿದ್ದು, ಕಂಬಗಳಲ್ಲಿ ಚೌಕಾಕಾರದ ಪೀಠ, ಪಾದ, ಅಷ್ಟಮುಖದಿಂಡು, ಚೌಕ, ಘಟ, ಮಂಡಿ, ಫಲಕ, ಬೋಧಿಗೆಗಳುನ್ನು ಹೊಂದಿದೆ. ಭಿತ್ತಿಯಲ್ಲಿ ೮ ಕಂಬಗಳನ್ನು ಕಾಣಬಹುದು. ಮುಖಮಂಟಪದ ನಾಲ್ಕು ಕಂಬಗಳಲ್ಲಿ ನಾಗ, ಕಮಲ, ಕುಂಬ, ವಿವಿಧ ಉಬ್ಬು ಶಿಲ್ಪಗಳು ಕಾಣಬಹುದು. ದೇವಾಲಯವು ವೃತ್ತಾಕಾರದ ದ್ರಾವಿಡ ಶೈಲಿಯ ಶಿಖರವನ್ನು ಹೊಂದಿದ್ದು, ಶಿಖರದ ಸುತ್ತಲೂ ಕೀರ್ತಿಮುಖಸಿಂಹ, ಜೈನಮೂರ್ತಿಗಳು, ದೇವಕೋಷ್ಠಗಳನ್ನು ನಿರ್ಮಿಸಲಾಗಿದೆ. ಬಸದಿಯ ಮುಂದೆ ಸು.೨೦ ಅಡಿ ಎತ್ತರ ಮಾನಸಸ್ತಂಭವನ್ನು ಪ್ರತಿಷ್ಠಾಪಿಸಲಾಗಿದೆ. ಈ ಸ್ತಂಭ ಕಲಾತ್ಮಕವಾಗಿದೆ. ಇಡೀ ದೇವಾಲಯವು ಅಧಿಷ್ಠಾನದ ಮೇಲೆ ನಿರ್ಮಿಸಲಾಗಿದೆ. ಈ ದೇವಾಲಯವನ್ನು ಗ್ರಾನೈಟ್ ಶಿಲೆಯಿಂದ ನಿರ್ಮಿಸಲಾಗಿದೆ. "ಈ ದೇವಾಲಯವು ಶಾಸನಸೂಕ್ತವಾಗಿದ್ದು, ಕ್ರಿ.ಶ೧೫೩೧ರಲ್ಲಿ ಮಲ್ಲಿನಾಥ ಸ್ವಾಮಿಗೆ ಗೋದಾಮಿ ಮೈಯರ ಹೆಂಡತಿ ಜಯಮ್ಮ ಎಂಬುವರು ಅಗ್ರಹಾರಗಳನ್ನು ದಾನ ಮಾಡಿರುವುದು ತಿಳಿಸುತ್ತದೆ."[೮]

[illegible]

[illegible]

[illegible]

[illegible]

ಅಡಿಟಿಪ್ಪಣಿಗಳು

೧. ದೇವರಾಜ್ ಡಿ.ವಿ., "ಮಹಾನಾಡ ಪ್ರಭುಗಳ ಕಾಲದ ವಾಸ್ತುಶಿಲ್ಪ" ಮಹಾನಾಡು ಪ್ರಭುಗಳು, ಕಲ್ಬುರ್ಗಿ ಎಂ.ಎಂ. (ಸಂ) ಪು.೭೯.

೨. ಎಪಿಗ್ರಾಫಿಯ ಕರ್ನಾಟಕ –XII ಮಧುಗಿರಿ ೨೧ (ಸಿದ್ದಾಪುರ), ಸಂ.೨೧.

೩. 'ಗುಂಡ್ಲಹಳ್ಳಿ ಗ್ರಾಮದಲ್ಲಿ ಪೂಜಾರಿ ರಾಮಕೃಷ್ಣನಲ್ಲಿದ್ದ ತಾಮ್ರಶಾಸನ".

೪. ಅದೇ ತಾಮ್ರಶಾಸನ.

೫. ಅನ್ನಿಯಲ್ ರಿಪೋರ್ಟ್ ಫರ್ ದಿ ಇಯರ್ ೧೯೨೯, ಪು ೨೫೫.

೬. 'ಬಿಜವರ ಗ್ರಾಮದಲ್ಲಿ ಪೂಜಾರಿ ಜಯರಾಮ್‌ನಲ್ಲಿದ್ದ ವಜ್ರಾಂಗಿ ಕವಚ.

೭. ಶ್ರೀನಿವಾಸ್ ಎಂ.ಡಿ. "ಮಧುಗಿರಿ ಇತಿಹಾಸ", ಪು.೬೩.

೮. ಎಪಿಗ್ರಾಫಿಯ ಕರ್ನಾಟಕ– Vol, XVI ತುಮಕೂರು ಡಿಸ್ಟ್ರಿಕ್, ಪೂಬ್‌ಲಿಷ್‌ಡ್ ಬೈ ನೀಲಾಕಂಠಶಾಸ್ತ್ರಿ ಕೆ.ಎ., ಪು.೮೭.

ಅಧ್ಯಾಯ – ೫

ಮೂರ್ತಿ ಶಿಲ್ಪಗಳು

ಅಧ್ಯಾಯ – ೫

ಮೂರ್ತಿ ಶಿಲ್ಪಗಳು

ಭಾರತದಲ್ಲಿ ದೇವತಾರಾಧನೆ ಹಾಗೂ ವ್ಯವಸ್ಥಿತ ದೇವಾಲಯಗಳ ನಿರ್ಮಾಣ ಎಂದು ಆರಂಭವಯಿತೋ ಅಂದಿನಿಂದಲೂ ದೇವತಾ ಮೂರ್ತಿಗಳ (ಶಿಲ್ಪಗಳು) ಪ್ರತಿಷ್ಠಾಪನೆ ಮತ್ತು ಆರಾಧನೆ ನಡೆದೇ ಇದೆ. ಯಾವುದೇ ಪಂಥದ ದೇವಾಲಯವಿರಲಿ ಆದೇವಾಲಯಕ್ಕೊಂದು ದೇವತಾಮೂರ್ತಿ ಇದ್ದೇ ಇರುತ್ತದೆ. ಈ ರೀತಿ ಮೂರ್ತಿಗಳನ್ನು ಕುರಿತು ಶಾಸ್ತ್ರೀಯವಾಗಿ ಅಧ್ಯಯನ ಮಾಡುವ ಶಾಸ್ತ್ರವನ್ನು ನಾವು ಸ್ಥೂಲವಾಗಿ ಮೂರ್ತಿಶಾಸ್ತ್ರ ಎಂದು ಕರೆಯಬಹುದು.

ಶಿಲ್ಪ ಎನ್ನುವ ಮಾತು ಮೊದಲು ಬಹಳ ವ್ಯಾಪಕವಾದ ಅರ್ಥವನ್ನು ಪಡೆದಿತ್ತು. ಪ್ರಸಿದ್ದವಾದ ಅರವತ್ನಾಲ್ಕು ಕಲೆಗಳಿಗೆಲ್ಲಾ 'ಶಿಲ್ಪ' ಎನ್ನುವ ಹೆಸರೇ ಅನ್ವಯವಾಗುತ್ತಿತ್ತು. ಮುಂದೆ ಈ ಪದದ ವ್ಯಾಪ್ತಿ ಪರಿಮಿತಿಗೊಂಡು ಶಿಲ್ಪ ಎಂದರೆ ಮೂರ್ತಿಗಳ ನಿರ್ಮಾಣ ಎಂಬ ಅರ್ಥಕ್ಕೆ ಸೀಮಿತವಾಯಿತು.[೧] ಜಗತ್ ಸೃಷ್ಟಿಯು ಯಾವಾಗ ಮೊದಲಾಯಿತೋ ಆಗಲೇ ಶಿಲ್ಪವು ಪ್ರಾರಂಭವಾಗಿದೆಯೆಂದು ವೇದವು ಹೇಳಿದೆ ಜಗತ್ ಸೃಷ್ಟಿಯನ್ನು ಜಗತ್ ಶಿಲ್ಪ ಎಂದು ಈ ಜಗತ್ತಿನ ಸೃಷ್ಟಿಕರ್ತನನ್ನು ಜಗತ್ ಶಿಲ್ಪ ಎಂದು ವರ್ಣಿಸಿರುವುದುಂಟು.[೨] ಶಿಲ್ಪ ಎಂಬ ಪದವು 'ಶೀಲಸಮುದೌ' ಎಂಬ ಧಾತುವಿನಿಂದ ಉತ್ಪನ್ನವಾಗಿದೆ. ಸಮಾಧಿ ಎಂಬ ಅರ್ಥವುಳ್ಳ ಶಿಲ್ ಎಂಬ ಧಾತುವು ತಪಸ್ಸನ್ನು ಸೂಚಿಸುತ್ತದೆ,

"ಶೀಲ ಸಮುಧೌ ಶೀಲ್ಯತ ಇತಿ ಶಿಲ್ಪ' ಮನಸ್ಸು ಸಮಾಧಿ ಸ್ಥಿತಿಯಲ್ಲಿದ್ದಾಗ ರೂಪಿತವಾಗುವ ಕರಕುಶಲ ವಸ್ತುವೇ ಶಿಲ್ಪ ಎಂದೂ ಹೇಳಿರುವುದು ಶಿಲ್ಪ ಶಬ್ದದ ವ್ಯಾಪಕ ಅರ್ಥ ವಿಸ್ತಾರವನ್ನು ಈ ಹಂತದಲ್ಲಿ ಕಾಣಬಹುದು."[೩]

[illegible]

ಶಿಲ್ಪ ಕರ್ಮಕಲಾಧಿಕಂ ಎನ್ನುವುದು ಅಮರ ಸಿಂಹನ ಅಮರಕೋಶದ ವಿವರಣೆಯಾಗಿದೆ. ಕರ್ತೃವಿನ ಅಧಿಕ ಕೌಶಲ್ಯವನ್ನೊಳಗೊಂಡ ಕರ್ಮ ಅಥವಾ ಕ್ರಿಯೇಗೆ ಶಿಲ್ಪವೆಂದು ಹೆಸರು.[೪] ಭಾರತೀಯ ವಾಸ್ತು, ಮೂರ್ತಿ ಚಿತ್ರಕಲೆಗಳಿಗೆ ಸಂಬಂಧಿಸಿದ ಅಧ್ಯಯನವನ್ನು ಶಿಲ್ಪಶಾಸ್ತ್ರವೆಂದು ಗುರುತಿಸಲಾಗುತ್ತದೆ. ಕೆಲವೊಮ್ಮೆ ಶಿಲ್ಪಶಾಸ್ತ್ರವೆಂದಲ್ಲಿ ಮೂರ್ತಿ ಅಥವಾ ಪ್ರತಿಮಾ ರಚನೆ, ಅವುಗಳ ಲಕ್ಷಣವನ್ನು ವಿವರಿಸಲಾಗುತ್ತದೆ. ಮೂರ್ತಿ ಎಂಬ ಪದವು ಆ ಪದಕ್ಕೆ ಪರ್ಯಾಯವಾಗಿ ಬಳಸಿದ ಪದಗಳಾದ ಪ್ರತಿಮಾ, ಬಿಂಬ, ಪ್ರತಿಕೃತಿ, ವಿಗ್ರಹ ಮುಂತಾ ಶಬ್ದಗಳು ಅದೊಂದು ಭೌತಿಕ ವಸ್ತು ಎಂಬಂತೆ ಅರ್ಥಕೊಡುತ್ತದೆ.[೫] ಈ ರೀತಿಯ ಮೂರ್ತಿಶಿಲ್ಪವನ್ನು ಕುರಿತು ಶಾಸ್ತ್ರೀ ಅಧ್ಯಯನ ಮಾಡುವುದಕ್ಕೆ ಮೂರ್ತಿಶಾಸ್ತ್ರ ಅಥವಾ ಪ್ರತಿಮಾಶಾಸ್ತ್ರವೆಂದು ಕರೆಯಲಾಗುತ್ತದೆ. ಮೂರ್ತಿ ಶಿಲ್ಪವನ್ನು ಶಾಸ್ತ್ರೀಯವಾಗಿ ಹೇಳುವ ಶಿಲ್ಪಶಾಸ್ತ್ರ ಗ್ರಂಥಗಳನ್ನೇ ಕಾಣಬಹುದು. ಅವುಗಳಲ್ಲಿ ಕಾಶ್ಯಪಶಿಲ್ಪ, ಮಾನಸಾರ, ಸಮರಾಂಗಣ ಸೂತ್ರಧಾರ, ಶಿಲ್ಪರತ್ನಂ, ಮಯಮತಂ, ಮಯವಾಸ್ತುಶಾಸ್ತ್ರ, ವಿಶ್ವಕರ್ಮವಾಸ್ತುಶಾಸ್ತ್ರ, ಸಕಲಾಧಿಕಾರ, ಕಾಶ್ಯಪ ಸಂಹಿತೆ, ದೇವತಾ ಮೂರ್ತಿ ಲಕ್ಷಣ, ಪ್ರಸಾದ ಮಂಡನ, ರಾಜವಲ್ಲಭದಂತಹ ಇಪ್ಪತ್ತು ಗ್ರಂಥಗಳು ಅತೀ ಪ್ರಮುಖವಾಗಿವೆ.[೬]

ಮೂರ್ತಿಶಿಲ್ಪದ ಕಲ್ಪನೆಗಳು ಭಾರತದಲ್ಲಿ ಮಹೆಂಜೋದಾರದಲ್ಲಿ ದೊರೆತ ಪ್ರಾಣಿಗಳ ಶಿಲ್ಪಗಳು ಹಾಗೂ ನರ್ತನ ಶಿಲ್ಪ, ಮುದ್ರೆಯ ಮೇಲೆ ದೊರೆತ ವಿಗ್ರಹಗಳಲ್ಲಿ ಮುಖ್ಯವಾಗಿ ಪಶುಪತಿ ಶಿವನೆಂದು ಗುರುತಿಸಲಾಗಿರುವ ಧ್ಯಾನಸ್ಥಮೂರ್ತಿಗಳು ಸಿಂಧೂ ನಾಗರಿಕತೆಯಲ್ಲಿ ದೊರೆಯುವ ಪ್ರಮುಖ ಮೂರ್ತಿ ಶಿಲ್ಪಗಳಾಗಿವೆ. ವೇದಗಳ ಕಾಲದಲ್ಲಿ ವಿಗ್ರಹಗಳಿಗೆ ಪ್ರಾಧಾನ್ಯವಿರಲಿಲ್ಲವೆಂದು ಪ್ರಕೃತಿ ಶಕ್ತಿಗಳನ್ನು ಆರಾಧಿಸುತ್ತಿದ್ದರೆಂದು ಹೇಳಲಾಗುತ್ತದೆ. ಆದರೂ ಇಂದ್ರ, ವರುಣ, ರುದ್ರ ಮೊದಲಾದ ದೇವತೆಗಳಿಗೆ ಮನುಷ್ಯಕಾರದ ಕಲ್ಪನೆಯನ್ನು ಕೊಟ್ಟಿರುವುದು ಕಂಡುಬರುತ್ತದೆ,[೭]

ಚಾರಿತ್ರಿಕ ಯುಗಕ್ಕೆ ಬಂದರೆ ಅತ್ಯಂತ ಪ್ರಾಚೀನವಾದ ಶಿಲ್ಪ ಕೃತಿಗಳು ಮೌರ್ಯರ ಕಾಲದವು. ಕಲ್ಲಿನ ಸ್ತಂಭಗಳ ಮೇಲಿನ ವೃಷಭ, ಆನೆ, ಸಿಂಹ, ಕುದುರೆ ಮೊದಲಾದ ಆಕೃತಿಗಳು ಪ್ರಮುಖವಾದವು ಮೌರ್ಯರ ಶಕ್ತಿ ಇಳಿಮುಖವಾಗುತ್ತಿದ್ದಂತೆಯೇ ಶುಂಗರು, ಕುಶಾನರು, ಕಳಿಂಗರು ಶಿಲ್ಪಕಲೆಗೆ ಆಶ್ರಯವನ್ನು ಕೊಟ್ಟರು. ಗುಪ್ತರ ಕಾಲವಂತೂ ಶಿಲ್ಪ, ಸಾಹಿತ್ಯ, ವಿಜ್ಞಾನ ಎಲ್ಲವುಗಳ ದೃಷ್ಟಿಯಿಂದಲು ಸುವರ್ಣಯುಗವೆನ್ನಹುದು.[೮]

ಕರ್ನಾಟಕ ಚಾರಿತ್ರಿಕ ಕಾಲದಲ್ಲಿ ಮೂರ್ತಿಶಿಲ್ಪದ ಬೆಳವಣಿಗೆಯನ್ನು ಗುರುತಿಸುವಾಗ ಶಾತವಾಹನರು, ಕದಂಬರು, ಗಂಗರು, ಬಾದಾಮಿ ಚಾಲುಕ್ಯರು ರಾಷ್ಟ್ರಕೂಟರು, ಕಲ್ಯಾಣಿ ಚಾಲುಕ್ಯರು, ಹೊಯ್ಸಳರು ಮತ್ತು ವಿಜಯನಗರದ ಅರಸರು ಮೂರ್ತಿಶಿಲ್ಪದ ಬೆಳವಣಿಗೆಗೆ

[illegible]

ವಿಶೇಷ ಪ್ರೋತ್ಸಹ ನೀಡಿದರು. ಪ್ರಸ್ತುತ ಅಧ್ಯಾಯದಲ್ಲಿ ಮಧುಗಿರಿ ಪರಿಸರದ ಪ್ರಾಚೀನ ದೇವಾಲಯಗಳಲ್ಲಿ ವಿವಿಧ ಕಾಲಘಟ್ಟಗಳಲ್ಲಿ ನಿರ್ಮಿಸಲಾದ ಮೂರ್ತಿ ಶಿಲ್ಪಗಳನ್ನು ಅಧ್ಯಯನ ಮಾಡಲಾಗಿದೆ.

ವಿಜಯನಗರ ಕಾಲದಲ್ಲಿ ಅವರ ಹಲವು ಆಡಳಿತ ವಿಭಾಗಗಳನ್ನು ಹೊಂದಿರುವ ಮಧುಗಿರಿ ಪರಿಸರದಲ್ಲಿ ಅವರ ಶೈಲಿಯ ದೇವಾಲಯಗಳಿದ್ದು, ಅವುಗಳಲ್ಲಿ ಹಲವು ಮೂರ್ತಿ ಶಿಲ್ಪಗಳು ವಿಜಯನಗರ ಶೈಲಿಯಲ್ಲಿವೆ. ನಂತರದ ಪಾಳೆಯಗಾರರ ಕಾಲದಲ್ಲಿಯೆ ದೇವಾಲಯಗಳು ನಿರ್ಮಾಣಗೊಂಡಿವೆ.

೫.೧. ಶೈವ ಮೂರ್ತಿಶಿಲ್ಪಗಳು:

ಭಾರತದಲ್ಲಿ ಪ್ರಚಲಿತದಲ್ಲಿರುವ ಆರಾಧನ ಪದ್ಧತಿಗಳಲ್ಲಿ ಶಿವನ ಆರಾಧನೆಯು ಪ್ರಮುಖವಾಗಿದೆ. ಹಿಂದೂ ಪರಂಪರೆಯ ಆರಾಧನಾ ಪದ್ಧತಿಯಲ್ಲಿ ಶಿವನ ಪ್ರತಿರೂಪಗಳಾದ ಲಿಂಗ, ನಂದಿಯನ್ನು ಹೆಚ್ಚಾಗಿ ಪೂಜಿಸಲಾಗುತ್ತದೆ. ಹಾಗೂ ಶಿವಸಂಬಂಧಿ ಮೂರ್ತಿಶಿಲ್ಪಗಳಿಗೆ ಶೈವ ಮೂರ್ತಿಶಿಲ್ಪಗಳೆಂದು ಕರೆಯಲಾಗುತ್ತದೆ.

ಮಧುಗಿರಿ ಪರಿಸರದ ಶೈವ ದೇವಾಲಯಗಳಲ್ಲಿ ಶೈವ ಸಂಬಂಧಿ ಮೂರ್ತಿ ಶಿಲ್ಪಗಳಿವೆ. ಅವುಗಳಲ್ಲಿ ಶಿವಲಿಂಗ, ನಂದಿ, ಗಣೇಶ, ಶೈವದ್ವಾರಪಾಲಕರು ಭೈರವ, ವೀರಭದ್ರ ಮೂರ್ತಿ ಶಿಲ್ಪಗಳು ಈ ಕೆಳಗಿನ ರೀತಿಯಲ್ಲಿ ಅಧ್ಯಯನ ಮಾಡಿ ವಿವರಿಸಲಾಗಿದೆ.

ವೀರಭದ್ರ: ಶೈವ ದೇವಾಲಯಗಳಲ್ಲಿ ಇಲ್ಲವೇ ವೀರಭದ್ರನಿಗಾಗಿ ಪ್ರತ್ಯೇಕ ದೇವಾಲಯಗಳನ್ನು ನಿರ್ಮಿಸಿರುವುದನ್ನು ಇಲ್ಲಿ ಕಾಣಬಹುದು. ಕರ್ಮಪುರಾಣ, ವೀರಭದ್ರ ಪುರಾಣ ಮತ್ತು ಭಾಗವತ ಪುರಾಣ. ವೀರಭದ್ರ ಮೂರ್ತಿಯ ಉಗಮ ಮತ್ತು ಹಿನ್ನೆಲೆಯನ್ನು ಉಲ್ಲೇಖಿಸಿವೆ.[೯]

ಪ್ರಸ್ತುತ ಈ ಪ್ರದೇಶದಲ್ಲಿ ದೊರೆತ ವೀರಭದ್ರ ಮೂರ್ತಿ ಶಿಲ್ಪವನ್ನು ಹೀಗೆ ವಿವರಿಸಬಹುದು.

ಹೆಸರು : ವೀರಭದ್ರ ಮೂರ್ತಿಶಿಲ್ಪ

ಸ್ಥಳ : ವೀರಭದ್ರ ದೇವಾಲಯದ ಗರ್ಭಗೃಹದಲ್ಲಿ

ಗ್ರಾಮ : ಸಿದ್ಧಾಪುರ

ಬಳಸಿದ ಶಿಲೆ : ಕಪ್ಪುಶಿಲೆ

ಪೀಠದ ಮೇಲೆ ಸ್ಥಾನಿಕವಾಗಿರುವ ಈ ಮೂರ್ತಿಯು ಕಿರೀಟಧಾರಿಯಾಗಿದ್ದು ಚತುರ್ಭಜಕಾರಿಯಾಗಿದೆ. ಕಠಹಾರ, ವೃತ್ತಕಾರದ ಕಿವಿಯೋಲೆ, ಯಜ್ಞೋಪವೀತ, ಪಾದದವರೆಗೆ ಇಳಿಬಿದ್ದ ವೈಜಯಂತಿಹಾರ, ಕಟಿಬಂಧವನ್ನು ಈ ಮೂರ್ತಿ ಧರಿಸಿದ್ದು, ತ್ರಿಶೂಲ, ಬಿಲ್ಲು,

ಖಡ್ಗ ಮತ್ತು ಖೇಟಕವನ್ನು ಕ್ರಮವಾಗಿ ಮೇಲಿನ ಬಲ ಮತ್ತು ಕೆಳಗಿನ ಎಡಗೈಗಳಲ್ಲಿ ಹಿಡಿದಿದೆ. ಕೈ ಮತ್ತು ಕಾಲ್ಕಡಗದಿಂದ ಅಲಂಕೃತವಾದ ಈ ಮೂರ್ತಿಯ ಹಿಂಭಾಗದಲ್ಲಿ ಸರ್ಪ ತೋರಣ ಮತ್ತು ಪ್ರಭಾವಳಿ ಇದೆ. ಮುಖದಲ್ಲಿ ರೌದ್ರಾವತಾರವಿರುವ ಲಕ್ಷಣಗಳು ಕಾಣುತ್ತವೆ.

ಹೆಸರು : ಗಣಪತಿ ಮೂರ್ತಿಶಿಲ್ಪ

ಸ್ಥಳ : ಮಲ್ಲೇಶ್ವರ ದೇವಾಲಯದ ಮುಖಮಂಟಪದ ಕೋಷ್ಟಕದಲ್ಲಿ

ಗ್ರಾಮ : ಮಧುಗಿರಿ ಪಟ್ಟಣ

ಬಳಸಿದ ಶಿಲೆ : ಬಳಪದ ಶಿಲೆ

ಚತುರ್ಭುಜಧಾರಿಯಾದ ಈ ಮೂರ್ತಿಯು ಕರಂಡಮಕುಟಧಾರಿಯಾಗಿದ್ದು, ಸುಖಾಸನದಲ್ಲಿ ಪೀಠದ ಮೇಲೆ ಕುಳಿತಿದೆ. ಅಗಲವಾದ ಕಿವಿ, ಹಾವಿನ ಉದರ, ಬಂಧ ಮತ್ತು ಹಾವಿನ ನಡುಬಂಧ ಹಾಗೂ ಯಜ್ಞೋಪವೀತಗಳಿವೆ. ಮೇಲಿನ ಕೈಗಳಲ್ಲಿ ಅಂಕುಶ, ಪಾಶ, ಕೆಳಗಿನ ಬಲಗೈಯಲ್ಲಿ ಮೋದಕ ಪಾತ್ರೆ ಇರುವುದು ಈ ಗಣಪತಿಯ ವಿಶೇಷವಾಗಿದೆ. ಎಡಗೈಯಲ್ಲಿ ಇರುವ ಮೋದಕ ಪಾತ್ರೆಯಲ್ಲಿನ ಸಿಹಿಯನ್ನು ಸೊಂಡಿಲಿನಿಂದ ತಿನ್ನುವಂತೆ ತೋರಿಸಲಾಗಿದೆ. ಈ ಮೂರ್ತಿ ಲಕ್ಷಣದ ಆಧಾರದ ಮೇಲೆ ಇದನ್ನು ಕಲ್ಯಾಣ ಚಾಲುಕ್ಯರ ಕಾಲದ್ದೆಂದು ಹೇಳಬಹುದು.

ಹೆಸರು : ಶೈವ ದ್ವಾರಪಾಲಕ ಮೂರ್ತಿಶಿಲ್ಪ

ಸ್ಥಳ : ಮಲ್ಲೇಶ್ವರ ದೇವಾಲಯದ ದ್ವಾರ ಬಾಗಿಲಲ್ಲಿ

ಗ್ರಾಮ : ಮಧುಗಿರಿ ಪಟ್ಟಣ

ಬಳಸಿದ ಶಿಲೆ : ಗ್ರಾನೈಟ್ ಶಿಲೆ

ಮಲ್ಲೇಶ್ವರ ದೇವಾಲಯದ ಮುಖಮಂಟಪದ ದ್ವಾರ ಬಾಗಿಲಲ್ಲಿ ಎರಡು ಶೈವ ಮೂರ್ತಿಗಳಿದ್ದು, ದ್ವಾರದ ಎಡ ಮತ್ತು ಬಲಭಾಗದಲ್ಲಿ ಅವು ಅಲಂಕಾರ ಹಾಗೂ ಸೂಕ್ಷ್ಮತೆಯ ದೃಷ್ಟಿಯಿಂದ ಮಹತ್ವದ ಸ್ಥಾನ ಪಡೆದಿದೆ. ಬಲಭಾಗದ ಮೂರ್ತಿಯು ಚುತುರ್ಭುಜಧಾರಿಯಾಗಿದ್ದು, ದ್ವಿಭಂಗದಲ್ಲಿ ಸ್ಥಾನಿಕವಾಗಿದೆ. ಕಿರೀಟ ಮುಕುಟಧಾರಿಯಾದ ಈ ಮೂರ್ತಿಯ ಕಿವಿಗಳಲ್ಲಿ ಕುಂಡಲಗಳಿವೆ. ನೀಳವಾಧ ಕಣ್ಣು, ಮಂದಹಾಸ ಬೀರುತ್ತಿರುವ ಮುಖ ಜಟೆಯು ಭುಜದ ಮೇಲೆ ಇಳಿಬಿದ್ದಿದೆ. ಕೊರಳಲ್ಲಿ ಕಂಠಿಹಾರ, ಎದೆಯ ಮೇಲೆ ಅನೇಕ ಹಾರಗಳಿದ್ದು, ಯಜ್ಞೋಪವೀತವಿದೆ. ಮೊಣಕಾಲಿನಿಂದ ಕೆಳಗೆ ಇಳಿಬಿದ್ದಿರುವ ಹಾರವಿದೆ. ಮೇಲಿನ ಬಲಗೈಯಲ್ಲಿ ತ್ರಿಶೂಲ, ಎಡಗೈಯಲ್ಲಿ ಡಮರುಗ, ಕೆಳಬಲಗೈ ಅಭಯ ಮುದ್ರೆಯಲ್ಲಿದ್ದು, ಕೆಳಎಡಗೈಯಲ್ಲಿ

[illegible]

[illegible]

[illegible]

[illegible]

ಗದೆ ಇದೆ. ಗದೆ ಮತ್ತು ತ್ರಿಶೂಲಗಳಿವೆ. ನಡುವಿನಲ್ಲಿ ನಡುಬಂದ, ಮಣಿಸರಗಳಿಂದ ಅಲಂಕೃತವಾದ ಉಡುವು, ಎರಡು ಕಾಲಿನ ಮಧ್ಯ ಇಳಿಬಿದ್ದ-ಇಳಿಬಟ್ಟೆ ಇದೆ. ಕಾಲಿನಲ್ಲಿ ಕಾಲ್ಕಡಗ, ಪಾದ ಸರಗಳಿವೆ. ಈ ಎಲ್ಲಾ ಲಕ್ಷಣಗಳನ್ನು ಎಡಭಾಗದ ಮೂರ್ತಿಯು ಹೊಂದಿದ್ದು, ಸಾಮಿಪ್ಯಾತೆಯನ್ನು ಪಡೆದುಕೊಂಡಿದೆಯಾದರೂ ಕೈಯಲ್ಲಿ ಹಿಡಿದಿರುವ ಆಯುಧ ಮತ್ತು ಮುದ್ರೆಯಲ್ಲಿ ಸ್ವಲ್ಪ ವ್ಯತ್ಯಾಸ ಕಾಣಬರುತ್ತದೆ. ಬಲಗಾಲಿನ ಮೇಲೆ ದೇಹದ ಭಾರವನೆಲ್ಲಾ ಬಿಟ್ಟು ಸ್ಥಾನಿಕವಾಗಿರುವ ಈ ಮೂರ್ತಿಯ ಮೇಲಿನ ಎಡಬಲದಲ್ಲಿ ತ್ರಿಶೂಲ ಮತ್ತು ಡಮರಿದೆ. ಕೆಳಬಲಗೈಯಲ್ಲಿ ಗದೆ ಇದ್ದು, ಎಡಗೈ ಅಭಯ ಮುದ್ರೆಯಲ್ಲಿರುವುದು. ಈ ಮೂರ್ತಿಯ ವಿಶೇಷತೆ.

ಹೆಸರು : ಭೈರವ ಮೂರ್ತಿಶಿಲ್ಪ

ಸ್ಥಳ : ಭೈರವ ದೇವಾಲಯದ ಗರ್ಭಗೃಹದಲ್ಲಿದೆ.

ಗ್ರಾಮ : ಸಿದ್ದಾಪುರ

ಬಳಸಿದ ಶಿಲೆ : ಕಪ್ಪುಶಿಲೆ

ಪೀಠದ ಮೇಲೆನಿಂತಿರುವ ಈ ಮೂರ್ತಿಯು ಚರ್ತುಭಜಧಾರಿಯಾಗಿದೆ. ಕೆದರಿದ ಜಟೆ, ಸರ್ಪಕುಂಡಲ, ಭುಜಕೀರ್ತಿ, ಕೇಯೂರ, ಕೊರಳಹಾರ, ಎದೆಪಟ್ಟೆ, ಯಜ್ಞೋಪವೀತ, ರುಂಡಮಾಲೆ, ಕೈಗಡಗಗಳಿಂದ ಅಲಂಕೃತವಾದ ಈ ಮೂರ್ತಿಶಿಲ್ಪವು ನಗ್ನವಾಗಿದ್ದು, ತ್ರಿಶೂಲ ಮತ್ತು ಡಮರುಗಳನ್ನು ಮೇಲಿನ ಎಡ ಮತ್ತು ಬಲಗೈಗಳಲ್ಲಿ ಹಿಡಿದಿದೆ. ತ್ರಿಶೂಲ ಮತ್ತು ಡಮರುಗದ ಮೇಲೆ ತಲಾ ಒಂದೊಂದು ಶಿರಸ್ಸು ಇವೆ. ಕೆಳಗಿನ ಎಡಗೈಯಲ್ಲಿ ಕಾಪಾಲವಿದೆ. ಕಾಲ್ಗಡಗಧರಿಸಿದೆ ಈ ಮೂರ್ತಿಯು ಪಾದರಕ್ಷೆಗಳಿಂದ ಅಲಂಕಾರಯುಕ್ತವಾಗಿದ್ದು, ಸುತ್ತಲೂ ಪ್ರಭಾವಳಿ ಇದೆ. ಕಾಲಿನ ಎಡಭಾಗದಲ್ಲಿ ನಾಯಿಯೊಂದು ತನ್ನ ಹಿಂದಿನ ಕಾಲುಗಳ ಮೇಲೆ ನಿಂತು ತನ್ನ ಮುಂದಿನ ಕಾಲುಗಳನ್ನು ಜೋಡಿಸಿ ನಮಿಸುವ ರೀತಿಯಲ್ಲಿದೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದು ವಿಜಯನಗರ ಕಾಲದ್ದಾಗಿದೆ.

ಹೆಸರು : ಹರಿಹರೇಶ್ವರ ಮೂರ್ತಿಶಿಲ್ಪ

ಸ್ಥಳ : ಹರಿಹರೇಶ್ವರ ದೇವಾಲಯದ ಗರ್ಭಗೃಹದಲ್ಲಿದೆ.

ಗ್ರಾಮ : ಹರಿಹರರೊಪ್ಪ

ಬಳಸಿದ ಶಿಲೆ : ಬಳಪದ ಶಿಲೆ

ಪೀಠದ ಮೇಲೆ ಸಮಭಂಗಿಯಲ್ಲಿ ನಿಂತಿರುವ ಈ ಮೂರ್ತಿ ಕಿರೀಟಧಾರಿಯಾಗಿರುವುದು ಈ ಮೂರ್ತಿಯ ವಿಶೇಷ. ಚತುರ್ಭುಜಧಾರಿಯಾದ ಈ ಮೂರ್ತಿಯು ಭುಜಕೀರ್ತಿ, ಕೇಯೂರ,

ಕೈಕಡಗಳನ್ನು ಧರಿಸಿದೆ. ಬಲಮೇಲಿನ ಕೈಯಲ್ಲಿ ತ್ರಿಶೂಲ ಹಿಡಿದು ಕೆಳಕೈ ಅಭಯ ಮುದ್ರೆಯಲ್ಲಿದೆ. ಎಡಕಿವಿಯಲ್ಲಿ ಮಕರ ಕುಂಡಲವಿದ್ದು, ಮೇಲಿನ ಎಡಗೈಯಲ್ಲಿ ಗದೆ, ಕೆಳ ಎಡಗೈಯಲ್ಲಿ ಚಕ್ರವಿದೆ. ಕಂಠಭರಣ ಸೇರಿದಂತೆ ಕೊರಳಲ್ಲಿ ಅನೇಕ ಹಾರಗಳಿದ್ದು, ಇದರಲ್ಲಿ ವೈಜಯಂತಿ ಮಾಲೆಯೂ ಸೇರಿದೆ. ಉದರಬಂಧ ಹಾಗೂ ನಡುಬಂಧವಿದ್ದು, ಪಂಚೆ ಉತ್ತಮ ರೀತಿ ಅಲಂಕಾರವನ್ನು ಹೊಂದಿದೆ. ನಡುವಿನ ಇಳಿವಸ್ತ್ರ ಎರಡು ಕಾಲಿನ ಮಧ್ಯದಿಂದ ಇಳಿಬಿದ್ದಿದೆ. ಕಾಲಿನಲ್ಲಿ ಕಾಲ್ಕಡಗಗಳಿವೆ. ಮೂರ್ತಿಯ ಬಲಗಾಲಿನ ಬಳಿ ಕಿರೀಟ ಮುಖಿಯಾದ ಅಲಂಕೃತಳಾದ ಪಾರ್ವತಿ ದ್ವಿಭಂಗದಲ್ಲಿ ನಿಂತಿದ್ದು, ಕೈಗಳಲ್ಲಿ ಪದ್ಮ ಮತ್ತು ಫಲಗಳನ್ನು ಹಿಡಿದಿದ್ದಾಳೆ, ಎಡಗಾಲಿನ ಬಳಿ ಕಿರೀಟ ಮುಖಿಯಾದ ಹಾಗೂ ಅಲಂಕೃತ ಲಕ್ಷ್ಮೀ ದ್ವಿಭಂಗದಲ್ಲಿ ನಿಂತಿದ್ದಾಳೆ, ಆಕೆಯ ಬಲಗೈ ಅಭಯ ಮುದ್ರೆಯಲ್ಲಿದ್ದು, ಎಡಗೈ ಕಟಿ ಅವಲಂಬಿತವಾಗಿದೆ. ಸುತ್ತಲೂ ಸುಂದರ ತೋರಣಯುಕ್ತ ಪ್ರಭಾವಳಿ ಇದೆ. ಪೀಠದಲ್ಲಿ ಹರನ ಭಾಗಕ್ಕೆ (ಬಲಕ್ಕೆ) ನಂದಿ ಇದ್ದು, ಅದೇ ರೀತಿ ಹರಿಯ (ಎಡಕ್ಕೆ) ಭಾಗದಲ್ಲಿ ಕೆಳಗೆ ಗರುಡನನ್ನು ಚಿತ್ರಿಸಲಾಗಿದೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದು ಕಲ್ಯಾಣಿ ಚಾಲುಕ್ಯರ ಕಾಲಕ್ಕೆ ಸೇರಿದೆ ಎಂದು ಹೇಳಬಹುದು.

೫.೨. ವೈಷ್ಣವ ಮೂರ್ತಿಶಿಲ್ಪಗಳು:

ಮಧುಗಿರಿ ಪರಿಸರವು ವೈಷ್ಣವ ಪಂಥಗಳಿಗೆ ಆಶ್ರಯವನ್ನು ನೀಡಲಾಗಿತ್ತು ಎಂಬುದಕ್ಕೆ ಇಲ್ಲಿರುವ ಈ ಪಂಥದ ದೇವಾಲಯಗಳು ಮೂರ್ತಿಶಿಲ್ಪಗಳು ಇತರೆ ಶಿಲ್ಪಾವಿಶೇಷಗಳು ಮತ್ತು ಶಾಸನಗಳೇ ಪ್ರಮುಖ ಆಧಾರಗಳಾಗಿವೆ. ಮಧುಗಿರಿ ಪರಿಸರದ ವೈಷ್ಣವ ಮೂರ್ತಿಶಿಲ್ಪಗಳೆಂದರೆ ತುಂಗೋಟಿಯ ರಂಗನಾಥ ಮಧುಗಿರಿ ಪಟ್ಟಣದ ವೆಂಕಟರಮಣ, ಗೋಪಾಲಕೃಷ್ಣ ಮೂರ್ತಿ ಶಿಲ್ಪಗಳು ಅದರೊಂದಿಗೆ ಪಾಳೆಯಗಾರರ ಕಾಲದ ಹಲವು ದೇವಾಲಯಗಳಲ್ಲಿ ಕಂಡು ಬಂದಿರುವ ಅಂಜನೇಯ ಮೂರ್ತಿ ಶಿಲ್ಪಗಳು ಇವುಗಳೆಲ್ಲ ವೈಷ್ಣವ ಸಂಬಂಧಿ ಮೂರ್ತಿಶಿಲ್ಪಗಳೆಂದು ಹೇಳಬಹುದು.

ಹೆಸರು	: ರಂಗನಾಥ ಮೂರ್ತಿಶಿಲ್ಪ
ಸ್ಥಳ	: ರಂಗನಾಥ ದೇವಾಲಯದ ಗರ್ಭಗೃಹದಲ್ಲಿದೆ.
ಗ್ರಾಮ	: ತುಂಗೋಟಿ
ಬಳಸಿದ ಶಿಲೆ	: ಕಪ್ಪುಶಿಲೆ

ಈ ಮೂರ್ತಿ ಕಿರೀಟ ಮುಕುಟಧಾರಿಯಾಗಿದ್ದು, ಸಮಭಂಗಿಯಲ್ಲಿ ನಿಂತಿದೆ. ಕಿವಿಯಲ್ಲಿ ಮಕರ ಕುಂಡಲ, ಕೊರಳಲ್ಲಿ ಮತ್ತು ಎದೆಯಲ್ಲಿ ಹಾರಗಳಿವೆ. ಚತುರ್ಭಜಧಾರಿಯಾದ ಈ

ಮೂರ್ತಿಯ ಕೈಗಳಲ್ಲಿ ಕಡಗ ಕೊಯೂರ, ಭುಜಕೀರ್ತಿಗಳಿವೆ. ಮೇಲಿನ ಕೈಗಳಲ್ಲಿ ಶಂಕ ಮತ್ತು ಚಕ್ರಗಳಿದ್ದು, ಕೆಳಗಿನ ಬಲಗೈವರದ ಮುದ್ರೆಯಲ್ಲಿದ್ದು, ಎಡಗೈಯಲ್ಲಿ ಗದೆ ಇದೆ. ಮೇಲ್ಗಡೆಯಿಂದ ಇಳಿಬಿದ್ದ ವೈಜಯಂತಿ ಮಾಲೆ ಹಾಗೂ ಪಂಚೆ ಇದೆ. ಈ ಮೂರ್ತಿಯ ಎಡ ಬಲದಲ್ಲಿ ಶ್ರೀದೇವಿ ಮತ್ತು ಭೂದೇವಿಯರಿದ್ದು ಈ ಎರಡು ಮೂರ್ತಿಗಳನ್ನು ಕಾಣಬಹುದು. ಇವೆರಡು ಮೂರ್ತಿಗಳು ಕರಂಡ ಮಕುಟಧಾರಿಯಗಿದ್ದು, ಕಿವಿಯಲ್ಲಿ ಕುಂಡಲ, ಕೊರಳ ಮತ್ತು ಎದೆಯಲ್ಲಿ ವಿವಿಧ ಬಗೆಯ ಹಾರಗಳು ಕುಂಚಬಂಧ, ಭುಜಕೀರ್ತಿ, ಕೇಯುರ, ನಡುಬಂಧ, ಇವೆ. ದ್ವಭುಜಧಾರಿಯಾದ ಈ ಮೂರ್ತಿಗಳು (ಬಲಗಡೆಯ ಮೂರ್ತಿ) ಬಲಗೈ ಇಳಿಬಿಟ್ಟು, ಎಡಗೈಯಲ್ಲಿ ಪಬ್ಮ ಹಿಡಿದಿದ್ದು, ಎಡಗಡೆಯ ಮೂರ್ತಿಯು ಬಲಗೈಯಲ್ಲಿ ಪದ್ಮ ಹಿಡಿದಿದೆ. ಎಡಗೈ ಕಟ್ಬಾಲಂಬಿತವಾಗಿದೆ.

ಅಲಂಕಾರಿಕ ದೃಷ್ಟಿಯಿಂದ ಮಹತ್ವದ ಸ್ಥಾನ ಪಡೆದ ಈ ಮೂರ್ತಿಗಳಿದ್ದು, ವಿಜಯನಗರ ಕಾಲದ ಮೂರ್ತಿಶಿಲ್ಪ ಲಕ್ಷಣಗಳು ಇವೆ ಎಂದು ಹೇಳಬಹುದು. ಕಾಲಮಾನ ಸು.ಕ್ರಿ.ಶ.೧೬-೧೭ನೇ ಶತಮಾನ.

ಹೆಸರು : ವೇಣುಗೋಪಾಲ ಮೂರ್ತಿಶಿಲ್ಪ

ಸ್ಥಳ : ವೇಣುಗೋಪಾಲ ದೇವಾಲಯದ ಗರ್ಭಗೃಹದಲ್ಲಿದೆ.

ಗ್ರಾಮ : ಸಿದ್ದಾಪುರ

ಬಳಸಿದ ಶಿಲೆ : ಬಳಪದ ಕಲ್ಲು

ಪೀಠದ ಮೇಲೆ ಸ್ಥಾನಿಕವಾಗಿರುವ ಈ ಮೂರ್ತಿಗೆ ಎರಡು ಕೈಗಳು ಇದ್ದು, ಕಿರೀಟ ಮಕುಟಧಾರಿಯಾಗಿದೆ. ಕಿವಿಯಲ್ಲಿ ಕುಂಡಲಗಳಿದ್ದು, ಕೈಗಳಲ್ಲಿ ವೇಣು(ಕೊಳಲು)ವನ್ನು ಹಿಡಿದು ನುಡಿಸುವಂತಿದೆ. ಕೈಗಳಲ್ಲಿ ಕಡಗ, ಕೇಯೂರಗಳಿದ್ದು, ಕೊರಳಿನಲ್ಲಿ ವಿವಿಧ ಬಗ್ಗೆ ಹಾರಗಳಿವೆ. ಯಜ್ಞೋಪವೀತ ಹಾಗೂ ವೈಜಯಂತಿ ಹಾರ ಇವೆ. ನಡುವಿನಲ್ಲಿ ನಡುಬಂಧವಿದ್ದು, ಮಣಿಸರಗಳಿಂದ ಅಲಂಕರಿಸಲಾದ ಧೋತಿಯೂ ಇದೆ. ಕಾಲಿನಲ್ಲಿ ಕಡಗ, ಪಾದಸರಗಳಿದ್ದು, ಕಾಲಿನ ಬಳಿ ಚಾಮಧಾರಿಣಿಯರಿದ್ದು, ಸುತ್ತಲೂ ಅಲಂಕಾರಯುಕ್ತ ಪ್ರಭಾವಳಿ ಇದೆ. ಈ ಮೂರ್ತಿಯ ಶೈಲಿಯನ್ನು ಆಧರಿಸಿ ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದು.

ಹೆಸರು : ವೆಂಕಟರಮಣ ಮೂರ್ತಿಶಿಲ್ಪ

ಸ್ಥಳ : ವೆಂಕಟರಮಣ ದೇವಾಲಯದ ಗರ್ಭಗೃಹದಲ್ಲಿದೆ.

ಗ್ರಾಮ : ಮಧುಗಿರಿ ಪಟ್ಟಣ

ಬಳಸಿದ ಶಿಲೆ : ಬಳಪದ ಶಿಲೆ

ಪೀಠದ ಮೇಲೆ ಸಮಭಂಗಿಯಲ್ಲಿ ಸ್ಥಾನಿಕವಾಗಿರುವ ಈ ಮೂರ್ತಿಯು ಕಿರೀಟ ಧಾರಿಯಾಗಿದ್ದು, ಚತುರ್ಭುಜಕಾರಿಯಾಗಿದೆ. ಈ ಮೂರ್ತಿಯ ಕೈಗಳಲ್ಲಿ ಕಡಗ, ಕೇಯೂರ, ಭುಜಕೀರ್ತಿಗಳಿವೆ. ಮೇಲಿನ ಕೈಗಳಲ್ಲಿ ಚಕ್ರ ಮತ್ತು ಶಂಕಗಳಿದ್ದು, ಕೆಳಗಿನ ಬಲ ಮತ್ತು ಎಡಗೈಗಳು ಅಭಯ ಹಸ್ತಗಳು ಇವೆ. ಕೊರಳಿನಲ್ಲಿ ಕಂಠಹಾರ, ಮಣಿಸರ, ಯಜ್ಞೋಪವೀತ, ರತ್ನಮಾಲೆ ಇವೆ. ನಡುವಿನಲ್ಲಿ ನಡುಬಂಧವಿದ್ದು, ಅಲಂಕರಿಸಲಾದ ಧೋತಿಯೂ ಇದೆ. ಕಾಲಿನಲ್ಲಿ ಕಡಗ, ಪಾದ ಸರಗಳಿವೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದು ಕಲ್ಯಾಣಿ ಚಾಲುಕ್ಯರ ಕಾಲದ್ದೆಂದು ಹೇಳಬಹುದು.

೫.೩. ಶಾಕ್ತ ಮೂರ್ತಿ ಶಿಲ್ಪಗಳು

ಶಕ್ತ ದೇವಾತೆಗಳ ಮೂರ್ತಿಶಿಲ್ಪಗಳನ್ನು ಶಾಕ್ತಮೂರ್ತಿ ಶಿಲ್ಪಗಳೆಂದು ಕರೆಯಲಾಗುವುದು. ಸ್ತ್ರೀದೇವತೆಯರನ್ನು ಶಕ್ತಿ ದೇವತೆಯರೆಂದು ಆರಾಧನೆ ಮಾಡುವರು. ಮಧುಗಿರಿ ಪರಿಸರದಲ್ಲಿ ಶಾಕ್ತ ದೇವಾಲಯಗಳಲ್ಲಿ ಶಾಕ್ತ ಮೂರ್ತಿ ಶಿಲ್ಪಗಳಿವೆ. ಅವುಗಳಲ್ಲಿ ಭದ್ರಕಾಳಿ, ಪಾರ್ವತಿ ಪದ್ಮಾವತಿ, ಅಲುವೇಲುಮಂಗಮ್ಮ, ಮೂರ್ತಿಶಿಲ್ಪಗಳು ಕಂಡುಬರುತ್ತವೆ.

ಭದ್ರಕಾಳಿ:

ಭದ್ರಕಾಳಿಯನ್ನು ವೀರಭದ್ರನೊಡನೆ ಗುರುತಿಸಲಾಗುತ್ತದೆ. ದಕ್ಷಯಜ್ಞ ಎಂಬುವನ್ನು ನಾಶಗೊಳಿಸಲು ಶಿವ ವೀರಭದ್ರನನ್ನು ಸೃಷ್ಟಿಸಿದಾಗ ಪಾರ್ವತಿ ಈಕೆಯನ್ನು ಸೃಷ್ಟಿಸಿ ವೀರಭದ್ರನಿಗೆ ಸಹಾಯಮಾಡಲು ಆತನ ಜೊತೆಗೆ ಕಳಿಸುತ್ತಾಳೆ. ಶ್ರೀತತ್ವ ನಿಧಿ ಗ್ರಂಥವು ಆಕೆಯ ಬಗೆಗಿನ ವಿವರಣೆಗಳನ್ನು ನೀಡುತ್ತದೆ.[೧೦]

ಹೆಸರು : ಭದ್ರಕಾಳಿ

ಸ್ಥಳ : ಭದ್ರಕಾಳಿ ದೇವಾಲಯದ ಗರ್ಭಗೃಹದಲ್ಲಿದೆ.

ಗ್ರಾಮ : ಸಿದ್ದಾಪುರ

ಬಳಸಿದ ಶಿಲೆ : ಕಪ್ಪುಶಿಲೆ

ಪೀಠದ ಮೇಲೆ ಕುಳಿತಿರುವ ಈ ಮೂರ್ತಿಯು ಕಿರೀಟ ಮುಕುಟಧಾರಿಯಾಗಿದ್ದು, ಕಿವಿಯಲ್ಲಿ ಚಕ್ರ ಕುಂಡಲಗಳಿವೆ. ಕಂಠಾಭರಣ, ಕೊರಳಹಾರ, ಕುಚಬಂಧವಿದೆ ಚತುರ್ಭುಜ ಧಾರಿಯಾದ ಈ ಮೂರ್ತಿಯ ಕೈಗಳಲ್ಲಿ ಕೈಕಡಗ, ಕೇಯೂರಗಳಿವೆ. ಈ ಮೂರ್ತಿಯ ಮೇಲಿನ ಕೈಗಳಲ್ಲಿ ಡಮರು, ತ್ರಿಶೂಲ, ಕೆಳಗಿನ ಕೈಗಳಲ್ಲಿ ಖಡ್ಗ ಹಾಗೂ ಕಪಾಲಗಳಿವೆ. ನಡುವಿನಲ್ಲಿ ಕಟಿಬಂಧವಿದ್ದು, ಕಾಲಿನಲ್ಲಿ ಕಾಲ್ಕಡಗಳನ್ನು ಧರಿಸಿದ ಈ ಮೂರ್ತಿಯ ವಸ್ತ್ರಧಾರಣೆ,

ಆಭರಣಗಳ ಅಲಂಕಾರಧಾರಣಾ ಮುದ್ರೆ ಇದು. ಈ ಶಿಲ್ಪ ಪಾಳೆಯಗಾರ ಕಾಲದ ಶಿಲ್ಪ ಎಂದು ಹೇಳಬಹುದು.

ಹೆಸರು : ಅಲುಮೇಲು ಮಂಗಮ್ಮ

ಸ್ಥಳ : ಅಲುಮೇಲು ಮಂಗಮ್ಮ ದೇವಾಲಯದ ಗರ್ಭಗೃಹದಲ್ಲಿದೆ.

ಗ್ರಾಮ : ಮಧುಗಿರಿ ಪಟ್ಟಣ

ಬಳಸಿದ ಶಿಲೆ : ಕಪ್ಪುಶಿಲೆ

ಪೀಠದ ಮೆಲೆ ಪದ್ಮಾಸನದಲ್ಲಿ ಕುಳಿತಿರುವ ಈ ಮೂರ್ತಿ ಚತುರ್ಭುಜಧಾರಿಯಾಗಿದ್ದು, ಮೇಲಿನ ಕೈಗಳಲ್ಲಿ ಬಲ ಮತ್ತು ಎಡಗೈಯಲ್ಲಿ ಕಮಲಗಳಿವೆ. ಕೆಳಗಿನ ಬಲಗೈ ಅಬಯಹಸ್ತವಾಗಿದೆ. ಎಡಗೈ ಸಾಧಾರಣ ಹಸ್ತವಿದೆ. ಕಿವಿಯಲ್ಲಿ ಪತ್ರ ಕುಂಡಲಗಳಿವೆ. ಕಂಠಾಭರಣ, ಕೊರಳಾಹಾರ ಮತ್ತು ಎರಡು ಕಾಲಿನ ಮಧ್ಯೆ ಇಳಿಬಿದ್ದ ವಸ್ತ್ರ ಇದ್ದು, ಕಾಲ್ಲಿನಲ್ಲಿ ಕಾಲ್ಕಡಗ ಮತ್ತು ಪಾದಸರಗಳಿವೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದು ವಿಜಯನಗರ ಕಾಲದ್ದೆಂದು ಹೇಳಬಹುದು.

ಹೆಸರು : ಪಾರ್ವತಿ

ಸ್ಥಳ : ಪಾರ್ವತಿ ದೇವಾಲಯದ ಗರ್ಭಗೃಹದಲ್ಲಿದೆ.

ಗ್ರಾಮ : ಮಧುಗಿರಿ ಪಟ್ಟಣ

ಬಳಸಿದ ಶಿಲೆ : ಕಪ್ಪುಶಿಲೆ

ಪೀಠದ ಮೇಲೆ ಲಲಿತಾಸಾನದಲ್ಲಿ ಕುಳಿತಿರುವ ಈ ಮೂರ್ತಿ ಕರಂಡ ಕುಮುಟ ಧರಿಸಿದ್ದು, ಕಿವಿಯಲ್ಲಿ ಅಗಲವಾದ ಪತ್ರ ಕುಂಡಲಗಳಿವೆ. ಕಂಠಾಭರಣ, ಕೊರಳಹಾರ, ವೈಜಯಂತಿಹಾರ, ಕೊರಳಿನಲ್ಲಿ ಹಾರಗಳಿವೆ. ಚರ್ತುಭುಜಧಾರೆಯಾದ ಈ ಮೂರ್ತಿ ಭುಜಕೀರ್ತಿ, ಕೇಯಾರ, ಕೈಕಡಗಳಿದ್ದು, ಮೇಲಿನ ಕೈಗಳಲ್ಲಿ ತ್ರಿಶೂಲ, ಡಮರುಗ, ಕೆಳಗಿನ ಬಲಗೈಯಲ್ಲಿ ಕಮಲ, ಎಡಗೈಯಲ್ಲಿ ಫಲವನ್ನು ಹಿಡಿದಂತೆ ಕೆತ್ತಲಾಗಿದೆ. ಕಟಿಬಂಧ ಹಾಗೂ ಎರಡು ಕಾಲಿನ ಮಧ್ಯ ಇಳಿಬಿದ್ದ ವಸ್ತ್ರ ಇದ್ದು, ಕಾಲಿನಲ್ಲಿ ಕಾಲ್ಕಡಗ ಮತ್ತು ಪಾದಸರಗಳಿವೆ. ಪಾರ್ವತಿ ಮೂರ್ತಿಶಿಲ್ಪ ಹಿಂದೆ ಸುದರ್ಶನ ಚಕ್ರವಿದೆ. ಈ ಮೂರ್ತಿಯ ಲಕ್ಷಣಗಳು ಆಧಾರದ ಮೇಲೆ ವಿಜಯನಗರ ಕಾಲದ್ದೆಂದು ಹೇಳಬಹುದು.

[illegible]

[illegible]

[illegible]

ಹೆಸರು : ಪದ್ಮಾವತಿ

ಸ್ಥಳ : ಪದ್ಮಾವತಿ ದೇವಾಲಯದ ಗರ್ಭಗೃಹ

ಗ್ರಾಮ : ಮಧುಗಿರಿ ಪಟ್ಟಣ

ಬಳಸಿದ ಶಿಲೆ : ಕಪ್ಪುಶಿಲೆ

ಪೀಠದ ಮೇಲೆ ಲಲಿತಾಸಾನದಲ್ಲಿ ಕುಳಿತಿರುವ ಈ ಮೂರ್ತಿ ಚರ್ತುಭುಜಧಾರಿಯಾಗಿದ್ದು, ಕಿರೀಟ ಮಕುಟಧಾರಿಯಾಗಿದೆ. ಮೇಲಿನ ಕೈಗಳಲ್ಲಿ ಕಮಲಗಳು ಇವೆ. ಕೆಳಗಿನ ಬಲ ಮತ್ತು ಎಡಗೈಗಳು ಅಭಯ ಹಸ್ತಗಳು ಇವೆ. ಕಿವಿಯಲ್ಲಿ ಕರ್ಮಕುಂಡಲಿಗಳಿವೆ. ಕಂಠಾಭರಣ, ಕೊರಳಹಾರ, ಕೈಗಳಿಗೆ ಬಳೆಗಳು ಹಾಗೂ ಎಡಕಾಲಿನ ಮಧ್ಯೆ ಇಳಿಬಿದ್ದ ವಸ್ತ್ರ ಇದ್ದು, ಕಾಲಿನಲ್ಲಿ ಕಾಲ್ಗಡಗ ಮತ್ತು ಪಾದರಸಗಳಿವೆ. ಈ ಮೂರ್ತಿಯ ಲಕ್ಷಣಗಳ ಆಧಾರದ ಮೇಲೆ ಇದು ವಿಜಯನಗರ ಕಾಲದ್ದೆಂದು ಹೇಳಬಹುದು.

ಅಡಿ ಟಿಪ್ಪಣಿಗಳು.

೧. ತಿಪ್ಪೇರುದ್ರ ಸ್ವಾಮಿ ಎಚ್. ಕರ್ನಾಟಕ ಸಂಸ್ಕೃತಿ ಸಮೀಕಕ್ಷೇ. ಪು. ೫೨೩.

೨. ಕರಗುಂದ ಟಿ. ಪಂಕಜಾಕ್ಷ. ಶಿಲ್ಪ ಸೌಂದರ್ಯ, ಪು. ೩

೩. ಅದೇ ಪು. ೩

೪. ಜಯ್ಯಣ್ಣ. ಯು. ಮೊಳಕಾಲ್ಮೂರು ತಾಲ್ಲೂಕಿನ ಪುರಾತತ್ವೀಯ ಪರಿಸರ (ಅಪ್ರಟಿತ ಪಿ.ಹೆಚ್.ಡಿ. ಮಹಾಪ್ರಬಂದ)ಪು.೧೯೯

೫. ದತ್ತಾತ್ರೇಯ ಜಿ.ಕುಲಕರ್ಣಿ, ಹಾವೇರಿ ಜಿಲ್ಲೆಯ ತ್ರಿಕೂಟ ದೇವಾಲಯಗಳು(ಅಪ್ರಕಟಿತ ಪಿ.ಹೆಚ್.ಡಿ. ಮಹಾಪ್ರಬಂದ)ಪು೨೩೦

೬. ಕರುಗುಂದ ಟಿ.ಪಂಕಜಾಕ್ಷ, ಪೂರ್ವೋಕ್ತ, ಪು.೩

೭. ತಿಪ್ಪೇರುದ್ರ ಸ್ವಾಮಿ ಎಚ್. ಪೂರ್ವೋಕ್ತ, ಪು. ೬೨೫

೮. ಅದೇ ಪು. ೬೨೬

೯. ರಾಮಚಂದ್ರರಾವ್ ಎಸ್.ಕೆ. ಪ್ರತಿಮಾಕೋಶ, ಸಂ.೪. ೧೯೮೨, ಪು. ೧೫೦.

೧೦. ಗೋಪಿನಾಥರಾವ್ ಟಿ.ಎ. ಎಲಿಮೆಂಟ್ಸ್ ಆಫ್ ಹಿಂದೂ ಐಕ್ನೋಗ್ರಫಿ, ಸಂ. ೨, ಭಾಗ–೧, ಪು.೧೮೬

ಅಧ್ಯಾಯ - ೬

ದೇವಾಲಯಗಳಿಗೆ ಸಂಬಂಧಿಸಿದ ಶಾಸನಗಳು

ಅಧ್ಯಾಯ – ೬

ದೇವಾಲಯಗಳಿಗೆ ಸಂಬಂಧಿಸಿದ ಶಾಸನಗಳು

ಪ್ರಾಚೀನ ಕಾಲದ ಚರಿತ್ರೆ ಮತ್ತು ಸಂಸ್ಕೃತಿಯನ್ನು ನಾವು ಸರಿಯಾದ ಕ್ರಮದಲ್ಲಿ ತಿಳಿದುಕೊಳ್ಳಲು ಮೊದಲು ಅವಲಂಬಿಸಬೇಕಾಗಿದ್ದು, ಶಾಸನಗಳನ್ನು ಎಂದು ಹೇಳಬಹುದು. "ಇತಿಹಾಸ ಪ್ರಮಾಣ ಭೂತವಾದ ಆಧಾರಗಳೆಂದರೆ ಶಾಸನಗಳು, ಕನ್ನಡ ಸಾಹಿತ್ಯ, ಕಲಾಕೃತಿಗಳೂ, ನಾಣ್ಯಗಳು ಪರದೇಶದ ಯಾತ್ರಿಕರ ವರದಿಗಳು ಭೂಮಿಯ ಅಗೆತದಿಂದ ಹೊರಬಿದ್ದ ಅಂಶಗಳು ಇವೆಲ್ಲವೂ ಸಹಾಯಕವಾದರೂ, ಕರ್ನಾಟಕದ ರಾಜಕೀಯ ಮತ್ತು ಸಾಮಾಜಿಕ ಪರಂಪರೆಯನ್ನು ತಿಳಿಯವಂತಾದುದು ಮುಖ್ಯವಾಗಿ ಶಾಸನಗಳಿಂದಲೇ ಇತರ ಆಧಾರಗಳು ತುಂಬಿಕೊಡಲಾರದ ಕೆಲವು ಅಂಶಗಳನ್ನು ಇಲ್ಲಿನ ಶಾಸನ ಸಂಪತ್ತು ಒದಗಿಸಿಕೊಟ್ಟಿವೆ."[೧] ಶಾಸನವೆಂಬ ಪದವನ್ನು 'Inscription' ಎಂಬ ಆಂಗ್ಲ ಪದಕ್ಕೆ ಸಂವಾದಿಯಾಗಿ ವಿದ್ವಾಂಸರು ಬಳಸುತ್ತಾರೆ. Inscription ಎಂದರೆ ಬಹುಕಾಲ ನಿಲ್ಲಬಲ್ಲ, ಶಾಶ್ವತವಾಗಿ ಉಳಿಯಬಲ್ಲ ವಸ್ತುಗಳ ಮೇಲೆ ಕೊರೆಯಲ್ಪಟ್ಟ ಬರಹ ಎಂದು ಅರ್ಥ ನೀಡುತ್ತಾರೆ."[೨] ತಾಳೇಗರಿ ಭೂರ್ಜ್ವಪತ್ರ ಕಾಗದ ಮುಂತಾದವುಗಳ ಮೇಲೆ ಕಂಡು ಬರುವ ಬರಹಗಳನ್ನು ಬಿಟ್ಟು, ಬಹುಕಾಲ ಉಳಿಯಿವ ಸಾಮಾಗ್ರಿಯ ಮೇಲೆ ಕೆತ್ತಿರುವ ಬರಹಗಳನ್ನು ಶಾಸನಗಳೆಂದು ಸ್ಥೂಲವಾಗಿ ಕರೆಯಬಹುದು."[೩] ಭಾರತೀಯ ಬರಹದಲ್ಲಿ ಶಾಸನ ಎಂಬ ಪದಕ್ಕೆ ವಿಶಾಲ ಅರ್ಥವನ್ನು ನೀಡುವುದರ ಸಲುವಾಗಿ ಅವುಗಳ ಆಂತರಿಕ ವಿಷಯಗಳನ್ನು ಗಮನದಲ್ಲಿರಿಸಿಕೊಂಡು ವ್ಯಾಖ್ಯಾನಿಸಿದರು. ಹೀಗಾಗಿ ಶಾಸನವೆಂಬುದು ಆಜ್ಞೆ, ಪ್ರಜೆಗಳೆಲ್ಲರೂ ಪಾಲಿಸಬೇಕಾದ ಒಂದು ಸಂಹಿತೆ, ಸಂವಿಧಾನ, ನೀತಿ ನಿಯಮಗಳನ್ನು ಉಲ್ಲಂಘಿಸಿದರೆ ಶಿಕ್ಷೆಗೆ ಗುರಿಯಾಗುತ್ತಾರೆಂಬ ಎಚ್ಚರಿಕೆಯ ನೀತಿಸಂಹಿತೆಗಳು

ಎಂದು ಅರ್ಥ ಪಡೆದುಕೊಂಡಿತು. ಶಾಸನಗಳಿಗೆ ಧರ್ಮಲಿಪಿಗಳೆಂದು ಕರೆಯುತ್ತಾರೆ. ಅಶೋಕನು ಹಾಕಿದ ಶಾಸನಗಳನ್ನು ಧರ್ಮಲಿಪಿಗಳೆಂದು ಕರೆದುಕೊಂಡಿದ್ದಾನೆ. ಅಂದರೆ Inscription ಎಂಬುದರಿಂದ ಹೊರಟ ಕೆತ್ತು, ಕೊರೆ, ಕಂಡರಿಸು ಎಂಬ ಅರ್ಥಕ್ಕಿಂತ ಭಿನ್ನವಾಗಿ ಆಡಳಿತ, ಪ್ರಭುತ್ವ, ಆಜ್ಞೆ, ಅಪ್ಪಣೆ, ಕಾನೂನು, ಕಟ್ಟಳೆ, ವಿಧಿ ನಿಗ್ರಹ, ಹಿಡಿತ, ಶಿಲಾಲೇಖ, ತಾಮ್ರಲೇಖ, ದಾಖಲೆ, ಶೀಕ್ಷೆ, ದಂಡನೆ, ಶಾಸ್ತ್ರೀ, ಒಪ್ಪಂದ, ಕರಾರು ಎಂಬ ವ್ಯಾಪಕ ಅರ್ಥವನ್ನು ಶಾಸನ ಪಡೆದುಕೊಂಡಿತು."[೪] ಶಾಸನಗಳನ್ನು ಬಂಡೆಗಲ್ಲು, ಶಿಲೆ ಹಾಗೂ ಧಾತುಗಳಾದ ತಾಮ್ರ, ಕಬ್ಬಿಣ, ಬೆಳ್ಳಿ ಮುಂತಾದವುಗಳ ಮೇಲೆ ಕೆತ್ತುತ್ತಿದ್ದರು, ಕರ್ನಾಟಕವನ್ನೊಳಗೊಂಡಂತೆ ಭಾರತದ ತುಂಬೆಲ್ಲ ಅಸಂಖ್ಯಾತ ಶಾಸನಗಳು ದೊರೆತಿವೆ. ಅದರಲ್ಲೂ ಕರ್ನಾಟಕದಲ್ಲಿ ಸಿಗುವಷ್ಟು ಶಾಸನಗಳು ಭಾರತದ ಬೇರಾದ ಪ್ರಾಂತ್ಯದಲ್ಲೂ ಸಿಗುವುದಿಲ್ಲವೆಂದು ವಿದ್ವಾಂಸರ ಅಭಿಮತ."[೫] ಕರ್ನಾಟಕದಲ್ಲಿ ಮೌರ್ಯರ ಕಾಲದಿಂದ ಪಾಳೆಯಗಾರರ ನಂತರ ಕಾಲದವರೆಗೂ ಅಪಾರ ಪ್ರಮಾಣದಲ್ಲಿ ಶಾಸನಗಳು ದೊರೆತಿವೆ. ಹಾಗೂ ಬೆಳಕಿಗೆ ಬರುತ್ತಲಿವೆ ಅವುಗಳು ಆಯಾ ಕಾಲಘಟ್ಟದ ರಾಜಕೀಯ ಮತ್ತು ಸಾಂಸ್ಕೃತಿಕ ಚರಿತ್ರೆಯನ್ನು ನಿರ್ಮಿಸುವಲ್ಲಿ ತುಂಬಾ ಸಹಕಾರಿಯಾಗಿದೆ.

ಇತರೆ ಶಾಸನ ಪ್ರಕಾರಗಳಗೆ ಹೋಲಿಸಿದರೆ ಕರ್ನಾಟಕದಲ್ಲಿ ದಾನ ಶಾಸನಗಳದೇ ಮೇಲುಗೈ. ದೇವಾಲಯಗಳಿಗೆ, ಮಠಮಾನ್ಯಗಳಿಗೆ, ಅಗ್ರಹಾರಗಳಿಗೆ, ಬ್ರಾಹ್ಮಣರು, ಪುರೋಹಿತರು ಮುಂತಾದವರಿಗೆ ದಾನಗಳನ್ನು ನೀಡುತ್ತಿದ್ದು ಅವುಗಳಿಗೆ ಸಾಕ್ಷಿಯಾಗಿ ಮುಖಂಡರಿಂದ ಬರಹವಿರುವ ಶಾಸನಗಳನ್ನು ಹಾಕಿಸುತ್ತಿದ್ದರು. ಅವುಗಳನ್ನು ದಾನಶಾಸನಗಳು ಎಂದು ಕರೆಯಲಾಗಿದೆ. ಶಿಲಾಶಾಸನಗಳ ಆಶ್ರಯದಾತರು ಧಾರ್ಮಿಕ ಕಾರ್ಯ ಚಟುವಟಿಕೆಗಳಿಂದ ದೇವಾಲಯಗಳನ್ನು ಕಟ್ಟಿಸುವುದು ಅವುಗಳ ವ್ಯವಸ್ಥೆಗಾಗಿ ದಾನ ದತ್ತಿಗಳನ್ನು ಬಿಡುವುದು, ಮಠಗಳಿಗೆ, ಅಗ್ರಹಾರಗಳಿಗೆ, ವಿದ್ಯಾಭ್ಯಾಸಕ್ಕೆ, ಅನ್ನಸತ್ರಾದಿ ಇತ್ಯಾದಿ ಧಾರ್ಮಿಕ ಕಾರ್ಯಗಳಿಗೆ ಭೂಮಿ, ಧನ ಧಾನ್ಯ ರೂಪಗಳಲ್ಲಿ ದಾನವನ್ನು ನೀಡುತ್ತಿದ್ದರು. ಈ ಬಗೆಯ ಕಾರ್ಯ ಚಟುವಟಿಕೆಯಿಂದ ತಮಗೆ ಪುಣ್ಯ ಸಲ್ಲುತ್ತದೆ ಎಂಬ ಭಾವನೆಯನ್ನು ಅವರು ಹೊಂದಿದ್ದರು. ಅಲ್ಲದೆ ಈ ರೀತಿಯ ಕಾರ್ಯದಿಂದ ತಾವುಗಳಿಂದ ಸಂಪತ್ತು ಸಾರ್ಥಕತೆಯನ್ನು ಪಡೆಯುತ್ತದೆ ಎಂಬ ಅಭಿಪ್ರಾಯವನ್ನು ಅವರು ತಳದಿದ್ದರಬಹುದು. ಇದಕ್ಕಾಗಿ ಅವುಗಳನ್ನು ತಾವು ನೀಡಿದ ದಾನದತ್ತಿಗಳ ದಾಖಲೆಗೆ ಶಾಸನಗಳನ್ನು ಹಾಕಿಸುತ್ತಿದ್ದರು ಮತ್ತು ಅದನ್ನು ಶಿಲೆಯಲ್ಲಿ ಕೊರೆಯಿಸಿ ಶಾಶ್ವತಗೊಳಿಸುತ್ತಿದ್ದರು.[೬] ದಾನ ಶಾಸನಗಳನ್ನು ಶಿಲೆಗಳ ಮೇಲೆ ಹಾಗೂ ಲೋಹಗಳ ಮೇಲೂ ಕೆತ್ತಿಸುತ್ತಿದ್ದ ಅಂಶವನ್ನು ಕಾಣಬಹುದಾಗಿದೆ. ದಾನಶಾಸನಗಳು ಒಂದು ಧಾರ್ಮಿಕ ವ್ಯವಸ್ಥೆಯ ಉದ್ಧಾರಕ್ಕೆ ಸಹಾಯಕವಾಗಿದ್ದು

ಅವುಗಳು ಆರ್ಥಿಕ ವ್ಯವಸ್ಥೆಯ ಮೇಲೂ ರಾಜ್ಯ ವ್ಯವಸ್ಥೆಯ ಮೇಲೂ ಪ್ರಭಾರ ಭೀರಿದವು. ಇಂತಹ ದಾನ ಶಾಸನಗಳು ಪ್ರಾರಂಭಿಕ, ಮಧ್ಯಕಾಲೀನ ದೇವಾಲಯ ಸಂಸ್ಕೃತಿಯಲ್ಲಿ ಹಾಸುಹೊಕ್ಕಾಗಿ ಕಂಡು ಬಂದಿದ್ದು ಹೀಗೆ ನೀಡಿದ ನಿರಂತರ ದಾನಗಳಿಂದಾಗಿ ದೇವಾಲಯ ಮಠಮಾನ್ಯ, ಅಗ್ರಹಾರ ವಿದ್ಯಾಕೇಂದ್ರಗಳು, ಧರ್ಮ ಛತ್ರಗಳು ಬೆಳೆದು ಬಂದಿರುವುದನ್ನು ಕಾಣಬಹುದು.

ಪ್ರಸ್ತುತ ಮಧುಗಿರಿ ಪರಿಸರದ ಪ್ರಾಚೀನ ದೇವಾಲಯಗಳಿಗೆ ಸಂಬಂಧಿಸಿದಂತೆ ಹಲವು ಶಾಸನಗಳು ಕಂಡುಬರುತ್ತವೆ. ಇವುಗಳು ದಾನಶಾಸನಗಳಾಗಿದ್ದು, ವಿಜಯನಗರ ಹಾಗೂ ಪಾಳೆಯಗಾರರ ಕಾಲದಲ್ಲಿ ನೀಡಿದವುಗಳಾಗಿವೆ. ಈ ಶಾಸನಗಳ ಅಧ್ಯಯನದಿಂದ ಆಯಾ ದೇವಾಲಯಗಳಿಗೆ ಸಂಬಂಧಿಸಿದ ಹಲವು ಸಂಗತಿಗಳನ್ನು ತಿಳಿಯಲು ಸಹಕಾರಿಯಾಗಿವೆ.

ಮಧುಗಿರಿ ಪರಿಸರದ ದೇವಾಲಯಗಳನ್ನು ಅಧ್ಯಯನ ಮಾಡುವಾಗ ಗಮನಿಸಬಹುದಾದ ಸಿದ್ದಾಪುರದ ವೀರಭದ್ರ ದೇವಾಲಯವು ವಿಜಯನಗರ ಕಾಲದ ನಿರ್ಮಿತಿಯಾಗಿದೆ. ಈ ದೇವಾಲಯಕ್ಕೆ ವಿಜಯನಗರ ಕಾಲದಲ್ಲಿ ಅವರ ಅಧೀನರಾಗಿ ಆಳುತ್ತಿದ್ದ ಮಹಾನಾಡ ಪ್ರಭುಗಳ ಪಾಳೆಯಗಾರರ ಕಾಲದಲ್ಲಿ ಹಲವು ವಿಧದಲ್ಲಿ ದಾನದತ್ತಿಗಳನ್ನು ನೀಡಿ ದೇವಾಲಯಗಳನ್ನು ಪೋಷಿಸಿ ಉದ್ದಾರ ಮಾಡಿರುವುದನ್ನು ಶಾಸನಗಳಿಂದ ತಿಳಿಯಬಹುದು. ಈ ದೇವಾಲಯದ ಕೋಟೆಯ ಪಕ್ಕದಲ್ಲಿರುವ ಸಿದ್ಧಾಪುರದ ಬಸವೇಶ್ವರ ದೇವಾಲಯದ ಮುಂಭಾಗದಲ್ಲಿರುವ ಶಾಸನವು ವಿಜಯನಗರ ಅರವೀಡು ರಾಜಮನೆತನದ ವೆಂಕಟಪತಿ ಕಾಲದ ಶಾಸನವಾಗಿದೆ. ಈ ಶಾಸನದಲ್ಲಿ ವೆಂಕಟಪತಿಯನನ್ನು ಮಹಾರಾಯರು ಎಂದು ಸಂಬೋಧಿಸಿದ್ದು ಅವನು ವಿಜಯನಗರದಲ್ಲಿ ಆಳುತ್ತಿದ್ದ ವೇಳೆಯಲ್ಲಿ ಈ ಪ್ರಾಂತ್ಯವು ಅವರ ಆಳ್ವಿಕೆಗೆ ಒಳಪಟ್ಟಿದ್ದ ಅಂಶವನ್ನು ಹೇಳುತ್ತದೆ. ಈ ಶಾಸನವು ವಿಜಯನಗರ ಇತಿಹಾಸದಲ್ಲಿ ಕಂಡುಬರುವ ಅರವೀಡು ರಾಜಮನೆತನದ ವೆಂಕಟಪತಿ ಆಳ್ವಿಕೆಯನ್ನು ಪ್ರಸ್ತಾಪಿಸುತ್ತ ಮಹಾನಾಡ ಪ್ರಭು ಬಿಜಾವರದ ಚಿಕ್ಕಪ್ಪ ಗೌಡನ ಮಗನ ಕಾಲದಲ್ಲಿ ಕಟ್ಟಲಾದ ವಾಸ್ತು ಶೈಲಿಯ ದೇವಾಲಯಗಳ ಬಗ್ಗೆ ಪ್ರಸ್ತಾಪಿಸುತ್ತದೆ. ಅದರಲ್ಲಿ ಪ್ರಮುಖವಾದದ್ದು ಕೋಟೆಯ ನಿರ್ಮಾಣ, ಇದರ ಜೊತೆಗೆ "ಪಂಚ ದೇವಾಸ್ಥಾನಗಳನ್ನು ಸಿದ್ದಾಪುರದಲ್ಲಿ ಕಟ್ಟಿಸಿದನು. ಅವುಗಳು ಯಾವುವೆಂದರೆ, ವಿಘ್ನೇಶ್ವರ, ವೀರಭದ್ರ ಭೈರವ ಮತ್ತು ಬಸವ ದೇವಾಲಯ ಮುಂತಾದ ದೇವಾಲಯಗಳ ಪ್ರಸ್ತಾಪವಿದೆ. ಕ್ರಿ.ಶ.೧೫೪೮ರಲ್ಲಿ ಕಟ್ಟಲಾದ ದೇವಾಲಯಗಳಾಗಿವೆ."[೭]

ತುಂಗೋಟಿ ಗ್ರಾಮದ ರಂಗನಾಥಸ್ವಾಮಿ ದೇವಾಲಯವು ಶಾಸನೋಕ್ತವಾಗಿದೆ. ಎಡಗಡೆ ಮೂರನೆಯ ಕಂಬದಲ್ಲಿ ಇರುವಂತೆ ಸ್ವಸ್ತಿ ವಿಜಯಾಭ್ಯುದಯ ಶಾಲಿವಾಹನ ಶಕ ವರುಷಗಳು

ಸಂದ ೧೪೭೪ನೆಯ ಪರಿಧಾನಿ ಸಂವತ್ಸರ ಎಂದು ಇದು ಕ್ರಿ.ಶ೧೮೪೮ರಲ್ಲಿ ಚಿಕ್ಕಪ್ಪಗೌಡರಿಗೆ ಪುಣ್ಯವಾಗಲೆಂದು ಬಿಜಾವರದ ಕೆಂಚಯನಾಯಕರು ರಂಗನಾಥ ಸ್ವಾಮಿ ದೇವಾಲಯ ಕಟ್ಟಿಸಿಕೊಟ್ಟು ಮಹನಾಡ ಪ್ರಭುಗಳಿಗೆ ಮಂಗಳವಾಗಲಿ ಎಂದು ಹೇಳಲಾಗಿದೆ. ಈ ಶಾಸನದಲ್ಲಿ.[೮]

ವೇಣುಗೋಪಾಲಸ್ವಾಮಿ ದೇವಾಲಯಕ್ಕೆ ಸಂಬಂಧಿಸಿದ ತಾಮ್ರಶಾಸನವಿದ್ದು, ಗುಂಡ್ಲಗಳ್ಳಿ ಗ್ರಾಮದ ಪೂಜಾರಿ ರಾಮಕೃಷ್ಣಪ್ಪನಲ್ಲಿದೆ. ಈ ಶಾಸನದಲ್ಲಿ ೧೫೧೫ನೇ ಇಸವಿಗೆ ಸರಿಯಾಗಿ ವಿಜಯನಾಮ ಸಂ,ಕಾರ್ತಿಕ ಶುದ್ಧ ೧೫ರಲ್ಲೂ ದೇವಾಸ್ಥಾನದ ಶಿಲ್ಪಿ ಶಾಸನದಲ್ಲಿ ನೂರು ಮನೆ ಪೈಕಿ ಕಂಬೇಗೌಡ, ಕರೇಗೌಡ, ರಾಯಣ್ಣಗೌಡ, ಕಂಬೇಗೌಡ, ತಿಮ್ಮೇಗೌಡ, ಕಂಬದ ರಂಗೇಗೌಡ ಇವರು ಕಟ್ಟಿದ ಕಟ್ಟಡದ ಖರ್ಚು ೧೮೯೨ ವರಹ ಸಾಲಮಾಡಿ ಜಿರ್ಲೆಮಲ್ಲಮ್ಮ ಸಾಲ ತೀರಿಸಿ, ಜಿರ್ಲೆಮಲ್ಲಮ್ಮ ದೇವಾಲಯದ ಮುಂದೆ ಬಾವಿ ತೆಗೆಸಿ ಸೋಪಾನದುಯ್ಯತಿ ಎರಡು ಕಂಬದಲ್ಲಿ ಪೂರ್ವಅಭಿಮುಖವಾಗಿ ಕಂಬದಲ್ಲಿ ಜಿರ್ಲೆಮಲ್ಲಮ್ಮನನ್ನು ಕಂಬದಲ್ಲಿ ಕಡೆಸಬೇಕು. ದಾರಿಯಲ್ಲಿ ಬರುವ ಪುಣ್ಯಾತ್ಮರು ಈ ಬಾವಿಯಲ್ಲಿ ನೀರು ಕುಡಿದು ತಮ್ಮ ದಣಿವು ಆರಿಸಿಕೊಳ್ಳಲಿ ಅನಂತರ ಅದೇ ಬಾವಿಯ ನೀರನ್ನು ಎರಡು ಬೊಗಸೆ ತೆಗೆದು ಪಕ್ಕದಲ್ಲೆ ಇರುವ ನನ್ನ ವಿಗ್ರಹದ ಮೇಲೆ ಸುರಿಯಲ್ಲಿ, ನಮ್ಮ ಸಂಬಂಧಿಸಗಳ ಮನೆಯಲ್ಲಿ ಹಸು, ಎಮ್ಮೆ, ಇದ್ದರೆ ಅವರು ಬೆಣ್ಣೆ ಮತ್ತು ತುಪ್ಪಗಳನ್ನು ನನ್ನ ವಿಗ್ರಹಕ್ಕೆ ಬೆಳೆಯಬೇಕು ಎಂದು ಕೇಳಿಕೊಳ್ಳುತ್ತೇನೆ ಎಂದು ಹೇಳಿದ್ದಾರೆ. ಗೋಪಾಲಕೃಷ್ಣಸ್ವಾಮಿ ಕಂಬದರಂಗಯ್ಯನ ಸೇವೆಯನ್ನು ಸಿದ್ದಪುರದ ಕುಡುತಿ ಗ್ರಾಮದ ವಾಸಿಗಳು ದೇವರಾ ಸೇವೆ ಮಾಡಬೇಕೆಂದು ಹೇಳಲಾಗಿದೆ.[೯]

ಮಧುಗಿರಿ ಕೋಟೆಯ ಪಕ್ಕದಲ್ಲಿರುವ ಜೈನ ಬಸದಿಯಲ್ಲಿ "ಮಲ್ಲಿನಾಥಸ್ವಾಮಿಯ ದೇವಾಲಯವು ಶಾಸನೋಕ್ತವಾಗಿದೆ. ಕ್ರಿ.ಶ.೧೩೫೧ನೇ ಸಂಮತ್ಸರ ವೈಶಾಖ ಶುದ್ಧ ಪಂಚಮಿಯಲ್ಲಿ ಶ್ರೀಮಲ್ಲಿನಾಥಸ್ವಾಮಿಗೆ ಗೋದಾಮಿ ಮೈಯರ ಹೆಂಡತಿ ಜಯಮ್ಮ ಎಂಬುವರು ಸ್ವಾಮಿಯವರ ಅಮೃತ ಪಡಿಗಾಗಿ ಅನೇಕ ಅಗ್ರಹಾರಗಳನ್ನು ದಾನ ಮಾಡಿದರೆಂದು ತಿಳಿದುಬಂದಿದೆ.[೧೦]

ಒಟ್ಟಾರೆ ಮಧುಗಿರಿ ಪರಿಸರದ ಕೆಲವು ದೇವಾಲಯಗಳು ಮಾತ್ರ ಶಾಸನಗಳನ್ನು ಹೊಂದಿವೆ. ಆ ಶಾಸನಗಳು ನಮಗೆ ಪೂರ್ವ ಮಾಹಿತಿಯನ್ನು ನೀಡುವಲ್ಲಿ ಸಮರ್ಥವಾಗಿದೆ. ದೇವಾಲಯಗಳಿಗೆ ಸಂಬಂಧಿಸಿದ ಬಹುಮುಖ್ಯ ಸಂಗತಿಗಳು, ಕಾಲಮಾನ, ದಾನ, ಧರ್ಮಗಳನ್ನು ನೀಡಿ ಪೋಷಿಕೊಂಡು ಬಂದಿರುವುದನ್ನು ಕಾಣಬಹುದು. ದೇವಾಲಯಗಳು ಸಾಮಾಜಿಕ ಮತ್ತು ಧಾರ್ಮಿಕ ಕೇಂದ್ರಗಳಾಗಿ ಉಳಿದು, ಬೆಳೆದು ಬರಲು ಅಂದಿನ ರಾಜಪ್ರಭುತ್ವಗಳು ಹೇರಳವಾಗಿ ನೀಡುತ್ತಿದ್ದ ದಾನ ದತ್ತಿಗಳೇ ಬಹುಮುಖ್ಯ ಕಾರಣವಾಗಿತ್ತು.

ಅಡಿಟಿಪ್ಪಣಿಗಳು

೧. ತಿಪ್ಪೇರುದ್ರಸ್ವಾಮಿ ಎಚ್. ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಪು.೨೨೯

೨. ರವೀಂದ್ರನಾಥ ಕೆ., ಕನ್ನಡ ದಾಖಲು ಸಾಹಿತ್ಯ, ಪು.೩೦

೩. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪು.೧೩

೪. ರವೀಂದ್ರನಾಥ ಕೆ., ಪೂರ್ವೋಕ್ತ, ಪು.೩೧

೫. ಚಿದಾನಂದಮೂರ್ತಿ ಎಂ., ಪೂರ್ವೋಕ್ತ, ಪು.೨೭

೬. ಪ್ರಸನ್ನಕುಮಾರ ಡಿ., ಕರ್ನಾಟಕದಲ್ಲಿ ಶಿಲಾಶಾಸನ ನಿರ್ಮಾಣ ಮತ್ತು ಅದರ ಸಾಮಾಜಿಕ ಆಯಾಮಗಳು (ಅಪ್ರಕಟಿತ ಪಿಎಚ್.ಡಿ. ಮಹಾಪ್ರಬಂಧ) ಪು.೨೪.

೭. ಎಫಿಗ್ರಾಫಿಯಾ ಕರ್ನಾಟಕ–XII ಮಧುಗಿರಿ, ೨೧ (ಸಿದ್ಧಾಪುರ)

೮. ಮೈಸೂರು ಆರ್ಕಿಯಲಾಜಿಕಲ್ ರಿಪೋರ್ಟ್, ೧೯೨೯, ಮಧುಗಿರಿ, ೯೫, (ತುಗೊಂಟಿ)

೯. ಗುಂಡ್ಲಹಳ್ಳಿ ಗ್ರಾಮದಲ್ಲಿ ಪೂಜಾರಿ ರಾಮಕೃಷ್ಣಪ್ಪನಲ್ಲಿದ್ದ ತಾಮ್ರಶಾಸನ

೧೦. ಎಫಿಗ್ರಾಫಿಯಾ ಕರ್ನಾಟಕ–XVI ತುಮಕೂರು ಡಿಸ್ಟ್ರಿಕ್, ಪೊಬ್‌ಲಿಷಡ್, ಬೈ ನೀಲಕಂಠಶಾಸ್ತ್ರೀ ಕೆ.ವಿ, ಪು.೪೮.

ಅಧ್ಯಾಯ - ೭

ಸಮಾರೋಪ

ಅಧ್ಯಾಯ – ೭
ಸಮಾರೋಪ

ದೇವಾಲಯಗಳು ಮಾನವನ ಧಾರ್ಮಿಕ ಶ್ರದ್ಧೆ, ಭಕ್ತಿ, ನಂಬಿಕೆಗಳ ಪ್ರತೀಕಗಳಾಗಿ ಬೆಳೆದು ಬಂದಿವೆ. ದೇವಾಲಯಗಳು ಪ್ರಾಚೀನ ಕಾಲದ ಮಾನವನ ಚರಿತ್ರೆ ಮತ್ತು ಸಂಸ್ಕೃತಿಯನ್ನು ರಚಿಸಲು ಸಹಾಯಕವಾಗಬಲ್ಲ ಪ್ರಾಮುಖ್ಯವಾದ ಪುರಾತತ್ವ ಆಕರ ಸಂಪತ್ತು ಎಂದು ಹೇಳಬಹುದು. ಅಂದಿನ ಸಾಮಾಜಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳನ್ನು ಪ್ರತಿಬಿಂಬಿಸುವಲ್ಲಿ ಸಹಾಯಕಾರಿ ಯಾಗಿವೆ. ಪ್ರಕೃತಿಯಲ್ಲಿ(ನಿಸರ್ಗದಲ್ಲಿ) ಎಲ್ಲಕ್ಕಿಂತ ಮಿಗಿಲಾದ ಒಂದು ಅದ್ಬುತವಾದ ಶಕ್ತಿ ಇದೆ ಎಂದು ತಿಳಿದ ನಂತರ ಮಾನವನು ಅದನ್ನೇ ದೇವರೆಂದು ಪೂಜಿಸಲು ಪ್ರಾರಂಭಿಸಿದ ಮೂರ್ತಿರೂಪ ನೀಡಿ ಪೂಜಿಸಲು ಪ್ರಾರಂಭಿಸಿದ ಬಳಿಕ ಅದರ ರಕ್ಷಣೆಗಾಗಿ ಭೂಮಿಯ ಮೇಲೆ ಒಂದು ವಾಸ್ತು ರೂಪ ನೀಡಿದ ಇದನ್ನೇ ದೇವಾಲಯ ವಾಸ್ತು ಎಂದು ಕರೆಯಲಾಯಿತು. ಚರಿತ್ರೆಯ ಚರನೆಯಲ್ಲಿ ಸ್ಮಾರಕಗಳು ಬಹಳ ಮಹತ್ವವನ್ನು ಪಡೆದಿದ್ದು, ಅವುಗಳಲ್ಲಿ ದೇವಾಲಯಗಳು ಪ್ರಮುಖವಾದ ಸ್ಮಾರಕಗಳ ಸಾಲಿಗೆ ಸೇರುತ್ತವೆ. ಅನೇಕ ರಾಜಮನೆತನದ ರಾಜರು, ಮಂತ್ರಿಗಳು ತಮ್ಮ ಪ್ರಭುತ್ವದ ಸಂಕೇತವಾಗಿ ಹಾಗೂ ಜನರ ಪ್ರೀತಿ ವಿಶ್ವಾಸ, ಮನ್ನಣೆ ಗಳಿಸಲು ಧಾರ್ಮಿಕ ವ್ಯವಸ್ಥೆಯ ಹಿನ್ನಲೆಯಲ್ಲಿ ಬೃಹತ್ ಪ್ರಮಾಣದಲ್ಲಿ ದೇವಾಲಯಗಳ ನಿರ್ಮಾಣಕ್ಕೆ ಕಾರಣಕರ್ತರಾದರು. ಭಾರತದಲ್ಲಿ ಮೌರ್ಯರಿಂದ ಹಿಡಿದು ಚಿಕ್ಕಪುಟ್ಟ ಅರಸು ಮನೆತನಗಳು, ಚಕ್ರವರ್ತಿಗಳಿಂದ ಹಿಡಿದು ಸಾಮಾಂತಾಧಿಕಾರಿಗಳವರೆಗೂ ದೇವಾಲಯವನ್ನು ಅಭೂತಪೂರ್ವವಾಗಿ ನಿರ್ಮಿಸಿರುವುದನ್ನು ಕಾಣಬಹುದಾಗಿದೆ.

[illegible]

[illegible]

[illegible]

ಕರ್ನಾಟಕದಲ್ಲಿ ದೇವಾಲಯಗಳ ಸಂಸ್ಕೃತಿಯತ್ತ ಗಮನ ಹರಿಸಿದಾಗ ಮೌರ್ಯರು, ಶಾತವಾಹರು, ಕದಂಬರು, ಬಾದಾಮಿ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣಚಾಲುಕ್ಯರು, ಹೊಯ್ಸಳರು, ವಿಜಯನಗರ ಅರಸರು, ಚಿಕ್ಕಪಟ್ಟ ಅರಸು ಮನೆತನಗಳು ಧಾರ್ಮಿಕ ವ್ಯವಸ್ಥೆ ಮತ್ತು ದೇವಾಲಯ ನಿರ್ಮಾಣ, ಸಂಸ್ಕೃತಿಗೆ ಮಹತ್ವ ನೀಡಿರುವುದು ಅವರ ಕಾಲದ ಸ್ಮಾರಕಗಳೇ ಸಾಕ್ಷಿಗಳಾಗಿವೆ. ಪ್ರಸ್ತುತ ಅಧ್ಯಯನ "ಮಧುಗಿರಿ ಪರಿಸರದ ದೇವಾಲಯಗಳ ಅಧ್ಯಯನ" ಎಂಬುದಾಗಿದ್ದು ಈ ಪರಿಸರದ ಪ್ರಾಚೀನ ದೇವಾಲಯಗಳನ್ನು ಕುರಿತು ಅಧ್ಯಯನ ನಡೆಸಲಾಗಿದೆ. ಚರಿತ್ರೆಯ ಕಣಜವೆಂದೇ ಕರೆಯಲ್ಪಡುವ ತುಮಕೂರು ಜಿಲ್ಲೆಯ ಪ್ರದೇಶವು ಚರಿತ್ರೆಯ ಸಂಶೋಧನೆಯ ದೃಷ್ಟಿಯಿಂದ ಬಹುಮುಖ್ಯವಾದುದು. ಚಾರಿತ್ರಿಕವಾಗಿ ಗಂಗರು, ರಾಷ್ಟ್ರಕೂಟರು, ಕಲ್ಯಾಣದ ಚಾಲುಕ್ಯರು, ನೊಳಂಬರು, ಚೋಳರು, ಹೊಯ್ಸಳರು, ವಿಜಯನಗರದ ಅರಸರು, ಮಹಾನಾಡು ಪ್ರಭುಗಳು, ಆಳಿರುವುದನ್ನು ಕಾಣಬಹುದು. ಆದ್ದರಿಂದ ಇಲ್ಲಿನ ದೇವಾಲಯಗಳ ಅಧ್ಯಯನದಲ್ಲಿ ಆಯಾ ರಾಜಸಂತತಿಗಳ ಹಲವು ಪ್ರಭಾವವನ್ನು ಕಾಣಬಹುದಾಗಿದೆ. ಕ್ಷೇತ್ರ ಕಾರ್ಯದಲ್ಲಿ ವಿಜಯನಗರೋತ್ತರ, ಮಹಾನಾಡು ಪ್ರಭುಗಳ ಕಾಲದ ದೇವಾಲಯಗಳೇ ಹೆಚ್ಚು ಪ್ರಮಾಣದಲ್ಲಿ ಬೆಳಕಿಗೆ ಬಂದಿವೆ. ಈ ದೇವಾಲಯಗಳನ್ನು ಪಂಥಗಳ ಆಧಾರದ ಮೇಲೆ ಶೈವ, ವೈಷ್ಣವ ಮತ್ತು ಶಾಕ್ತ ದೇವಾಲಯಗಳೆಂದು ವರ್ಗೀಕರಿಸಿಕೊಂಡು ಅಧ್ಯಯನ ಮಾಡಿದಾಗ ಇವುಗಳಲ್ಲಿ ಹೆಚ್ಚು ಶೈವ ದೇವಾಲಯಗಳೇ ಎಂದು ಗುರುತಿಸಲು ಸಾಧ್ಯವಾಯಿತು. ಈ ಪರಿಸರದಲ್ಲಿ ಮಹಾನಾಡು ಪ್ರಭುಗಳು ಸಕಲಧರ್ಮ ಪಂಥಗಳ ಪೋಷಕರಾಗಿದ್ದರು. ಸಿದ್ದಾಪುರದಲ್ಲಿ ವಿಜಯನಗರೊತ್ತರ ಕಾಲದಲ್ಲಿ ಅರವೀಡು ಮನೆತನದ ವೆಂಕಟಪತಿ ಆಳ್ವಿಕೆಯ ಕಾಲದಲ್ಲಿ ಮಹಾನಾಡು ಪ್ರಭು ಚಿಕ್ಕಪ್ಪಗೌಡರ ಮಗನ ಕಾಲದಲ್ಲಿ ದೇವಾಲಯಗಳಿಗೆ ದಾನದತ್ತಿಗಳು ಮತ್ತು ದೇವಾಲಯಗಳು ನಿರ್ಮಿಸಿರುವ ಬಗ್ಗೆ ಈ ಪರಿಸರದ ಶಾಸನದಿಂದ ತಿಳಿದು ಬರುವುದು. ಮಧುಗಿರಿ ಪ್ರಾಂತ್ಯದಲ್ಲಿ ಮಹಾನಾಡು ಪ್ರಭುಗಳು (ಪಾಳೆಯಗಾರರು) ಪ್ರಬಲರಾಗಿದ್ದರು. ಶೈವ ಮತ್ತು ವೈಷ್ಣವ ಪಂಥದವರಿಗೆ ಮಧುಗಿರಿ ಪ್ರಾಂತ್ಯದಲ್ಲಿ ಮಹಾನಾಡು ಪ್ರಭುಗಳಿಂದ ಪೋಷಿಸಲ್ಪಟ್ಟರು. ಈ ಕುರಿತು ಈಗಲೂ ಈ ಪರಿಸರದಲ್ಲಿರುವ ಶೈವ-ವೈಷ್ಣವ ಪಂಥಿಯರು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ನೀಡಿದ ಮಾಹಿತಿಯಿಂದ ದೃಢಪಡಿಸಬಹುದು. ಈ ಪರಿಸರದಲ್ಲಿ ಪಾಳೆಗಾರರ ಕಾಲದಲ್ಲಿ ನಿರ್ಮಾಣಗೊಂಡಿರುವ ಹನುಮಂತನ ದೇವಾಲಯಗಳನ್ನು ಕಾಣಬಹುದು. ಇಲ್ಲಿನ ಶೈವ ದೇವಾಲಯಗಳ ಅಧ್ಯಯನವು ಪ್ರಸ್ತುತ ಸಂಶೋಧನೆಯ ಒಂದು ಬಹುಮುಖ್ಯ ಫಲಿತಾಂಶವಾಗಿ ಕಾಣಲು ಸಾಧ್ಯವಾಗುವುದು.

ವೈಷ್ಣವ ದೇವಾಲಯಗಳಲ್ಲಿ ಗಮನಿಸಬಹುದಾದ ಬಹುಮುಖವಾದ ಮಧುಗಿರಿ ಪಟ್ಟಣದ ವೆಂಕಟರಮಣ, ಶಿರಾಮಾರ್ಗದಲ್ಲಿರುವ ವೇಣುಗೋಪಾಲ, ಕಂಬದರಂಗ, ತುಂಗೋಟಿಯ ರಂಗನಾಥಸ್ವಾಮಿ ದೇವಾಲಯಗಳು ಇವು ಮಧುಗಿರಿಯ ಮಹಾನಾಡು ಪ್ರಭುಗಳ ಕಾಲದವುಗಳಾಗಿವೆ. ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಬಹು ಸುಂರವಾಗಿದ್ದು, ಶಿರಾಮಾರ್ಗದಲ್ಲಿರುವ ವೇಣುಗೋಪಾಲ, ಕಂಬದರಂಗ, ತುಂಗೋಟಿಯ ರಂಗನಾಥಸ್ವಾಮಿ ದೇವಾಲಯ ಶಾಸನೋಕ್ತವಾಗಿವೆ. ಶಾಕ್ತ ದೇವಾಲಯಗಳಲ್ಲಿ ವಿಜಯನಗರೋತ್ತರ (ಮಹಾನಾಡು ಪ್ರಭುಗಳ) ಕಾಲದ ದಂಡಿ ಮಾರಮ್ಮ, ಪದ್ಮವತಿ ಅಮ್ಮ, ಅಲುವೇಲು ಮಂಗಮ್ಮ ಮತ್ತು ಪಾರ್ವತಿಅಮ್ಮ ದೇವಾಲಯಗಳನ್ನು ಕಾಣಬಹುದು.

ಹರಿಹರ ರೊಪ್ಪದಲ್ಲಿರುವ ಹರಿಹರೇಶ್ವರ ದೇವಾಲಯವು ಪ್ರಾಚೀನವಾದ ದೇವಾಲಯ ವಾಗಿದೆ. ಬಿಜ್ಜವರ ಗ್ರಾಮದಲ್ಲಿರುವ ಕಾಶಿವಿಶ್ವನಾಥ ಮತ್ತು ವೀರಭದ್ರಸ್ವಾಮಿ ದೇವಾಲಯಗಳು ಮಹಾನಾಡುಪ್ರಭುಗಳ ಕಾಲದಲ್ಲಿ ನಿರ್ಮಾಣವಾಗಿವೆ.

ಇತರೆ ಪಂಥದ ದೇವಾಲಯಗಳಲ್ಲಿ ಮಲ್ಲಿನಾಥ ದಿಗಂಬರ ಜೈನಬಸದಿಯು ಮಧಗಿರಿ ಪಟ್ಟಣದ ಕೋಟೆಯ ಪಕ್ಕದಲ್ಲಿದ್ದು, ಕಲೆ ಮತ್ತು ವಾಸ್ತುಶಿಲ್ಪದಲ್ಲಿ ಬಹುಸುಂದರವಾಗಿದ್ದು, "ಈ ದೇವಾಲಯವು ಶಾಸನೋಕ್ತವಾಗಿದ್ದು, ಕ್ರಿ.ಶ. ೧೫೩೧ ರಲ್ಲಿ ಮಲ್ಲಿನಾಥಸ್ವಾಮಿಗೆ ಗೋದಾಮಿ ಮೈಯರ ಹೆಂಡತಿ ಜಯಮ್ಮ ಎಂಬುವರು ಅಗ್ರಹಾರಗಳನ್ನು ದಾನಮಾಡಿರುವುದು ತಿಳಿದು ಬರುತ್ತದೆ". ಈ ಜೈನ ಬಸದಿಯು ಪಾಳೆಯಗಾರರ ಕಾಲದ್ದಾಗಿದೆ.

ಮೂರ್ತಿಶಿಲ್ಪಗಳ ಅಧ್ಯಯದಿಂದ ಕಲ್ಯಾಣಚಾಲುಕ್ಯ, ವಿಜಯನಗರ ಹಾಗೂ ಪಾಳೆಯಗಾರರ ಕಾಲದ ಮೂರ್ತಿ ಶಿಲ್ಪಗಳನ್ನು ಬೆಳಕಿಗೆ ತರಲು ಸಾಧ್ಯವಾಗಿದೆ. ಕಲ್ಯಾಣ ಚಾಲುಕ್ಯ ಮುರ್ತಿ ಶಿಲ್ಪಗಳನ್ನು ಬಳಪದ ಕಲ್ಲಿನಿಂದ ಕಂಡರಿಸಿದ ಮೂರ್ತಿ ಶಿಲ್ಪಗಳನ್ನು ಕಾಣಬಹುದು. ಅವುಗಳಲ್ಲಿ ಬಹುಮುಖ್ಯವಾಗಿ ಮಧುಗಿರಿ ಪಟ್ಟಣದ ಮಲ್ಲೇಶ್ವರ ದೇವಾಲಯದ ಮುಖಮಂಟಪದ ಕೋಷ್ಟಕದಲ್ಲಿ ಗಣಪತಿ, ಹರಿಹರರೊಪ್ಪದಲ್ಲಿರುವ ಹರಿಹರೇಶ್ವರ, ಶಿರಾ ಮಾರ್ಗದಲ್ಲಿರುವ ವೇಣುಗೋಪಾಲ, ಮೂರ್ತಿ ಶಿಲ್ಪಗಳನ್ನು ಕಾಣಬಹುದು. ಈ ಪರಿಸರದಲ್ಲಿ ಭೈರವ ಮತ್ತು ವೀರಭದ್ರ ಮೂರ್ತಿಶಿಲ್ಪಗಳು ಬೆಳಕಿಗೆ ಬಂದಿದ್ದು, ಅವು ವಿಜಯನಗರ ಕಾಲದವುಗಳಾಗಿವೆ. ಇಲ್ಲಿ ಪ್ರಾಚೀನ ಕಾಲದಿಂದಲೂ ನಾಥಪಂಥ ಸಂಪ್ರದಾಯ ಇಲ್ಲಿರಬಹುದು ಕಾರಣ ಕರ್ನಾಟಕದ ನಾಥಪಂಥವು ಎಲ್ಲೆಡೆಗಳಲ್ಲಿ ಇದ್ದು, ತುಮಕೂರು ಜಿಲ್ಲೆ ಬಹುಮುಖ್ಯವಾದ ನೆಲೆಯಾಗಿದ್ದಿತು. ಮಧುಗಿರಿ ಪರಿಸರದಲ್ಲಿ ಭೈರವ ಮತ್ತು ವೀರಭದ್ರ ಮೂರ್ತಿ ಶಿಲ್ಪಗಳನ್ನು ಗಮನಿಸದಾಗ ನಾಥಪಂಥದ ಕುರುಹುಗಳನ್ನು ಗುರುತಿಸಿಬಹುದು. ಈ ಸಂಗತಿಯೂ ಸಹ ಪ್ರಸ್ತುತ ಸಂಶೋಧನೆಯ ಒಂದು ಬಹುಮುಖ್ಯ

ಅಂಶವಾಗಿದೆ. ಇನ್ನೂ ದೇವಾಲಯಗಳಿಗೆ ಸಂಬಂಧಿಸಿದಂತಹ ಶಾಸನಗಳ ಅಧ್ಯಾಯನದಿಂದ ಈ ದೇವಾಲಯಗಳಿಗೆ ಯಾವ, ಯಾವ ರಾಜವಂಶಗಳ ಕಾಲದಲ್ಲಿ ದಾನ ದತ್ತಿಗಳನ್ನು ನೀಡಲಾಗಿತ್ತು ಎಂಬುದನ್ನು ತಿಳಿಯಬಹುದು. ಅವುಗಳಲ್ಲಿ ಈ ಮೇಲೆ ವಿವರಿಸಿದಂತೆ ಮಲ್ಲಿನಾಥ ದಿಗಂಭರ ಜೈನ ಬಸದಿ ದೇವಾಲಯವು ಹೆಚ್ಚು ದಾನದತ್ತಿಗಳನ್ನು ಪಡೆದಿರುವ ದೇವಾಲಯವಾಗಿದೆ.

ಒಟ್ಟಾರೆ "ಮಧುಗಿರಿ ಪರಿಸರದ ದೇವಾಲಯಗಳ ಅಧ್ಯಯನ" ಎಂಬ ಈ ಅಧ್ಯಯನದ ಮೂಲಕ ಮಧುಗಿರಿ ಪರಿಸರದ ಪ್ರಾಚೀನ ದೇವಾಲಯಗಳು ಹಾಗೂ ಮೂರ್ತಿ ಶಿಲ್ಪಗಳನ್ನು ಬೆಳಕಿಗೆ ತರಲಾಗಿದೆ. ಅಜ್ಞಾತವಾಗಿದ್ದ ಈ ದೇವಾಲಯಗಳು ಇದೇ ಮೊದಲಬಾರಿಗೆ ವ್ಯವಸ್ಥಿತವಾದ ಅಧ್ಯಯನಕ್ಕೆ ಒಳಪಟ್ಟು ಚರ್ಚಿಸಲ್ಪಟ್ಟಿವೆ. ಶಾಸನಗಳ ಮೂಲಕ ಈ ದೇವಾಲಯಗಳಿಗೆ ಸಂಬಂಧಿಸಿದ ಹಲವು ಸಂಗತಿಗಳನ್ನು ಹೊರತರಲು ಸಾಧ್ಯವಾಗಿದೆ. ಆದ್ದರಿಂದ ಹೊಸದುರ್ಗ ಪರಿಸರದ ಪ್ರಾಚೀನ ದೇವಾಲಯಗಳು ಅಂದಿನ ಚರಿತ್ರೆ ಹಾಗೂ ಸಂಸ್ಕೃತಿಯ ರಚನೆಯಲ್ಲಿ ಸಕ್ರಿಯವಾಗಿ ಪ್ರಮುಖವಾದ ಪಾತ್ರವಹಿಸಿವೆ.

ಅನುಬಂಧಗಳು

ಗ್ರಂಥಋಣ

೧. ಅಪರ್ಣ ಕೂ.ಸ. ೧೯೯೯, ದೇವಾಲಯವಾಸ್ತು ಶಿಲ್ಪ ಪರಿಚಯ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೨. ಅನಂತ ರಂಗಾಚಾರ್ ಎನ್, ೧೯೮೪, ಭಾರತೀಯ ದೇವಾಲಯಗಳು ಮತ್ತು ಸಂಸ್ಕೃತಿ, ಸ್ವಚ್ಛಂದ ಪ್ರಕಾಶನ, ಮೈಸೂರು.

೩. ಕಲಬುರ್ಗಿ ಎಂ.ಎಂ. ೧೯೯೪, ಕರ್ನಾಟಕದ ಕೈಫಿಯತ್ತುಗಳು, ಕನ್ನಡ ವಿಶ್ವವಿದ್ಯಾಲಯ ಹಂಪಿ.

೪. ಗೋಪಾಲ್ ಬಾ.ರಾ, ೧೯೮೩, ವಿಜಯನಗರದ ವಾಸ್ತುಶಿಲ್ಪ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

೫. ಗೋಪಾಲ್ ಬಾ.ರಾ. ಕರ್ನಾಟಕದ ಕಲೆಗಳು ವಾಸ್ತು, ಸಂಪುಟ–೪, ಕನ್ನಡ ಸಾಹಿತ್ಯ ಪರಿಷತ್, ಬೆಂಗಳೂರು.

೬. ಗೋಪಾಲ್ ಆರ್.(ಸಂ), ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೭. ಚಿದಾನಂದ ಮೂರ್ತಿ ಎಂ, ೧೯೮೪, ವೀರಗಲ್ಲುಗಳು ಮತ್ತು ಮಾಸ್ತಿ ಕಲ್ಲುಗಳು, ಬೆಂಗಳೂರು, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ.

೮. ಚಿದಾನಂದ ಮೂರ್ತಿ ಎಂ. ೨೦೦೨, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಸ್ವಪ್ನ ಬುಕ್ ಹೌಸ್, ಬೆಂಗಳೂರು.

೯. ಜ್ಞಾನಾನಂದ ಜಿ, ೨೦೦೦, ಶಿಲ್ಪದರ್ಶ, ಸಂಪುಟ–೧ ಮತ್ತು ೨,ಕನ್ನಡ ವಿಶ್ವವಿದ್ಯಾಲಯ ಹಂಪಿ. ಪ್ರಸಾರಾಂಗ.

೧೦. ಜ್ಞಾನಾನಂದ ಜಿ, ೨೦೦೬, ಶ್ರೀ ಕಾಶ್ಯಪ ಶಿಲ್ಪಶಾಸ್ತ್ರ, ಸಂಪುಟ–೨, ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಬೆಂಗಳೂರು.

೧೧. ಡೇವಿಡ್ ಎನ್, ಲಾರೆಂಜನ್, ೨೦೦೫, ಕಾಪಾಲಿಕರು ಮತ್ತು ಕಾಳಾಮುಖರು, ಅನುವಾದ: ವಿರೂಪಾಕ್ಷಿ ಕುಲಕರ್ಣಿ, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೨. ತಿಪ್ಪೇರುದ್ರ ಸ್ವಾಮಿ ಹೆಚ್, ೧೯೯೭, ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಡಿ.ವಿ.ಕೆ. ಮೂರ್ತಿ, ಪ್ರಕಾಶಕರು, ಮೈಸೂರು.

೧೩. ತಿಪ್ಪೇಸ್ವಾಮಿ ಪಿ. ಆರ್. ೧೯೯೪, ಶಿಲ್ಪಕಲಾ ಪ್ರಪಂಚ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೧೪. ಪರಮಶಿವಮೂರ್ತಿ ಡಿ. ವಿ. ೧೯೯೯, ಕನ್ನಡ ಶಾಸನಶಿಲ್ಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.

೧೫. ಪ್ರಭಾಕರ್ ಎಂ. ಎನ್.೨೦೦೦, ದೇವಾಲಯವಾಸ್ತು ಚಂದ್ರಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೬. ಮೋಹನ ಕೃಷ್ಣ ರೈ.ಕೆ. ೨೦೦೪, ಪ್ರಭುತ್ವ ಮತ್ತು ಜನತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ.

೧೭. ಮಹಂತೇಶ. ಎನ್. ಎಸ್. ೨೦೦೮, ಚಿತ್ರದುರ್ಗದ ಕೋಟೆ ಪರಿಸರದ ದೇವಾಲಯಗಳು: ಒಂದು ಸಾಂಸ್ಕೃತಿಕ ಅಧ್ಯಯನ, ರೇಣುಕ ಪ್ರಕಾಶನ, ಚಿತ್ರದುರ್ಗ.

೧೮. ರಾಮಚಂದ್ರರಾವ್ ಎಸ್. ಕೆ.೧೯೭೫, ಮೂರ್ತಿಶಿಲ್ಪ-ನೆಲೆ ಹಿನ್ನಲೆ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೧೯. ರಾಮಚಂದ್ರರಾವ್ ಎಸ್.ಕೆ, ೧೯೮೦, ಭಾರತದ ದೇವಾಲಯ ನೆಲೆ ಹಿನ್ನಲೆ, ಐ.ಬಿ.ಎಚ್. ಪ್ರಕಾಶನ, ಬೆಂಗಳೂರು.

೨೦. ರಾಜಶೇಖರ ಸಿಂದಗಿ, ೧೯೮೮, ಕರ್ನಾಟಕದ ವಾಸ್ತುಶಿಲ್ಪ ಮತ್ತು ಚಿತ್ರಕಲೆ, ಸುಜಾತ ಪಬ್ಲಿಕೇಷನ್, ಧಾರವಾಡ.

೨೧. ಲಕ್ಷಣ್ ತೆಲಗಾವಿ,೨೦೦೪, ಮೌರ್ಯ ಮತ್ತು ಶಾತವಾಹನ ಯುಗ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೨. ಲಕ್ಷಣ್ ತೆಲಗಾವಿ, ೨೦೦೩, ಸ್ಥಳೀಯ ಚರಿತ್ರೆ ಅಧ್ಯಯನದ ತಾತ್ವಿಕತೆ ಮತ್ತು ಸ್ವರೂಪ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೩. ಲಕ್ಷಣ್ ತೆಲಗಾವಿ(ಸಂ), ೧೯೮೯, ಹರಿತಿಸಿರಿ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟಿ.

೨೪. ವಸು.ಎಂ.ವಿ.(ಸಂ), ೨೦೦೧, ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ,

೨೫. ವಾಸುದೇವ ಬಡಿಗೇರ (ಸಂ)., ೨೦೦೮, ಸ್ಥಳೀಯ ಚರಿತ್ರೆ ಮತ್ತು ಪುರಾತತ್ವ ಮಾಲೆ-೨, ಹಾಸಗಲ್ಲು, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೬. ವಸಂತಲಕ್ಷ್ಮೀ ಕೆ. ೨೦೦೬, ಹಾಸನ ಜಿಲ್ಲೆಯ ಹೊಯ್ಸಳರ ಬಸದಿಗಳು, ಸುಮುಖ ಪ್ರಕಾಶನ, ಬೆಂಗಳೂರು.

೨೭. ಶ್ರೀನಿವಾಸ್ ಎಂ.ಡಿ., ೧೯೮೭, ಮಧುಗಿರಿ ಇತಿಹಾಸ, ಸುಧಾಪ್ರಕಾಶನ, ಮಧುಗಿರಿ.

೨೮. ಶಿವತಾರಕ್ ಕೆ.ಬಿ., ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೯. ಶೇಷಶಾಸ್ತ್ರೀ. ಆರ್.ಬಿ., ೧೯೮೨, ಕರ್ನಾಟಕದ ವೀರಗಲ್ಲುಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೩೦. ದೇವರಕೊಂಡಾರೆಡ್ಡಿ, ೧೯೯೪, ತಲಕಾಡಿನ ಗಂಗರ ದೇವಾಲಯಗಳ ಒಂದು ಅಧ್ಯಯನ, ಕನ್ನಡ ಸಾಹಿತ್ಯ ಷರಿಷತ್, ಬೆಂಗಳೂರು.

೩೧. ಶೀಲಾಕಾಂತ ಪತ್ತಾರ, ೨೦೦೬, ಬಾದಾಮಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೨. ಸುರೇಶ ಕೆ.ಎಂ., ವಾಸುದೇವ ಬಡಿಗೇರ, ಸೋಮಶೇಖರ್ ಎಸ್.ವೈ, ಮೂಡಲಗೇರಿ ಕೊಟ್ರೇಶ್., ೨೦೦೧, ಕರ್ನಾಟಕ ದೇವಾಲಯ ಕೋಶ, ಕೊಪ್ಪಳ ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೩. ಸುರೇಶ ಬಿ., ೨೦೦೯, ಚಿತ್ರದುರ್ಗ–ದಾವಣಗೆರೆ ಜಿಲ್ಲೆಗಳ ದೇವಾಲಯಗಳು, ಸಂಶೋಧನ ಪ್ರಕಾಶನ, ಬಾಲೇನಹಳ್ಳಿ, ಚಳ್ಳಕೆರೆ.

೩೪. ರಮೇಶ ನಾಯಕ, ೨೦೦೭, ಕರ್ನಾಟಕದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನಗಳ ಮರುಚಿಂತನೆ (ಸಂ), ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೫. ನಂದೀಶ್ವರ ಎನ್. ೨೦೦೮, ಶಿರಾ ತಾಲ್ಲೂಕು ದರ್ಶನ, ಪೂರ್ಣ, ಪೂರ್ಣಚಂದ್ರ ತೇಜಸ್ವಿ ಪ್ರಕಾಶನ, ತುಮಕೂರು.

೩೬. ನಂದೀಶ್ವರ ಎನ್., ೨೦೦೮, ಶಿರಾ ತಾಲ್ಲೂಕಿನ ಸ್ಮಾರಕಗಳು ಹಾಗೂ ಶಾಸನಗಳು, ಪೂರ್ಣಚಂದ್ರ ತೇಜಸ್ವಿ ಪ್ರಕಾಶನ, ತುಮಕೂರು.

೩೭. ಚೆನ್ನಸ್ವಾಮಿ ಸೋಸಲೆ ಎನ್., ೨೦೦೪, ಸಾಮ್ರಾಜ್ಯ ಮತ್ತು ಸಂಸ್ಥಾನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೮. ಮೂರ್ತಿ.ಕೆ.ಎಲ್.ಎನ್., ೧೯೯೮, ಕರ್ನಾಟಕದ ಕಲೆ ಮತ್ತು ವಾಸ್ತು ಶಿಲ್ಪ, ರಂಜಿತ ಪ್ರಕಾಶನ, ತುಮಕೂರು.

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

[illegible]

೩೯. ಸುಂದರ ಅ. ಮತ್ತು ಷೇಕ್ ಅಲಿ (ಸಂ), ೧೯೯೪, ಕರ್ನಾಟಕ ಚರಿತ್ರೆ, ಸಂಪುಟ-೧ ಪ್ರಸಾರಾಂಗ ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೦. ಕವಿತಾಕೃಷ್ಣ (ಸಂ), ೨೦೦೨, ಜಯಮಂಗಲಿ, ಕನ್ನಡ ಸಾಹಿತ್ಯ ಪರಿಷತ್ತು-ಬೆಂಗಳೂರು.

೪೧. ಶಿವರಾಮ ಕಾರಂತ, ೧೯೬೯, ಚಾಲುಕ್ಯ ವಾಸ್ತು ಮತ್ತು ಶಿಲ್ಪ, ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು.

೪೨. ಶಿವರಾಮ ಕಾರಂತ, ೧೯೭೫, ಚಿತ್ರಶಿಲ್ಪ-ವಾಸ್ತು ಕಲೆಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ,

೪೩. ರಹಮತ್ ತರೀಕೆರೆ, ೨೦೦೬, ಕರ್ನಾಟಕದ ನಾಥ ಪಂಥ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೪. ಲಕ್ಷ್ಮಣ. ಸಿ.ಎಂ., ೨೦೦೦, ತುಮಕೂರು ಜಿಲ್ಲೆಯ ಭೌಗೋಳಿಕ ಪರಿಸರ ಮತ್ತು ಅಭಿವೃದ್ಧಿ., ದರ್ಶನ ಪ್ರಕಾಶನ, ತುಮಕೂರು.

ಇಂಗ್ಲೀಷ್ ಗ್ರಂಥಗಳು

1. Brown Percy, 1943, Indian Architecture, (Buddhist & Hindu Periods) D,B.Tarapore vale sons And Co, Private Ltd., Bomby.

2. Dhaky. M.A., 1977, The Indian Temple forms in Karantaka inscriptions & Archite cture Abhinava Publications, New Delhi

3. Kamble M.T., 1993, vijaynagara Temples at Hampi, A Study .in Published PH.D. Thesis, Karnataka University, Dharwad

4. Narshimhamurthy A.V., 1978, Arechaeology of Karnataka, Mysore University Mysore.

5. Nilkanta Sastri K.A. 1987, A History of South India, oxfort University Press, Madras.

6. Srinivasan.K.R., 1971, Temples of south India, National Book Trast India, New Delhi

7. Srinivasan. P.R., 1982, The Indian Temple art and Architecture, Prasaranga, Mysore-University, Mysore

8. Annual Report of the Directorate of Archaeology-And Museume in Karnataka. Yes-1929.

9. Epigraphia Carndtica, Val-XVI, Suppleme ntary Inscriptions in the Tumkur District, Published by-Nilakanta Sastni, Mysore Archaeological Survey.

ಲೇಖನಗಳು ಮತ್ತು ಗೆಜೆಟಿಯರ್ಸ್

೧. ಅಪರ್ಣ ಕೂ.ಸಂ., ೧೯೯೦, ದೇವಾಲಯದ ಕಂಬಗಳು ಒಂದು ಅಧ್ಯಯನ, ಇತಿಹಾಸ ದರ್ಶನ, ಸಂಪುಟ-೪, ಸೂರ್ಯನಾಥ ಯು, ಕಾಮಥ್, ಲಕ್ಷ್ಮಣ್ ತೆಲಗಾವಿ (ಸಂ)., ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

೨. ಅಪರ್ಣ ಕೂ.ಸ., ೧೯೯೬, ಶಾಸ್ತ್ರಗ್ರಂಥಗಳಲ್ಲಿ ನಿರೂಪಿತನಾದ ದೇವಾಲಯ ಮೇಲ್ಕಡದ ರಚನೆ, ಇತಿಹಾಸ ದರ್ಶನ, ಸಂಪುಟ-೧೧, ಸೂರ್ಯನಾಥ ಯು. ಕಾಮಥ್, ಕೃಷ್ಣಮೂರ್ತಿ ಪಿ.ವಿ.(ಸಂ), ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು,

೩. ಅಪರ್ಣ ಕೂ.ಸ., ೧೯೯೯, ಶಾಸ್ತ್ರ ಗ್ರಂಥಗಳ ದೃಷ್ಟಿಯಲ್ಲಿ ದೇವಾಲಯದ ಪ್ರಕಾರ ಗೋಪುರಗಳು, ಇತಿಹಾಸ ದರ್ಶನ, ಸಂಪುಟ-೧೪, ನಾಗರಾಜ್ ಎಂ.ಜಿ, ಕೃಷ್ಣಮೂರ್ತಿ ಪಿ.ವಿ(ಸಂ), ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು,

೪. ಅಪರ್ಣ ಕೂ.ಸ., ೧೯೯೮., ವಾಸ್ತುಶಿಲ್ಪ ಶಾಸ್ತ್ರದ ಹಿನ್ನಲೆಯಲ್ಲಿ ದೇವಾಲಯದ ಮಂಟಪಗಳು, ಇತಿಹಾಸದರ್ಶನ, ಸಂಪುಟ-೧೩, ನಾಗರಾಜ ಎಂ.ಜಿ., ಕೃಷ್ಣಮೂರ್ತಿ ಪಿ.ವಿ(ಸಂ)., ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

೫. ಜೋಷಿ ಎಸ್.ಕೆ., ೨೦೦೦, ದೈವಿಕಲ್ಪನೆಯಿಂದ ದೇವಸ್ಥಾನದವರೆಗೆ ಚಿಂತನೆ, ಇತಿಹಾಸ ದರ್ಶನ, ಸಂಪುಟ-೧೫, ನಾಗರಾಜ ಎಂ.ಜಿ., ಕೃಷ್ಣಮೂರ್ತಿ ಪಿ.ವಿ. (ಸಂ)., ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

೬. ಪ್ರಭಾಕರ್ ಎಂ.ಎನ್., ೧೯೯೯, ದೇವಾಲಯಗಳಿಗೊಂದು ವರ್ಗೀಕರಣಶಾಸ್ತ್ರ, ಇತಿಹಾಸದರ್ಶನ, ಸಂಪುಟ-೧೪ ನಾಗರಾಜ ಎಂ.ಜಿ, ಕೃಷ್ಣಮೂರ್ತಿ ಪಿ.ವಿ(ಸಂ), ಕರ್ನಾಟಕ ಇತಿಹಾಸ ಅಕಾಡೆಮಿ ಬೆಂಗಳೂರು.

೭. ತುಮಕೂರು ಸುನಂದಾ, ೧೯೯೪, ತುಮಕೂರು ಜಿಲ್ಲೆಯಲ್ಲಿನ ದೇವಾಲಯಗಳು, ಇತಿಹಾಸದರ್ಶನ, ಸಂಪುಟ-೯, ಸೂರ್ಯನಾಥ್ ಕಾಮತ್, ದೇವರ ಕೊಂಡಾರೆಡ್ಡಿ(ಸಂ), ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

೮. ಕಾವಲಮ್ಮ ಆರ್, ೨೦೦೦ ಮಧುಗಿರಿಗೆ ಸಂಬಂಧಿಸಿದ ಮೆಕೆಂಜಿಯವರ ಅಪ್ರಕಟಿತ ಕೃಷಿಯತ್ತು, ಇತಿಹಾಸ ದರ್ಶನ, ಸಂಪುಟ-೧೫ ನಾಗರಾಜ ಎಂ.ಜಿ, ಕೃಷ್ಣಮೂರ್ತಿ ಪಿ.ವಿ(ಸಂ)., ಕರ್ನಾಟಕ ಇತಿಹಾಸ ಅಕಾಡೆಮಿ, ಬೆಂಗಳೂರು.

೯. ರೈಸ್ ಬಿ.ಎಲ್., ಮೈಸೂರು ಗೆಜೆಟಿಯರ್, ಸಂ.೨, ಮೈಸೂರು ಸರ್ಕಾರ, ಮೈಸೂರು, ೧೮೯೭.

೧೦. ಕಾಮತ್ ಎಸ್.ಯು., ಕರ್ನಾಟಕ ರಾಜ್ಯ ಗೆಜೆಟಿಯರ್, ಭಾಗ-೨ ಮತ್ತು ೩, ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು, ೧೯೮೪, ೧೯೮೬.

೧೧. ಅಭಿಶಂಕರ್ ಕೆ., ಮೈಸೂರು ಗೆಜೆಟಿಯರ್ಸ್, ತುಮಕೂರಿನ ಡಿಸ್ಟ್ರಿಕ್ಟ್, ಕರ್ನಾಟಕ ರಾಜ್ಯ ಸರ್ಕಾರ, ಬೆಂಗಳೂರು, ೧೯೬೯.

ಅಪ್ರಕಟಿತ ಸಂಶೋಧನಾ ಪ್ರಬಂಧಗಳು.

೧. ತಿಪ್ಪೇಸ್ವಾಮಿ ಎಸ್,೨೦೦೪, ರಕ್ಷಣಾ ವಾಸ್ತುಶಿಲ್ಪ, ಚಿತ್ರದುರ್ಗ ಜಿಲ್ಲೆ (ಅಪ್ರಕಟಿತ ಪಿ.ಎಚ್.ಡಿ. ಮಹಾಪ್ರಬಂಧ) ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ತಿಪ್ಪೆಸ್ವಾಮಿ ಹೆಚ್, ೨೦೦೧, ದಾವಣಗೆರೆ ಜಿಲ್ಲೆಯ ದೇವಾಲಯಗಳು(ಅಪ್ರಕಟಿತ ಪಿ.ಎಚ್.ಡಿ. ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಜಯಣ್ಣ ಯು, ೨೦೦೨, ಮೊಳಕಾಲ್ಮೂರು ತಾಲ್ಲೂಕಿನ ಪುರಾತತ್ವೀಯ ಪರಿಸರ(ಅಪ್ರಕಟಿತ ಪಿ.ಎಚ್.ಡಿ. ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ದತ್ತಾತ್ರೇಯ ಜಿ.ಕುಲಕರ್ಣಿ, ೨೦೦೬, ಹಾವೇರಿ ಜಿಲ್ಲೆಯ ತ್ರಿಕೂಟ ದೇವಾಲಯಗಳು (ಅಪ್ರಕಟಿತ ಪಿ.ಎಚ್.ಡಿ. ಮಹಾಪ್ರಬಂಧ), ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಪದಕೋಶ

ಅಧಿಷ್ಠಾನ	-	ದೇವಾಲಯ ಗೋಡೆಗೆ ಆಧಾರವಾಗಿರುವ ಕೆಳಭಾಗ,
ಅರೆಗಂಭ	–	ಗೋಡೆಗಳ ನಡುವಣ ಅರ್ಧಕಂಭ, ಕಂಭದ ಅರ್ಧಭಾಗ, ಗೋಡೆಯಲ್ಲಿ ಸೇರಿದ್ದು, ಉಳಿದ ಭಾಗ ಮಾತ್ರ ಗೋಚರಿಸುತ್ತದೆ.
ಅಂತರಾಳ	–	ಗರ್ಭಗುಡಿ ಮತ್ತು ನವರಂಗದ ಮಧ್ಯಭಾಗ.
ಅಭಯ ಹಸ್ತ	–	ಸಂರಕ್ಷಣಾ ಸೂಚಿ ಹಸ್ತ.
ಕೀರ್ತಿಮುಖ	–	ಅಲಂಕಾರದ ಒಂದು ವಿಧ, ವೈಭವ, ಭವ್ಯತೆಯನ್ನು ಸೂಚಿಸುವ ಅಲಂಕಾರ.
ಕುಮುದ	–	ಅಧಿಷ್ಠಾನದಲ್ಲಿ ಕಂಡುಬರುವ ಅಂಗ,
ಕೋಷ್ಠಗುಡಿ	–	ಮೂರ್ತಿಗಳನ್ನು ಇಡಲು ಚಿಕ್ಕಗೂಡು
ಗರ್ಭಗೃಹ	–	ಮೂಲ ದೇವತಾ ಮೂರ್ತಿ ಇರುವ ದೇವಾಲಯದ ಭಾಗ.
ಗೋಪುರ	–	ಪ್ರದೇಶ ದ್ವಾರದ ಮೇಲಿನ ಮೇಲ್ಕಟ್ಟಡ
ಜಗತಿ	–	ಅಧಿಷ್ಠಾನದ ತಳಹದಿ.
ಡಮರುಗ	–	ಶಿವನ ಕೈಯಲ್ಲಿರುವ ವಾದ್ಯ.
ದ್ವಾರಪಾಲಕರು	–	ಬಾಗಿಲನ್ನು ಕಾಯುವ ಸೇವಕರು.
ದ್ವೀಪಸ್ತಂಭ	–	ವಿಶೇಷ ಸಂದರ್ಭಗಳಲ್ಲಿ ದೀಪ ಹಚ್ಚಲು ನಿಲ್ಲಿಸಿದ ಕಂಬ.
ನಂದಿ ಮಂಟಪ	–	ನಂದಿಗಾಗಿ ಕಟ್ಟಿರುವ ಪ್ರತ್ಯೇಕ ಗುಡಿ.
ಪದ್ಮ	–	ಕಮಲ
ಪದ್ಮಾಸನ	–	ಪದ್ಮದ ಮೇಲೆ ಕುಳಿತಿರುವುದು ಎರಡು ಕಾಲನ್ನು ಒಳಭಾಗಕ್ಕೆ ಮಡಚಿ ಕುಳಿತಿರುವುದು.
ಪ್ರಭಾವಳಿ	–	ಮೂರ್ತಿಗಳ ಬೆನ್ನ ಹಿಂದೆ ಮೂಡಿರುವ ಸುತ್ತಲಿನ ಅಲಂಕಾರಿಕ ಪಟ್ಟಿ

ಪ್ರಕಾರ ಗೋಡೆ	–	ದೇವಾಲಯದ ಸುತ್ತ ಕಟ್ಟಲಾದ ರಕ್ಷಣಾತ್ಮಕ ಗೋಡೆ.
ಮಹಾದ್ವಾರ	–	ಮುಖ್ಯ ಪ್ರವೇಶದ್ವಾರ, ಹೆಬ್ಬಾಗಿಲು
ಮಹಾಮಂಟಪ	–	ನವರಂಗ (ಸಭಾಮಂಟಪ)ಕ್ಕೆ ಹೊಂದಿಕೊಂಡಿರುವ ಉದ್ಧನೆಯ ಭಾಗ.
ಮುಖಮಂಟಪ	–	ಪ್ರವೇಶ ಮಂಟಪ
ಯಾಳಿ	–	ಸಿಂಹ ಮುಖ, ಆನೆಯ ಕೋರೆ ಹಾಗೂ ಸೊಂಡಿಲುಗಳಿರುವ ಕಾಲ್ಪನಿಕ ಪ್ರಾಣಿ
ಲಲಾಟಬಿಂಬ	–	ದ್ವಾರದ ಮಧ್ಯದಲ್ಲಿ ಧಾರ್ಮಿಕ ಪಂಥವನ್ನು ಸೂಚಿಸುವ ಪ್ರತಿಬಿಂಬ ಚಿತ್ರವಿರುವ ಅಲಂಕೃತ ಭಾಗ,
ಲಲಿತಾಸಾನ	–	ಒಂದು ಕಾಲನ್ನು ಇಳಿಬಿಟ್ಟು ಮತ್ತೊಂದು ಕಾಲನ್ನು ಮಡಚಿ ಕುಳಿತಿರುವ ಭಂಗಿ.
ವಿಮಾನ	–	ಗರ್ಭಗೃಹದ ಮೇಲಿನ ಶಿಖರ
ಶಿಖರ	–	ದೇವಾಲಯದ ಗರ್ಭಗೃಹದ ಮೇಲಿನ ರಚನೆ.


ತುಮಕೂರು ಜಿಲ್ಲೆಯ ನಕ್ಷೆ




ಮಧುಗಿರಿ ತಾಲ್ಲೂಕಿನ ನಕ್ಷೆ




ಹರಿಹರೇಶ್ವರ ದೇವಾಲಯದ ತಲನಕ್ಷೆ ಹರಿಹರರೊಪ್ಪ




ಮಲ್ಲೇಶ್ವರ ದೇವಾಲಯದ ತಲನಕ್ಷೆ ಮಧುಗಿರಿ




ರಂಗನಾಥಸ್ವಾಮಿ ದೇವಾಲಯ ತಲನಕ್ಷೆ ತುಂಗೋಟಿ



ವೆಂಕಟರಮಣ ಸ್ವಾಮಿ ದೇವಾಲಯ ಮಧುಗಿರಿ



ಮಲ್ಲಿನಾಥ ದಿಗಂಬರ ಜೈನ ದೇವಾಲಯ ಮಧುಗಿರಿ





ತುಂಗೊಟ್ಟಿಯ ರಂಗನಾಥಸ್ವಾಮಿ ದೇವಾಲಯದ ಹೊರಭಾಗ



ರಂಗನಾಥಸ್ವಾಮಿ ದೇವಾಲಯದ ನವರಂಗ



ತುಂಗೊಟ್ಟಿಯ ರಂಗನಾಥಸ್ವಾಮಿ ದೇವಾಲಯ



ವೀರಭದ್ರೇಶ್ವರ ದೇವಾಲಯದ ನವರಂಗ ಸಿದ್ದಾಪುರ



ವೀರಭದ್ರೇಶ್ವರ ದೇವಾಲಯದ ಮುಂಭಾಗ




ವೀರಭದ್ರೇಶ್ವರ ದೇವಾಲಯದ ಶಿಖರ



ವೀರಾಂಜನೇಯ ದೇವಾಲಯವ ನವರಂಗ



ಬಿಜ್ಜಾವರದಲ್ಲಿರುವ ವೀರಾಂಜನೇಯ ದೇವಾಲಯವ



ಗರ್ಭಗೃಹದಲ್ಲಿರುವ ವೀರಭದ್ರೇಶ್ವರದ ಮೂರ್ತಿಶಿಲ್ಪ ಸಿದ್ದಾಪುರ



ಅಮ್ಮವೇಮಲ್ಲೇಶ್ವರ ದೇವಾಲಯ ಬಸವನಹಳ್ಳಿ



ಅಮ್ಮವೇಮಲ್ಲೇಶ್ವರ ದೇವಾಲಯ ಕಂಬಗಳು



ವೇಣುಗೋಪಾಲಸ್ವಾಮಿ ದೇವಾಲಯ



ಮಲ್ಲಿನಾಥ ದಿಗಂಭರ ಜೈನ ಬಸದಿಯ ಮುಖಮಂಟಪ



ಮಲ್ಲಿನಾಥ ದಿಗಂಭರ ಜೈನ ಬಸದಿಯ ಶಿಖರ



ಮಲ್ಲಿನಾಥ ದಿಗಂಭರ ಜೈನ ಬಸದಿ ಮಧುಗಿರಿ



ಹರಿಹರ ರೊಪ್ಪದಲ್ಲಿರುವ ಹರಿಹರೇಶ್ವರ ದೇವಾಲಯ



ಹರಿಹರೇಶ್ವರ ದೇವಾಲಯ ಶಿಖರ



ಹರಿಹರೇಶ್ವರ ದೇವಾಲಯದ ಗೋಪುರ



ಮಧುಗಿರಿಯಲ್ಲಿರುವ ವೆಂಕಟರಮಣಸ್ವಾಮಿಯ ಗರ್ಭಗೃಹ



ಮಧುಗಿರಿಯಲ್ಲಿರುವ ವೆಂಕಟರಮಣಸ್ವಾಮಿ ದೇವಾಲಯ



ಮಧುಗಿರಿಯ ಮಲ್ಲೇಶ್ವರ ದೇವಾಲಯದ ನವರಂಗದಲ್ಲಿರುವ ಕಂಬ



ಬಿಜ್ಜಾವರದಲ್ಲಿರುವ ಕಾಶಿವಿಶ್ವನಾಥ ದೇವಾಲಯ



ಮಧುಗಿರಿಯ ಮಲ್ಲೇಶ್ವರ ದೇವಾಲಯ



ಬಿಜ್ಜಾವರದ ಗರ್ಭಗೃಹದಲ್ಲಿರುವ ಕಾಶಿವಿಶ್ವನಾಥ

048607

AKSHARA GRANTHALAYA

ACC.NO. 048607

ಗಣಕೀಕರಣ ಆಗಿದೆ.